# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 08–04–2011 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಪಿ.ಎನ್.ಸದಾಶಿವ – ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ, |
| ಕೆ.ಚಂದ್ರಶೇಖರ್ – ಸದಸ್ಯರು | ಮುಖ್ಯಲೆಕ್ಕಾಧಿಕಾರಿ, |
| ಎನ್.ವೀರಣ್ಣ – ಸದಸ್ಯರು | ಉಪ ಆಯುಕ್ತರು (ಭೂಸ್ವಾಧೀನ), |
| ಜಿ.ಮಂಜುನಾಥ ರಾಜು – ಸದಸ್ಯರು | ಉಪ ಕಾನೂನು ಅಧಿಕಾರಿ, |
| ಎಂ.ಜಿ.ಜಯರತ್ನ – ಸದಸ್ಯರು | ಸಹಾಯಕ ಆಯುಕ್ತರು (ಆಸ್ತಿಗಳು), |
| ಶಕೀಲಾ.ಎಂ – ಸದಸ್ಯರು | ಕಂದಾಯ ಅಧಿಕಾರಿ (ಚಾಮರಾಜಪೇಟೆ) |
| ಟಿ.ಎ.ಗಾಯಿತ್ರಿ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಚಾಮರಾಜಪೇಟೆ), (ರಾಜರಾಜೇಶ್ವರಿ ನಗರ), (ದಕ್ಷಿಣ–ಯೋಜನೆ–2), (ಮೂಲಭೂತ ಸೌಕರ್ಯ), (ಗೋವಿಂದರಾಜನಗರ), |
| | ಸಹಾಯಕ ಕಾರ್ಯಪಾಲಕ ಅಭಿಯಂತರರು (ಟಿ.ಇ.ಸಿ) (ಯೋಜನೆ–2), (ರಸ್ತೆ ಅಗಲೀಕರಣ–1), (ಯೋಜನೆ) |
| | ಸಹಾಯಕ ಅಭಿಯಂತರರು (ರಾಜರಾಜೇಶ್ವರಿ ನಗರ–ಬೃಹತ್ ರಸ್ತೆ), (ಟಿ.ಇ.ಸಿ) (ಮೂಲಭೂತ ಸೌಕರ್ಯ), |
| | ಸಹಾಯಕ ಕಂದಾಯ ಅಧಿಕಾರಿ (ಚಾಮರಾಜಪೇಟೆ), |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

**01]. ವಿಷಯದ ಸಂಖ್ಯೆ :–ತೆಆಸ್ಥಾಸ/281/2010–11**

ಆಯುಕ್ತರ ಟಿಪ್ಪಣಿ ದಿನಾಂಕ : 05–03–2011 ರಲ್ಲಿ ವಿವರಿಸಿರುವಂತೆ, ಸಿಟಿ ಮಾರ್ಕೆಟ್ ವೃತ್ತದ ಬಳಿ ಪಾದಚಾರಿ ಸುರಂಗ ಮಾರ್ಗ ನಿರ್ಮಾಣ ಮಾಡುವ ಕಾಮಗಾರಿಯನ್ನು ಗುತ್ತಿಗೆದಾರರಾದ ಮೆ॥ ಮಾರುತಿ ಕನ್ಸ್ಟ್ರಕ್ಷನ್ಸ್ ರವರಿಗೆ ಟರ್ನ್‌ಕೀ ಆಧಾರದ ಮೇಲೆ ವಹಿಸಲಾಗಿದ್ದು ದಿನಾಂಕ : 14–2–2006 ರಂದು ಕರಾರು ಒಪ್ಪಂದ ಮಾಡಿಕೊಂಡು ದಿನಾಂಕ : 21–04–2006 ರಂದು ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಕಾಮಗಾರಿಯ ಅವಧಿ 12 ತಿಂಗಳಾಗಿದ್ದು ಕಾಮಗಾರಿ ಪೂರ್ಣಗೊಳಿಸಬೇಕಾಗಿದ್ದ ದಿನಾಂಕ : 20–4–2007 ಆಗಿರುತ್ತದೆ.

ಸದರಿ ಕಾಮಗಾರಿ ನಡೆಯುವ ಸ್ಥಳದಲ್ಲಿ 900 ಮಿಮಿ ಗಾತ್ರದ ಸ್ಯಾನಿಟರಿ ಕೊಳವೆ ಮಾರ್ಗವು ಅಡ್ಡ ಬಂದಿದ್ದು ಇದನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರಿಂದ ಟೆಂಡರ್ ಕರೆಸಿ ಸ್ಯಾನಿಟರಿ ಕೊಳವೆ ಮಾರ್ಗವನ್ನು ಸ್ಥಳಾಂತರಿಸಲು ತುಂಬಾ ಸಮಯ ತೆಗೆದುಕೊಂಡಿರುತ್ತಾರೆ ಹಾಗೂ ಡಿಸೆಂಬರ್–2010 ರಲ್ಲಿ ಸದರಿ ಸ್ಥಳಾಂತರಿಸುವ ಕಾಮಗಾರಿಯನ್ನು ಪೂರ್ಣಗೊಳಿಸಿ ಕೊಟ್ಟಿರುತ್ತಾರೆ. ಈವರೆವಿಗೂ ಸದರಿ ಕಾಮಗಾರಿಯು ಪ್ರಗತಿಯ ಪಥದಲ್ಲಿ ಸಾಗುತ್ತಿದ್ದು ಈ ಬೇಸಿಗೆ ಕಾಲದಲ್ಲಿ ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

2010–11 ನೇ ಸಾಲಿನ ಆಯವ್ಯಯದಲ್ಲಿ ಸದರಿ ಕಾಮಗಾರಿಯ ಹೆಸರಿದ್ದು ಅನುದಾನ ನೀಡಿರುವುದಿಲ್ಲ ಒಟ್ಟು ಟೆಂಡರ್ ಮೊತ್ತ ರೂ.590 ಲಕ್ಷಗಳಾಗಿದ್ದು ಈವರೆವಿಗೆ ರೂ. **3,02,08,000/–** ಗಳು ಖರ್ಚಾಗಿದ್ದು ಉಳಿದ ರೂ.**2,87,92,000/–**ಗಳು ಅವಶ್ಯಕತೆಯಿರುತ್ತದೆ. ಸದರಿ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಬೇಕಾಗಿರುತ್ತದೆ. ಮಳೆಗಾಲದಲ್ಲಿ ಸುರಂಗ ಮಾರ್ಗದಲ್ಲಿ ನೀರು ತುಂಬಿಕೊಂಡು ಕಾಮಗಾರಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ. 2010–11 ನೇ ಸಾಲಿನ ಆಯವ್ಯಯದಲ್ಲಿ ಶೂನ್ಯ ಅನುದಾನ ನೀಡಿರುವುದರಿಂದ ಸದರಿ ಕಾಮಗಾರಿಯ Re-validation ಮಾಡಲು ಬರುವುದಿಲ್ಲ ಎಂದು ತಿಳಿಸಿರುತ್ತಾರೆ.

ಕಂಡಿಕೆ 190 ರಲ್ಲಿ ಮಾನ್ಯ ಆಯುಕ್ತರು ಒಪ್ಪಿಗೆ ಸೂಚಿಸಿದ್ದು, 2010–11 ನೇ ಸಾಲಿನಲ್ಲಿ ಶೂನ್ಯ ಅನುದಾನ ನೀಡಿರುವುದರಿಂದ ಬೇಕಾಗಿರುವ ಒಟ್ಟು ಮೊತ್ತ ರೂ. **2,87,92,000/–**ಗಳನ್ನು ಪರಿಷ್ಕೃತ ಆಯವ್ಯಯದಲ್ಲಿ ಒದಗಿಸಿಕೊಳ್ಳಲು ಸೂಕ್ತ ಟಿಪ್ಪಣಿಯೊಂದಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಡತವನ್ನು ಮಂಡಿಸುವಂತೆ ಆದೇಶಿಸಿರುತ್ತಾರೆ.

**ಈ ಕೆಳಕಂಡ ಅಂಶಗಳಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಅನುಮೋದನೆಗೆ ಕೋರಲಾಗಿದೆ.**

ಸಿಟಿ ಮಾರ್ಕೆಟ್ ವೃತ್ತದಲ್ಲಿ ಪಾದಚಾರಿ ಸುರಂಗ ಮಾರ್ಗ ನಿರ್ಮಾಣ ಕಾಮಗಾರಿ ಶೇ.60 ರಷ್ಟು ಪೂರ್ಣಗೊಂಡಿದ್ದು ಉಳಿದ ಕಾಮಗಾರಿಯನ್ನು ಬರುವ ಮುಂಗಾರು ಪ್ರಾರಂಭವಾಗುವುದರೊಳಗೆ ಪೂರ್ಣಗೊಳಿಸಬೇಕಾಗಿರುತ್ತದೆ. 2010–11 ನೇ ಸಾಲಿನ ಆಯವ್ಯಯದಲ್ಲಿ ಶೂನ್ಯ ಅನುದಾನ ನೀಡಿರುವುದರಿಂದ ಕಾಮಗಾರಿ ಪೂರ್ಣಗೊಳಿಸಲು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ರೂ.2,87,92,000/– ಗಳನ್ನು ಮೇಲ್ಕಂಡ ಕಾಮಗಾರಿಗೆ ಸೇರ್ಪಡೆಗೊಳಿಸುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ

**ನಿರ್ಣಯ :– ದಿನಾಂಕ : 05–03–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

## 02]. ವಿಷಯದ ಸಂಖ್ಯೆ :–ತೆಆಸ್ಥಾಸ/337/2010–11

ಆಯುಕ್ತರ ಟಿಪ್ಪಣಿ ದಿನಾಂಕ : 25–03–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು, ಪ್ರಧಾನ ಅಭಿಯಂತರರು, ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 8 ವಲಯಗಳಿಲ್ಲಿ ವಿದ್ಯುತ್ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಕಾಮಗಾರಿ ಕ್ರಿಯಾ ಯೋಜನೆ ಪಟ್ಟಿಯನ್ನು ತಯಾರಿಸಿ ರೂ.3,807.27 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಯನ್ನು ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಕಂಡಿಕೆ 22 ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ವಿಷಯ ಸಂಖ್ಯೆ 210/10–11 ದಿನಾಂಕ 10–2–2011 ರಂತೆ ಅನುಮೋದಿಸಿರುತ್ತದೆ.

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕ 22–11–2010ರ ಸಭೆಯ ನಡೆವಳಿ ವಿಷಯ ಸಂಖ್ಯೆ ವಾಸಾಕಾಸಾ/02/10–11 ರಂತೆ ಅನುಮೋದಿಸಿರುತ್ತಾರೆ. ಸದರಿ ನಡವಳಿಯಲ್ಲಿ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರು ಸೂಚಿಸುವ ಕಾಮಗಾರಿಗಳಿಗೆ ರೂ.360.00 ಲಕ್ಷಗಳನ್ನು ಆಯವ್ಯಯ ಲೆಕ್ಕ ಶೀರ್ಷಿಕೆ ಸಂಪೂರ್ಣ ಬೆಂಗಳೂರಿಗೆ ರಸ್ತೆ ದೀಪಗಳು ಅಡಿಯಲ್ಲಿ ನಿಗದಿಪಡಿಸಿರುವ ರೂ.3000.00 ಲಕ್ಷಗಳ ಅನುದಾನದಲ್ಲಿ ನೀಡುವಂತೆ ಮಾನ್ಯ ಆಯುಕ್ತರ ದಿನಾಂಕ 16–11–2010ರ ಟಿಪ್ಪಣಿಯಂತೆ ನಿರ್ಣಯಿಸಲಾಗಿದೆ.

ಆಯವ್ಯಯ ಲೆಕ್ಕ ಶೀರ್ಷಿಕೆಯ ವಿವರಗಳು ಈ ಕೆಳಕಂಡಂತಿದೆ: ಪಿ.1517

| | | |
|---|---|---|
| | ಆಯವ್ಯಯದಲ್ಲಿ ನಿಗಧಿಪಡಿಸಿರುವ ಮೊತ್ತ | 3000.00 |
| | ಕಾಮಗಾರಿ ಸಂಖ್ಯೆ ನೀಡಿರುವುದು | 2433.40 |
| | ಲಭ್ಯವಿರುವ ಅನುದಾನ | 566.60 |

| | | |
|---|---|---|
| | ವಿದ್ಯುತ್ ವಿಭಾಗದ ಎಲ್ಲಾ ವಲಯಗಳ ಪಿ.ಒ.ಡಬ್ಲ್ಯೂಗೆ. | 2660.00 |
| | ವಾರ್ಡ್ ಮಟ್ಟದ ಅಧ್ಯಕ್ಷರು ಸೂಚಿಸುವ ಕಾಮಗಾರಿಗಳಿಗೆ | 360.00 |
| | ಒಟ್ಟು ರೂ. | 3020.00 |

ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 2010–11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿಯಲ್ಲಿ ರೂ.2093.40 ಲಕ್ಷಗಳಿಗೆ ಮಾತ್ರ ಕೋರಲಾಗಿತ್ತು. ವಾರ್ಡ್ ಮಟ್ಟದ ಅಧ್ಯಕ್ಷರು ಸೂಚಿಸುವ ಕಾಮಗಾರಿಗಳಿಗೆ ನಿರ್ಣಯಿಸಲಾದ ಮೊತ್ತ ರೂ.360.00 ಲಕ್ಷಗಳು ಸೇರಿಸುವುದು ಬಿಟ್ಟು ಹೋಗಿರುತ್ತದೆ.

ಆದ್ದರಿಂದ, ರೂ.360.00 ಲಕ್ಷಗಳನ್ನು 2010–11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ದಿನಾಂಕ : 25–03–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ**

## 03]. ವಿಷಯದ ಸಂಖ್ಯೆ :–ತೆಆಸ್ಥಾಸ/338/2010–11

ಆಯುಕ್ತರ ಟಿಪ್ಪಣಿ ದಿನಾಂಕ : 19–03–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ 48 ಮುನೇಶ್ವರನಗರ ಪ್ರದೇಶ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಶೇ. 22.75 ರ ಅನುದಾನದ ಅಡಿಯಲ್ಲಿ ಸುಮಾರು 500 ಮನೆಗಳನ್ನು ನಿರ್ಮಿಸಲು ಕೋರಿ ವಾರ್ಡ್ 48 ರ ನಗರ ಪಾಲಿಕೆ ಸದಸ್ಯರು ದಿನಾಂಕ 01–03–2011ರಂದು ಪತ್ರ ನೀಡಿರುತ್ತಾರೆ (ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ).
ಈ ಮೇರೆಗೆ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ರವರು ಮೇಲೆ ಮೇಲೆ ತಿಳಿಸಿದ ಅನುದಾನದಲ್ಲಿ 500 ಮನೆಗಳನ್ನು ನಿರ್ಮಿಸಲು ರೂ. 15.00 ಕೋಟಿಯ ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಗಳ ವಿವರ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಪ್ರದೇಶ | ಮನೆಗಳ ಸಂಖ್ಯೆ | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಷರಾ |
|---|---|---|---|---|
| 01 | ಮುನೇಶ್ವರ ನಗರ | 70 | 210.00 | ಪ್ರತಿ ಮನೆಗೆ ರೂ.3.00 ಲಕ್ಷಗಳು |
| 02 | ಸದಾಬನಗರ, ಸಂಧ್ಯಾನಗರ | 70 | 210.00 | ಪ್ರತಿ ಮನೆಗೆ ರೂ.3.00 ಲಕ್ಷಗಳು |
| 03 | ಅಂಬೇಡ್ಕರ್‌ನಗರ, ಕಾಫಿಬೋರ್ಡ್ ಕಾಲೋನಿ, ವಿಶ್ವೇಶ್ವರಯ್ಯ ನಗರ | 100 | 300.00 | ಪ್ರತಿ ಮನೆಗೆ ರೂ.3.00 ಲಕ್ಷಗಳು |
| 04 | ಪೆರಿಯಾರ್‌ನಗರ, ಡಿ.ಜೆ.ಹಳ್ಳಿ | 100 | 300.00 | ಪ್ರತಿ ಮನೆಗೆ ರೂ.3.00 ಲಕ್ಷಗಳು |
| 05 | ಗೋವಿಂದಪ್ಪ ಬ್ಲಾಕ್, ಕುಂಪ್ಪಮ್ ಕಾಪೌಂಡ್ | 80 | 240.00 | ಪ್ರತಿ ಮನೆಗೆ ರೂ.3.00 ಲಕ್ಷಗಳು |
| 06 | ಶಿವರಾಜ್ ರಸ್ತೆ, ಎಸ್.ಆರ್.ಬ್ಲಾಕ್ | 80 | 240.00 | ಪ್ರತಿ ಮನೆಗೆ ರೂ.3.00 ಲಕ್ಷಗಳು |
| **ಒಟ್ಟು** | | **500** | **1500.00** | |

ಮೇಲ್ಕಂಡ 500 ಮನೆಗಳನ್ನು ಶೇ.22.75 ರ ಅನುದಾನದ ಅಡಿಯಲ್ಲಿ ಮನೆಗಳನ್ನು ನಿರ್ಮಿಸಿಕೊಡಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ದಿನಾಂಕ : 19–03–2011ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ 150 ಮನೆಗಳನ್ನು (ಒಂದು ನೂರು ಐವತ್ತು ಮನೆಗಳನ್ನು) ನಿರ್ಮಿಸಿಕೊಡಲು ಸಮಿತಿಯು ತೀರ್ಮಾನಿಸಿತು.**

## 04]. ವಿಷಯದ ಸಂಖ್ಯೆ :–ತೆಆಸ್ಥಾಸ/339/2010–11

ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(2)/ಪಿ.ಆರ್/433/10–11, ದಿನಾಂಕ : 21–03–2011 ರಲ್ಲಿ ವಿವರಿಸಿರುವಂತೆ, ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ಇವರಿಗೆ ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ ಪ್ರದೇಶದಲ್ಲಿ ನೀಡಲಾಗಿರುವ ಗುತ್ತಿಗೆ ಕರಾರಿನ ಷರತ್ತು ಪರಿಷ್ಕರಣೆಯ ಕುರಿತು, ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಯುಡಿ 26 ಎಂಎನ್‌ಜಿ 1989 ದಿನಾಂಕ:17–07–1990 ಹಾಗೂ 05–07–1990ರ ಅನುಸಾರ ದಿನಾಂಕ:21–12–1990 ರಿಂದ ಜಾರಿಗೆ ಬರುವಂತೆ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ಲಿಮಿಟೆಡ್ ಇವರಿಗೆ ಮಿಲ್ಲರ್ ಟ್ಯಾಂಕ್ ಬೆಡ್ ಪ್ರದೇಶದಲ್ಲಿ ನಿವೇಶನ ಸಂಖ್ಯೆ 16 "ಇ" ವಿಸ್ತೀರ್ಣ 9300 ಚದರ ಅಡಿ (1666.60 ಚದರ ಗಜ) ಪ್ರದೇಶವನ್ನು 30 ವರ್ಷಗಳ

ಅವಧಿಗೆ ಮಾಸಿಕ ಬಾಡಿಗೆ ರೂ.1800/– ವಿಧಿಸಿ ಕಟ್ಟಡ ನಿರ್ಮಾಣದ ನಂತರ ಶೇ 10% ರಷ್ಟು ಹೆಚ್ಚಿಸಿ ತದನಂತರ ಪ್ರತಿ 5 ವರ್ಷಗಳಿಗೆ ಶೇ 10% ರಷ್ಟು ಹೆಚ್ಚಿಸಿ ಈ ಕೆಳಕಂಡ ಪ್ರಮುಖ ಷರತ್ತಿನ ಮೇಲೆ ಮಂಜೂರಾತಿ ನೀಡಲಾಗಿದೆ. ಷರತ್ತು ಸಂಖ್ಯೆ 4ರ ಅನುಸಾರ ಗುತ್ತಿಗೆದಾರ ಮಂಜೂರು ಮಾಡಲಾದ ನಕ್ಷೆಯ ಅನುಸಾರ ಕಟ್ಟಡವನ್ನು ನಿರ್ಮಿಸತಕ್ಕದ್ದು.

7ನೇ ಷರತ್ತಿನ ಅನುಸಾರ ಗುತ್ತಿಗೆದಾರನು ಯಾವುದೇ ಕಾರಣಕ್ಕೂ ಗುತ್ತಿಗೆ ಜಾಗ ಅದರ ಪ್ರದೇಶವನ್ನು ಮರು ಗುತ್ತಿಗೆಗೆ ನೀಡಬಾರದು.

ಷರತ್ತು 9ರ ಅನುಸಾರ ಗುತ್ತಿಗೆ ನೀಡಿರುವ ಉದ್ದೇಶ ಹೊರತು ಬೇರೆ ಯಾವುದೇ ಉದ್ದೇಶಕ್ಕೂ ಬಳಸಬಾರದು.

ಷರತ್ತು 11ರ ಅನುಸಾರ ಯಾವುದೇ ಷರತ್ತು ಉಲ್ಲಂಘಿಸಿದಲ್ಲಿ ಪಾಲಿಕೆಯೂ ನೋಟೀಸ್ ನೀಡಿ ಗುತ್ತಿಗೆ ಜಾಗ ಮತ್ತು ಅದರಲ್ಲಿರುವ ಕಟ್ಟಡಗಳನ್ನು ಯಾವುದೇ ಪರಿಹಾರವಿಲ್ಲದೇ ಹಿಂಪಡೆಯುವುದು ಎಂಬುದಾಗಿದೆ. ಈ ಗುತ್ತಿಗೆಯ ಅವಧಿ ದಿನಾಂಕ:20–12–2020 ರಲ್ಲಿ ಮುಗಿಯಲ್ಲಿದೆ.

ಗುತ್ತಿಗೆದಾರರು ದಿನಾಂಕ:09–10–2010 ರಲ್ಲಿ ಅರ್ಜಿ ಸಲ್ಲಿಸಿ ದಿನಾಂಕ:06–01–2010 ರಲ್ಲಿ ಪಾಲಿಕೆಯು ಮಂಜೂರಾತಿ ನೀಡಿರುವಂತೆ 5 ಅಂತಸ್ತಿನ ಕಟ್ಟಡ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. ಅವರ ಕಛೇರಿಯ ನಿರ್ವಹಣೆ ಹೊರತುಪಡಿಸಿ ಉಳಿದ ಹೆಚ್ಚುವರಿ ಕಟ್ಟಡವನ್ನು ಬೇರೆ ಪತ್ರಿಕಾ ಉದ್ಯಮಿಗಳಿಗೆ ಆಧ್ಯತೆಯ ಮೇಲೆ ನೀಡಿ ಉಳಿದ ಕಟ್ಟಡವನ್ನು ಇತರೆಯವರಿಗೆ ಬಾಡಿಗೆ ಆಧಾರ ನೀಡಲು ಅನುಮತಿ ನೀಡಲು ಕೋರಿರುತ್ತಾರೆ. ಈ ಸಂಸ್ಥೆ 1947 ರಲ್ಲಿ ಯಾವುದೇ ಲಾಭ ಮತ್ತು ನಷ್ಟವಿಲ್ಲದಂತೆ ನಿರ್ವಹಿಸುವ ಸಂಸ್ಥೆಯಾಗಿದ್ದು, ಆದಾಯ ತೆರಿಗೆ ಮತ್ತು ಸೇವಾ ತೆರಿಗೆಯಿಂದ ವಿನಾಯಿತಿ ಪಡೆದಿರುತ್ತದೆ. ಗುತ್ತಿಗೆ ಕರಾರಿನ ಷರತ್ತು 7ರ ಪ್ರಕಾರ ಗುತ್ತಿಗೆದಾರನೇ ಹೊರತು ಇತರೆದಾರರಿಗೆ ನೀಡಬಾರದೆಂಬ ಷರತ್ತಿನಿಂದ ವಿನಾಯಿತಿ ನೀಡಲು ಸರ್ಕಾರಕ್ಕೆ ಪ್ರಸ್ತಾಪಿಸಬೇಕಾಗಿರುತ್ತದೆ.

ಸ್ಥಳೀಯ ಅಧಿಕಾರಿಗಳು 2 ಮತ್ತು 3ನೇ ಮಹಡಿ ಮಹಾನಗರ ಪಾಲಿಕೆಗೆ ಉಳಿಸಿಕೊಂಡು ಉಳಿದ ಅಂತಸ್ತುಗಳಿಗೆ ಬಾಡಿಗೆ ಹಂಚಿಕೆ ಆಧಾರದ ಮೇಲೆ ಅನುಮತಿ ನೀಡುವ ತೀರ್ಮಾನ ಕೈಗೊಳ್ಳಬೇಕೆಂದು ಪ್ರಸ್ತಾಪಿಸಿರುತ್ತಾರೆ. ಬಾಡಿಗೆ ಹಂಚಿಕೆಗೆ ಸಂಬಂಧಿಸಿದಂತೆ ಸ್ಪಷ್ಟ ಪ್ರಸ್ತಾವನೆ ಸಲ್ಲಿಸಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಪಿಟಿಐ ಸಂಸ್ಥೆಯ ಪ್ರಸ್ತಾವನೆಯನ್ನು ಸೂಕ್ತ ತೀರ್ಮಾನ ಸರ್ಕಾರಕ್ಕೆ ಸಲ್ಲಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

ನಿರ್ಣಯ :– ಕೃಷಿಕ ಸರ್ವೋದಯ ಫೌಂಡೇಶನ್‌ರವರಿಗೆ ವಾರ್ಡ್ ಸಂಖ್ಯೆ 73ರ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ನಗರ ಪಾಲಿಕೆ ಜಾಗದ ಸಂಬಂಧ ಸರ್ಕಾರದ ಪತ್ರದ ಸಂಖ್ಯೆ : ನಅಇ/213/ಎಂಎನ್‌ಜಿ/2005, ದಿನಾಂಕ : 19–05–2006 ರ ಪತ್ರದಲ್ಲಿ ಸದರಿ ಸಂಸ್ಥೆಯವರು ಹಾಲಿ ಕಟ್ಟಡದ ನೆಲ–1 ಮತ್ತು 2ನೇ ಮಹಡಿಗಳ ಪೈಕಿ 671.76 ಚ.ಮೀ ಬಾಡಿಗೆಗೆ ನೀಡುತ್ತಿರುವ ಹಿನ್ನೆಲೆಯಲ್ಲಿ ಮೂಲ ಗುತ್ತಿಗೆದಾರರಿಗೆ ಈಗಾಗಲೇ ನಿಗಧಿಪಡಿಸಿರುವ ಗುತ್ತಿಗೆ ಮೊತ್ತವನ್ನು ಪರಿಷ್ಕರಿಸುವ/ಹೆಚ್ಚಿಸುವ ಷರತ್ತಿಗೊಳಪಟ್ಟು ಗುತ್ತಿಗೆದಾರ ಸಂಸ್ಥೆಯು ಕಟ್ಟಡವನ್ನು ಬಾಡಿಗೆಗೆ ನೀಡುವ ಪ್ರಸ್ತಾವನಗೆ ಸರ್ಕಾರದ ಮಂಜೂರಾತಿ ದೊರೆತ್ತಿದ್ದು, ಅದರಂತೆ ದಿನಾಂಕ 21–03–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ರವರಿಗೆ ಮಿಲ್ಲರ್ ಟ್ಯಾಂಕ್ ಬೆಡ್ ಪ್ರದೇಶದಲ್ಲಿ ನೀಡಿರುವ ನಿವೇಶನ ಸಂಖ್ಯೆ 16 'ಇ' ಸ್ವತ್ತಿಗೂ ವಾರ್ಷಿಕ ಬಾಡಿಗೆ ರೂ.4000/– (ನಾಲ್ಕು ಸಾವಿರ) ಗಳನ್ನು ನಿಗಧಿಪಡಿಸಿ ತದನಂತರ 5 ವರ್ಷಗಳಿಗೊಮ್ಮೆ ಶೇಕಡ 10 ರಷ್ಟು ಹೆಚ್ಚಿಸುವ ಷರತ್ತಿಗೊಳಪಟ್ಟು ಮಂಜೂರಾತಿ ನೀಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

**<u>05]. ವಿಷಯದ ಸಂಖ್ಯೆ :–ತೆಆಸ್ಥಾಸ/340/2010–11</u>**

ಆಯುಕ್ತರ ಟಿಪ್ಪಣಿ ದಿನಾಂಕ : 05–03–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು ಯೋಜನೆ –2 ರವರು Comprehensive development of Herohalli Lake Phase -2 ಕಾಮಗಾರಿಗೆ ರೂ.298.00 ಲಕ್ಷಗಳಿಗೆ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಿದ್ದು, ಕಾಮಗಾರಿ ಸಂಕೇತಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

2010–11ನೇ ಸಾಲಿನ ಆಯವ್ಯಯ ಅಂದಾಜುಗಳು ಅನುಮೋದನೆಯಾಗಿಲ್ಲದ ಇರುವುದರಿಂದ ಸದರಿ ಆಯವ್ಯಯವು ಮಂಜೂರಾದ ನಂತರದಲ್ಲಿ ನಿರ್ದಿಷ್ಟ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಮೊತ್ತವನ್ನು ಸೇರಿಸುವುದಕ್ಕೆ ಒಳಪಟ್ಟು ಈ ಕೆಳಕಗಿನಂತೆ ಕಾಮಗಾರಿ ಸಂಕೇತವನ್ನು ಏಪ್ರಿಲ್ 2010ರ ಮಾಹೆಯಲ್ಲಿ ನೀಡಲಾಗಿರುತ್ತದೆ.

| | | | | | | | |
|---|---|---|---|---|---|---|---|
| **000** | **11** | **N** | **P** | **P** | **O** | **CD** | **001** |

ಮುಂದುವರೆದು, 2010–11ನೇ ಸಾಲಿನ ಆಯವ್ಯಯ ತಯಾರಿಕೆಯ ಸಮಯದಲ್ಲಿ ಆಯವ್ಯಯ ಲೆಕ್ಕ ಶೀರ್ಷಿಕೆ 2010–11ನೇ ಸಾಲಿನ ಆಯವ್ಯಯದಲ್ಲಿ 12 ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ – ಪಿ.ಸಂಖ್ಯೆ ಪಿ2106 – ಹೇರೋಹಳ್ಳಿ ಕೆರೆ ಅಭಿವೃದ್ದಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ.298.00 ಲಕ್ಷಗಳನ್ನು ಚಾಲ್ತಿ ಕಾಮಗಾರಿಯಾಗಿ ಅಳವಡಿಸಿಕೊಳ್ಳಬೇಕಾಗಿತ್ತು. ಆದರೆ 2010–11ನೇ ಸಾಲಿನ ಆಯವ್ಯಯ ತಯಾರಿಕೆಯ ಸಮಯದಲ್ಲಿ ಸದರಿ ಕಾಮಗಾರಿಯ ಅನುದಾನದ ಮೊತ್ತವನ್ನು ಅಳವಡಿಸಿಕೊಂಡಿರುವುದಿಲ್ಲ ಹಾಗೂ ಎಫ್.ಬಿ.ಎ.ಎಸ್.ಗಣಕಕೇಂದ್ರದಲ್ಲಿ ದಾಖಲಿಸಿರುವುದಿಲ್ಲ.

**ಆದ್ದರಿಂದ, ಮೇಲ್ಕಂಡ ಲೆಕ್ಕ ಶೀರ್ಷಿಕೆಯ ಅಡಿಯಲ್ಲಿ 2010–11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕಾಗಿರುತ್ತದೆ.**

**<u>ಆದ್ದರಿಂದ 2010–11ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ 156 ರಲ್ಲಿ 28– ಕಾಮಗಾರಿಗಳು – ಬಂಡವಾಳ ಹೂಡಿಕೆ (28- Engineering- Capital Investment Plan) ಲೆಕ್ಕಶೀರ್ಷಿಕೆಯಲ್ಲಿ ಒದಗಿಸಿರುವ ಅನುದಾನವು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮೊಕದ್ದಮೆ ಇತ್ಯರ್ಥವಾಗದೇ ಇರುವ ಪ್ರಯುಕ್ತ ಕಾಮಗಾರಿಗಳು ಅನುಮೋದನೆಯಾಗದಿರುವುದರಿಂದ ಅನುದಾನ ಪೂರ್ಣ ಪ್ರಮಾಣದಲ್ಲಿ ಬಳಕೆ ಆಗಿರುವುದಿಲ್ಲ. ಈ ಪ್ರಧಾನ ಲೆಕ್ಕ ಶೀರ್ಷಿಕೆಯಲ್ಲಿ ವಿವಿಧ ಉಪ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ರೂ.1000.00</u>** ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ ಇದುವರೆವಿಗೆ **ರೂ.420.34 ಲಕ್ಷಗಳಿಗೆ ಕಾಮಗಾರಿ ಸಂಕೇತ/ಜಾಬ್ ನಂಬರ್ ನೀಡಲಾಗಿದೆ ಹಾಗೂ ರೂ.860.67 ಲಕ್ಷಗಳಿಗೆ ಆದೇಶಕ್ಕೆ ಸಲ್ಲಿಸಿದೆ. <u>ಬಾಕಿ ರೂ.987.19 ಕೋಟಿಗಳ ಅನುದಾನ ಲಭ್ಯವಿರುತ್ತದೆ ಪ್ರಸಕ್ತ ಸಾಲಿನಲ್ಲಿ ಪರಿಷ್ಕೃತ ಆಯವ್ಯಯದಲ್ಲಿ ಮರು ಹೊಂದಾಣಿಕೆಗೆ ರೂ.687.15 ಕೋಟಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿದೆ.</u>**

**<u>ರೂ.300.04 ಕೋಟಿಗಳ ಅನುದಾನ ಲಭ್ಯವಿರುತ್ತದೆ.</u> ಆದ್ದರಿಂದ ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಈ ಕಾಮಗಾರಿಗೆ ನೀಡಲಾಗಿರುವ ಸಂಕೇತದ ಮೊತ್ತವನ್ನು ರೂ.298.00 ಲಕ್ಷಗಳಿಗೆ ಮರು ಹೊಂದಾಣಿಕೆ ಮಾಡಿಕೊಂಡು 2010–11ನೇ**

**ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.**

ನಿರ್ಣಯ :- ದಿನಾಂಕ : 05-03-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ

**06]. ವಿಷಯದ ಸಂಖ್ಯೆ :-ತೆಆಸ್ಥಾಸ/341/2010-11**

ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(1)/ಪಿ.ಆರ್/62/10-11, ದಿನಾಂಕ : 18-01-2011 ರಲ್ಲಿ ವಿವರಿಸಿರುವಂತೆ, ಶ್ರೀ.ಎಂ.ಶ್ರೀನಿವಾಸನ್ ನಂ.22/1, 1ನೇ ಅಡ್ಡರಸ್ತೆ, ವೇಲುಮುರುಗಪುರಂ, ಡಾ॥ ಟಿ.ಸಿ.ರಾಯನ್ ರಸ್ತೆ, ಬೆಂಗಳೂರು ಇವರು ಸದರಿ ಸ್ವತ್ತಿನಲ್ಲಿ ಸುಮಾರು ವರ್ಷಗಳಿಂದ ವಾಸವಾಗಿರುವುದಾಗಿ ತಿಳಿಸಿ ವಾಸದ ದೃಢೀಕರಣಕ್ಕೆ ಸಂಬಂಧಿಸಿದಂತೆ ಪಡಿತರ ಚೀಟಿ, ಪ್ರಮಾಣ ಪತ್ರಗಳು, ಹಾಗೂ ಮತದಾರರ ಪಟ್ಟಿ, ವಿದ್ಯುಚ್ಛಕ್ತಿ ಬಿಲ್ಲುಗಳನ್ನು ಹಾಜರುಪಡಿಸಿ ಸ್ವಾಧೀನಪತ್ರ ನೀಡುವಂತೆ ಕೋರಿರುತ್ತಾರೆ.

ಈ ಸ್ವತ್ತಿನ ಅಳತೆಯು ಪೂರ್ವ ಪಶ್ಚಿಮಕ್ಕೆ 36, ಉತ್ತರ ದಕ್ಷಿಣಕ್ಕೆ 12 ಅಡಿಗಳು ಇದಕ್ಕೆ 22/1 ಎಂದು ನಿವೇಶನದ ಸಂಖ್ಯೆಯನ್ನು ನೀಡಿರುತ್ತಾರೆ ಕಂದಾಯವನ್ನು ಪಾವತಿಸಿಕೊಳ್ಳಲಾಗಿದೆ ಎಂದು ಸಹಾಯಕ ಕಂದಾಯಾಧಿಕಾರಿ ಚಾಮರಾಜಪೇಟೆ ತಮ್ಮ ವರದಿಯನ್ನು ತಿಳಿಸಿರುತ್ತಾರೆ. ಹಾಗೂ ಈ ಹಿಂದೆ ಸ್ವತ್ತಿನ ಅಕ್ಕಪಕ್ಕ ನಗರ ಪಾಲಿಕೆ ಪ್ರದೇಶಗಳಲ್ಲಿ ನಗರ ಪಾಲಿಕೆ ವತಿಯಿಂದ ಸ್ವಾಧೀನ ಪತ್ರವನ್ನು ವಿತರಿಸಿದ್ದು ಸದರಿ ಸ್ವತ್ತಿಗೂ ಸ್ವಾಧೀನ ಪತ್ರವನ್ನು ವಿತರಿಸುವಂತೆ ನಗರ ಪಾಲಿಕೆ ಸದಸ್ಯರು ಶಿಫಾರಸ್ಸು ಪತ್ರವನ್ನು ನೀಡಿದ್ದು ಈ ಮೇರೆಗೆ ಅರ್ಜಿದಾರರಿಗೆ ಸ್ವಾಧೀನ ಪತ್ರವನ್ನು ನೀಡುವ ಬಗ್ಗೆ ಜಂಟಿ ಆಯುಕ್ತರು (ಪಶ್ಚಿಮ) ತಮ್ಮ ವರದಿಯಲ್ಲಿ ಸಲ್ಲಿಸಿರುತ್ತಾರೆ.

ದಿನಾಂಕ: 12-10-2010ರಂದು ಸಹಾಯಕ ಆಯುಕ್ತರು (ಆಸ್ತಿಗಳು) ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ಉಪ ಆಯಕ್ತರು (ಆಸ್ತಿಗಳು) ಸ್ಥಳ ಪರಿಶೀಲನೆ ಮಾಡಲಾಗಿದ್ದು ಪ್ರಸ್ತುತ ಸ್ಥಳದಲ್ಲಿ ಅರ್ಜಿದಾರರಾದ ಶ್ರೀ.ಎಂ.ಶ್ರೀನಿವಾಸನ್ ಎಂಬುವವರು ಅನೇಕ ವರ್ಷಗಳಿಂದ ವಾಸವಾಗಿರುವುದು ದೃಢಪಟ್ಟಿರುತ್ತದೆ ಮತ್ತು ಇವರ ಹೆಸರಿಗೆ ಅನುಭವ ಖಾತೆ ಮಾಡಲಾಗಿದ್ದು ಎಸ್.ಎ.ಎಸ್. ಯೋಜನೆಯಡಿಯಲ್ಲಿ 2008-09 ನೇ ಸಾಲಿನ ಕಂದಾಯವನ್ನು ಪಾವತಿ ಮಾಡಿರುವುದು ಕಂಡು ಬರುತ್ತದೆ.

ಈ ಸ್ವತ್ತು ಪಾಲಿಕೆಯ ಸ್ವತ್ತಾಗಿದ್ದು, ಈ ಸ್ವತ್ತಿನ ಪಕ್ಕದಲ್ಲಿ ಸಾರ್ವಜನಿಕ ಸುಲಭ ಶೌಚಾಲಯವು ಇದೇ ನಕ್ಷೆಯಲ್ಲಿ ತೋರಿಸಿರುವಂತೆ ಜಾಗದ ಅಳತೆಯನ್ನು ಮಾಡಲಾಗಿ ವಾಸ್ತವವಾಗಿ 9x36 ಅಡಿ ಪ್ರದೇಶ ಮಾತ್ರ ಇರುತ್ತದೆ. ಅರ್ಜಿದಾರರು ಧೀರ್ಘಕಾಲದಿಂದ ಅನಧಿಕೃತವಾಗಿ ವಾಸವಾಗಿರುವುದರಿಂದ ಪ್ರಸ್ತುತ ಮಾರುಕಟ್ಟೆ ಬೆಲೆಯನ್ನು ಕಟ್ಟಿಸಿಕೊಂಡು ಸಕ್ರಮಗೊಳಿಸಲು ಸರ್ಕಾರಕ್ಕೆ ಪ್ರಸ್ತಾಪಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತರಲು ಆಯುಕ್ತರು ಅನುಮೋದಿಸಿರುತ್ತಾರೆ.

2007ರ ಮಾರ್ಗಸೂಚಿ ದರದಂತೆ ವಸತಿಗೆ ಚದರ ಅಡಿ ಒಂದಕ್ಕೆ 1200ರೂ ಗಳಾಗಿದ್ದು ಇದರಂತೆ 9x36=324 ಚದರ ಅಡಿಗಳು ಸ್ವತ್ತಿನ ವಿಸ್ತೀರ್ಣವಾಗಿದ್ದು ಅದರಂತೆ 1200x324=3,88,800ರೂ ಬೆಲೆ ಆಗುತ್ತದೆ ಇದರಂತೆ ಹಣವನ್ನು ಕಟ್ಟಿಸಿಕೊಂಡು ಸ್ವಾಧೀನ ಪತ್ರ ನೀಡಲು ಸೂಕ್ತ ತಿರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 18-1-2011 ರ ಟಿಪ್ಪಣಿ ಮಾರ್ಪಡಿಸಿ ಹಾಲಿ ಇರುವ 13-6'' x 36-0'' ಅಡಿಗಳ ಸ್ವತ್ತಿನ ವಿಸ್ತೀರ್ಣಕ್ಕೆ ಸ್ವಾದೀನ ಪತ್ರ

ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 22.02.2011ರ ನಿರ್ಣಯ.

**ನಿರ್ಣಯ :-** **ದಿನಾಂಕ : 18-01-2011ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ಹಾಲಿ ಇರುವ 13-6 x36-0 ಅಡಿಗಳ ಸ್ವತ್ತಿನ ವಿಸ್ತೀರ್ಣಕ್ಕೆ ಸ್ವಾದೀನ ಪತ್ರ ನೀಡಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 22.02.2011ರ ನಿರ್ಣಯವನ್ನು ಒಪ್ಪುತ್ತಾ, ಚದರಡಿ ಒಂದಕ್ಕೆ ರೂ.800/-ಗಳ (ಎಂಟುನೂರು ರೂಪಾಯಿಗಳ) ದರದಂತೆ ಹಣವನ್ನು ಪಾವತಿಸಿಕೊಂಡು ಸ್ವಾಧೀನ ಪತ್ರ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.**

## 07]. ವಿಷಯದ ಸಂಖ್ಯೆ :-ತೆಆಸ್ಥಾಸ/342/2010-11

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/235/10-11, ದಿನಾಂಕ : 28-2-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀಮತಿ ಧನಲಕ್ಷ್ಮಿ ರವರು ಅಂಗವಿಕಲರಾಗಿರುವುದರಿಂದ, ವಾರ್ಡ್ ಸಂಖ್ಯೆ:145, ಕೆಂಗಲ್ ಹನುಮಂತಯ್ಯ ರಸ್ತೆ ಪಕ್ಕದಲ್ಲಿ 4X5 ಅಡಿಗಳ ಜಾಗವನ್ನು ಟೆಲಿಫೋನ್ ಭೂತ್ ನಡೆಸಲು ದಿನಾಂಕ:03-12-1997 ರಿಂದ 3 ವರ್ಷಗಳ ಅವಧಿಗೆ ಮಾಸಿಕ ರೂ.100/- ಕ್ಕೆ ಗುತ್ತಿಗೆಗೆ ನೀಡಲಾಗಿದೆ. ತದನಂತರ, ಮಾಸಿಕ ರೂ.380/-ಕ್ಕೆ ಮುಂದಿನ 3 ವರ್ಷಕ್ಕೆ ಮುಂದುವರೆಸಲಾಗಿರುತ್ತದೆ. ದಿನಾಂಕ:31-12-2003ಕ್ಕೆ ಗುತ್ತಿಗೆ ಅವಧಿಯು ಮುಗಿದಿದ್ದು, 7 ವರ್ಷಗಳ ನಂತರ ನವೀಕರಿಸಲು ಕೋರಿರುತ್ತಾರೆ.

ಈ ಬಗ್ಗೆ ಸ್ಥಳೀಯ ಅಧಿಕಾರಿಗಳು ಗುತ್ತಿಗೆ ಮೊತ್ತ ಪಾವತಿಸದೇ ಇರುವುದರಿಂದ, ಗುತ್ತಿಗೆದಾರರಿಗೆ ದಿನಾಂಕ: 01-01-2000 ರಿಂದ 31-12-2003 ರವರೆಗೆ 3-ವರ್ಷಗಳಿಗೆ ಮಾಸಿಕ ರೂ.380/- ಗಳಂತೆ 13680/- ಹಾಗೂ ದಿನಾಂಕ:01-01-2004 ರಿಂದ ದಿನಾಂಕ:01-01-2010 ರವರೆಗೆ 2007ರ ಇತ್ತೀಚಿನ ಸರ್ಕಾರದ ಮಾರ್ಗಸೂಚಿ ಮೌಲ್ಯದಂತೆ, ಮಾಸಿಕ ಗುತ್ತಿಗೆ ಹಣ ರೂ.1400/- ಸೇರಿ, ರೂ.1,14,480/- ಆಗಲಿದ್ದು, ಪಾವತಿಸುವಂತೆ ಹಿಂಬರಹ ನೀಡಲಾಗಿ, ಅರ್ಜಿದಾರರು ಕೌಟುಂಭಿಕ ಕಾರಣಗಳಿಂದ ಬಳಲುತ್ತಿದ್ದು, ಈ ದುಬಾರಿ ಮೊತ್ತವನ್ನು ಮನ್ನಾಗೊಳಿಸುವಂತೆ ಕೋರಿರುವುದರಿಂದ ಹಾಗೂ ಗುತ್ತಿಗೆ ನವೀಕರಿಸುವ ವಿಚಾರದಲ್ಲಿ ಆದೇಶ ಕೋರಿ ಕಡತ ಮಂಡಿಸಿರುತ್ತಾರೆ.

ಶ್ರೀಮತಿ.ಧನಲಕ್ಷ್ಮಿರವರು ಬಡ ಅಂಗವಿಕಲಳು ಹಾಗೂ ವಿಧವೆಯಾಗಿದ್ದು, ಹಾಗೂ ನನ್ನ ಮಗಳು ಮತ್ತು ಪತಿ 2004ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ಈ ಸಮಸ್ಯೆಗಳಿಂದ 2004 ರಿಂದ ಅಂಗಡಿ ನಡೆಸಿರುವುದಿಲ್ಲ. ಆದುದರಿಂದ, ಅಂಗವಿಕಲಳು ಹಾಗೂ ವಿಧವೆಯಾಗಿರುವುದರಿಂದ, ದಿನಾಂಕ:01-01-2000 ರಿಂದ ದಿನಾಂಕ: 31-12-2003ರವರೆಗೆ ರೂ.380/- ಹಾಗೂ ನವೀಕರಣಕ್ಕೆ ಅರ್ಜಿ ಸಲ್ಲಿಸಿದ ದಿನಾಂಕದಿಂದ ಗುತ್ತಿಗೆ ಹಣವನ್ನು ಅಂಗವಿಕಲಳಾಗಿರುವುದರಿಂದ, ರಿಯಾಯಿತಿ ದರದಲ್ಲಿ ನಿಗಧಿಪಡಿಸಿ, ಗುತ್ತಿಗೆ ನವೀಕರಣ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಈ ಮಧ್ಯ ಅವಧಿಯ ಗುತ್ತಿಗೆ ಹಣವನ್ನು ಕರುಣೆಯಿಂದ ಮನ್ನಾ ಮಾಡಲು ಕೋರಿರುತ್ತಾರೆ.

ಆಯುಕ್ತರ ಸುತ್ತೋಲೆ ದಿನಾಂಕ:01-03-2002ರಲ್ಲಿ ಅಂಗವಿಕಲರಿಗೆ ಗುತ್ತಿಗೆ ಹಣದಲ್ಲಿ ರಿಯಾಯಿತಿ ನೀಡಬಹುದೆಂದಿದೆ. ಆದುದರಿಂದ, ಅರ್ಜಿದಾರರು ಕೋರಿರುವಂತೆ ಗುತ್ತಿಗೆಯನ್ನು ಕರಾರುಪತ್ರ ನೊಂದಾಯಿಸಿದ ದಿನಾಂಕದಿಂದ 3 ವರ್ಷಗಳ ಅವಧಿಗೆ ನವೀಕರಿಸಲು ಹಾಗೂ ಈ ಮಧ್ಯೆ ಅವಧಿಯ ಗುತ್ತಿಗೆ ಹಣ ಮನ್ನಾ ಹಾಗೂ ಗುತ್ತಿಗೆ ಹಣ ರಿಯಾಯಿತಿ ದರದಲ್ಲಿ ನಿಗಧಿಪಡಿಸುವ ಪ್ರಸ್ತಾವನೆಯನ್ನು ಸ್ಥಾಯಿಸಮಿತಿಗಳ ಮುಂದೆ ನಿರ್ಣಯಕ್ಕಾಗಿ ಪ್ರಸ್ತಾಪಿಸಲು ಅಭಿಪ್ರಾಯಿಸಲಾಗಿದೆ.

ಈ ಮೇಲಿನ ಹಿನ್ನೆಲೆಯಲ್ಲಿ ಶ್ರೀಮತಿ.ಧನಲಕ್ಷ್ಮಿರವರಿಗೆ ಮುಂದಿನ 3 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಹಾಗೂ ಗುತ್ತಿಗೆ ಹಣ ನಿಗಧಿಪಡಿಸುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾದ ಆಯುಕ್ತರ ದಿನಾಂಕ : 28-2-2011 ರ ಟಿಪ್ಪಣಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 15.03.2011ರ ನಿರ್ಣಯ.

**ನಿರ್ಣಯ :- ದಿನಾಂಕ : 28-02-2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 15.03.2011ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.500/- ಗಳಂತೆ (ಐದುನೂರು ರೂಪಾಯಿಗಳಂತೆ) ಗುತ್ತಿಗೆ ಹಣವನ್ನು ನಿಗಧಿಪಡಿಸಿ ಮೂರು ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## 08]. ವಿಷಯದ ಸಂಖ್ಯೆ :-ತೆಆಸ್ಥಾಸ/343/2010-11

ಆಯುಕ್ತರ ಟಿಪ್ಪಣಿ ದಿನಾಂಕ : 18-03-2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು, ಕಾರ್ಯಪಾಲಕ ಅಭಿಯಂತರರು ಬೃಹತ್ ರಸ್ತೆಗಳು ಬೊಮ್ಮನಹಳ್ಳಿ ವಿಭಾಗದ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

| ಕ್ರ.ಸ | ಕಾಮಗಾರಿಗಳ ವಿವರಗಳು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | Comprehensive development and rehabilitation of 11th main and 24th main roads from 30th cross Jayanagar, 4th Block to 15th ORR junction of J.P.Nagar | 500.00 |
| 2 | Comprehensive development and rehabilitation of 9th, 10th main road and cross roads around Commercial complex 4th Block, Jayanagar | 357.00 |
| | Total Rs. | 857.00 |

ಕಂಡಿಕೆ ಸಂಖ್ಯೆ 56 ರಲ್ಲಿ ಆಯವ್ಯಯ ಪುಟ ಸಂಖ್ಯೆ 119 ರಲ್ಲಿನ ಜಯನಗರ ವಿಧಾನ ಸಭಾ ಕ್ಷೇತ್ರದಲ್ಲಿ 3ನೇ ಮತ್ತು 4ನೇ ಬಡಾವಣೆಯ (ವಾರ್ಡ್ 169) ಜಯನಗರ ಕಾಂಪ್ಲೆಕ್ಸ್ ಹಾಗೂ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿ ಕಾಮಗಾರಿಗಳು ಪಿ.ಸಂಖ್ಯೆ 2325/119 ರಲ್ಲಿ ರೂ.200.00 ಲಕ್ಷಗಳನ್ನು ಮಾತ್ರ ಮೀಸಲಿರಿಸಿದೆ. ಬಾಕಿ ಮೊತ್ತ ರೂ.657.00 ಲಕ್ಷಗಳನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಗಳಿಗೆ ಮೀಸಲಿಡುವ ಷರತ್ತಿಗೆ ಒಳಪಟ್ಟು ಎರಡು ಕಾಮಗಾರಿಗಳಿಗೆ ಒಟ್ಟು ರೂ.857.00 ಲಕ್ಷಗಳಿಗೆ ಕಾಮಗಾರಿ ಸಂಕೇತವನ್ನು ನೀಡುವಂತೆ ಕೋರಿರುತ್ತಾರೆ.

ಮಾನ್ಯ ಆಡಳಿತಗಾರರ ದಿನಾಂಕ 16-1-2010ರ ನಡವಳಿಗಳ ವಿಷಯ ಸಂಖ್ಯೆ 484/2009-10 ರಂತೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳ ಮೊತ್ತ ರೂ.857.00 ಲಕ್ಷಗಳ ಕಾಮಗಾರಿಗಳಿಗೆ ಕಾಮಗಾರಿ ಸಂಕೇತ ನೀಡಬೇಕಾಗಿರುತ್ತದೆ. ಆದ್ದರಿಂದ, ಹೆಚ್ಚುವರಿಯಾಗಿ ಅಗತ್ಯವಿರುವ ರೂ.657.00 ಲಕ್ಷಗಳನ್ನು 2010-11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಂಡು ಒಟ್ಟು ರೂ.857.00 ಲಕ್ಷಗಳಿಗೆ ಎರಡು ಕಾಮಗಾರಿಗಳಿಗೆ, ಕಾಮಗಾರಿ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :- ಜಯನಗರ 11ನೇ ಮುಖ್ಯ ರಸ್ತೆ ಕೂಲ್ ಜಾಯಿಂಟ್ ನಿಂದ ಹೊರವರ್ತುಲ ರಸ್ತೆ ಜೆ.ಪಿ.ನಗರ ವರೆಗೆ ಹಾಗೂ 9ನೇ ಮುಖ್ಯರಸ್ತೆಯನ್ನು ಜಯನಗರ ವರ್ತುಲ ರಸ್ತೆಯ ವರೆಗೆ ಸಮಗ್ರವಾಗಿ ರಸ್ತೆ, ಚರಂಡಿ, ಪಾದಚಾರಿ ಮಾರ್ಗ, ಡಾಂಬರಿಕರಣ ಮತ್ತು ಮಳೆನೀರಿನ ಕೊಳ್ಳಿನೊಂದಿಗೆ ಅಭಿವೃದ್ಧಿ ಪಡಿಸುವ ಕಾಮಗಾರಿಗಳಿಗೆ 2010-11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಪುಟ ಸಂಖ್ಯೆ : 128 ಪಿ2019 ರಲ್ಲಿ ಅನುದಾನವನ್ನು ಒದಗಿಸಲಾಗಿರುವುದರಿಂದ ಆಯುಕ್ತರ ದಿನಾಂಕ : 18-03-2011ರ ಟಿಪ್ಪಣಿಯನ್ನು ಮಾರ್ಪಡಿಸಿ ವಾರ್ಡ್ ಸಂಖ್ಯೆ : 169 ರ ಸದಸ್ಯರವರ ಕೋರಿಕೆ ಮೇರಗೆ 3ನೇ ಮತ್ತು 4ನೇ ಬ್ಲಾಕ್ ಜಯನಗರ ರಸ್ತೆಗಳ ಮತ್ತು ಪಾದಚಾರಿ ಮಾರ್ಗಗಳು, ಡಾಂಬರಿಕರಣ ಹಾಗೂ ಮಳೆ ನೀರಿನ ಕೊಳ್ಳಿನ ಅಭಿವೃದ್ಧಿ ಕಾಮಗಾರಿಗಳಿಗೆ ರೂ.857.00 ಲಕ್ಷಗಳ ಬದಲಾಗಿ ರೂ.400.00 ಲಕ್ಷಗಳನ್ನು 2011-12ನೇ ಸಾಲಿನ ಆಯವ್ಯದಲ್ಲಿ ಮುಂದುವರೆದ ಕಾಮಗಾರಿಗೆ ಮೀಸಲಿಡುವ ಷರತ್ತಿಗೆ ಒಳಪಟ್ಟು ಕಾಮಗಾರಿ ಸಂಖ್ಯೆ ನೀಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.***

## 09]. ವಿಷಯದ ಸಂಖ್ಯೆ :-ತೆಆಸ್ಥಾಸ/344/2010-11

ಆಯುಕ್ತರ ಟಿಪ್ಪಣಿ ದಿನಾಂಕ : 21-03-2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ 47 ರ ದೇವರಜೀವನಹಳ್ಳಿ ಪ್ರದೇಶವು ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಹೆಚ್ಚು ಜನ ಸಂದಣಿ ವಾರ್ಡಾಗಿದ್ದು, ಪರಿಶಿಷ್ಟ ಜಾತಿಗೆ ವರ್ಗೀಕೃತವಾಗಿರುತ್ತದೆ. ಸದರಿ ವಾರ್ಡ್ ಮೂಲಭೂತ ಸೌಕರ್ಯಗಳಿಂದ

ವಂಚಿತವಾಗಿರುತ್ತದೆ. ದೇವರ ಜೀವನಹಳ್ಳಿ ವಾರ್ಡಿಗೆ ಮಾನ್ಯ ಉಪ ಮಹಾಪೌರರು, ಅಧ್ಯಕ್ಷರು ಸಾಮಾಜಿಕ ನ್ಯಾಯಾ ಸ್ಥಾಯಿ ಸಮಿತಿ ಮತ್ತು ಲ್ಯಾಂಬೆತ್ ನಗರದ (ಯುನೈಟೆಡ್ ಕಿಂಗ್‌ಡಮ್) ಮಹಾಪೌರರು ಸಹಾ ಇತ್ತಿಚಿನ ದಿನಗಳಲ್ಲಿ ಬೇಟಿ ನೀಡಿ ಬಹಳ ಹಿಂದುಳಿದ ವಾರ್ಡಾಗಿರುವುದಾಗಿ ದಿನಾಂಕ : 11–02–2011 ರಂದು ವಾರ್ಡ್ ಸದಸ್ಯರು ಪತ್ರ ಮುಖೇನ ಕೋರಿರುತ್ತಾರೆ.

ಈ ವಾರ್ಡಿನಲ್ಲಿ ಆರ್ಥಿಕವಾಗಿ ಹಿಂದುಳಿದವರು, ಪರಿಶಿಷ್ಟಜಾತಿ ಮತ್ತು ಪಂಗಡದವರು ವಾಸವಾಗಿದ್ದು, ರಸ್ತೆ ಮತ್ತು ಮೋರಿ ಬಹಳ ದುಸ್ಥಿತಿಯಲ್ಲಿದ್ದು, ವಾಹನ ಸಂಚಾರಕ್ಕೆ ಮತ್ತು ಪಾದಚಾರಿ ಸಂಚಾರಕ್ಕೆ ಬಹಳ ತೊಂದರೆಯಾಗಿದೆ. ಬಹಳ ವರ್ಷದಿಂದ ಯಾವುದೇ ಅಭಿವೃದ್ಧಿಯಾಗಿಲ್ಲ, ನೀರು ಮತ್ತು ಒಳಚರಂಡಿ ವ್ಯವಸ್ಥೆ ಇಲ್ಲ, ಕುಡಿಯಲು ನೀರಿಲ್ಲ, ಚರಂಡಿ ವ್ಯವಸ್ಥೆ ಇಲ್ಲ. ಆದ್ದರಿಂದ ದೇವರ ಜೀವನಹಳ್ಳಿ ವಾರ್ಡ್‌ನ್ನು ಹಿಂದುಳಿದ ವಾರ್ಡ್ ಎಂದು ಘೋಷಿಸಿ, ಈ ವಾರ್ಡ್ ಸಮಗ್ರ ಅಭಿವೃದ್ಧಿಗಾಗಿ 2011–12ನೇ ಸಾಲಿನ ಆಯವ್ಯಯದಲ್ಲಿ ಸೇರಿಸಿ ಸಮಗ್ರ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್‌ನಲ್ಲಿ ತೆಗೆದುಕೊಳ್ಳಬೇಕಾಗಿ ಹಾಗೂ ವಿಶೇಷ ಅನುದಾನವನ್ನು ಮೀಸಲಿಡಬೇಕಾಗಿ ಮತ್ತು ಸಮಗ್ರ ಅಭಿವೃದ್ಧಿಗೆ ಈ ಕೆಳಕಂಡ ಕಾಮಗಾರಿಗಳಿಗೆ ಅನುದಾನವನ್ನು ಮಂಜೂರು ಮಾಡಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

| Sl. No | Particulars | Estimate Amount |
|---|---|---|
| 1 | Improvements Roads | 25000000.00 |
| 2 | Improvements to Road Side drains andfootpaths & SWD | 45000000.00 |
| 3 | Construction of Culverts at various cross roads | 3000000.00 |
| 4 | Construction of Concrete Roads | 5000000.00 |
| 5 | Construction of Play Ground | 6000000.00 |
| 6 | Construction of Community Hall | 25000000.00 |
| 7 | Construction of 100 Bed Hospital | 40000000.00 |
| 8 | Construction of Muton & Fish market | 7500000.00 |
| 9 | Under Ground Drainage | 23500000.00 |
| | Sub Total Rs. | 180000000.00 |
| 10 | Add 3% Contingencies | 5400000.00 |
| 11 | DPR Preparation Charges @ 1.5% | 2700000.00 |
| | Sub Total Rs. | 188100000.00 |
| 12 | Miscellaneous & Rounding off | 900000.00 |
| | **Total Cost Rs.** | **18,90,00,000.00** |

<u>ನಿರ್ಣಯ :–</u> <u>2011–12ನೇ ಸಾಲಿನ ಆಯವ್ಯಯದಲ್ಲಿ ಪರಿಗಣಿಸಬಹುದೆಂದು ಸಮಿತಿಯು ತೀರ್ಮಾನಿಸಿತು.</u>

## 10]. ವಿಷಯದ ಸಂಖ್ಯೆ :–ತೆಆಸ್ಥಾಸ/345/2010–11

ಆಯುಕ್ತರ ಟಿಪ್ಪಣಿ ದಿನಾಂಕ : 23–03–2011 ರಲ್ಲಿ ವಿವರಿಸಿರುವಂತೆ, ಶ್ರೀ ಬಾಲ ಮುರುಗನ್, ಅಧ್ಯಕ್ಷರು, ಮಾರ್ಗ ಜ್ಯೋತಿ ಕ್ಷೇಮಾಭಿವೃದ್ಧಿ ಟ್ರಸ್ಟ್, ನಂ. 755, ಡಿ4 ತ್ಯಾಗಿ ನಗರ, ಕೆ.ಎಸ್. ಸಿ. ಬಿ. ಕ್ವಾರ್ಟಸ್, ಲಕ್ಷ್ಮೀ ದೇವಿ ನಗರ, ನಂದಿನಿ ಬಡಾವಣೆ ಅಂಚೆ, ಬೆಂಗಳೂರು – 560096 ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಮಾರ್ಗಜ್ಯೋತಿ ಅಂಧರ ಕ್ಷೇಮಾಭಿವೃದ್ಧಿ ಸಂಸ್ಥೆಯು ಪ್ರಾರಂಭವಾಗಿ 5 ವರ್ಷವಾಗಿದ್ದು, ತಮ್ಮ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರೆಲ್ಲ ಅಂಧರಾಗಿದ್ದು, ತಮ್ಮ ಸಂಸ್ಥೆ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರ್ವಹಿಸಲಿದ್ದು, ಈ 5 ವರ್ಷದಲ್ಲಿ ಯಾವುದೇ ಸಂಘ ಸಂಸ್ಥೆಯಲ್ಲೇ ಆಗಲಿ ಸರ್ಕಾರದಲ್ಲೆ ಆಗಲಿ ನಮಗೆ ಯಾರ ಸಹಾಯವೂ ಸಿಕ್ಕಿಲ್ಲವೆಂದು, ತಮ್ಮ ಸಂಘವನ್ನು ನೆಡೆಸಲು ಕಛೇರಿ ಇಲ್ಲದ ಕಾರಣ ಪಾಲಿಕೆ ವತಿಯಿಂದ ಒಂದು ಕಛೇರಿಯನ್ನು ಮತ್ತು ವಾದ್ಯ ಗೋಷ್ಠಿಗೆ ಬೇಕಾಗಿರುವ ಸಲಕರಣೆಗಳನ್ನು ಒದಗಿಸಿ ಕೊಡಬೇಕೆಂದು ಕೋರಿರುತ್ತಾರೆ.

2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ವಿವಿಧ ಸಂಘ ಸಂಸ್ಥೆಗಳಿಗೆ ಈಗಾಗಲೇ ಹಂಚಿಕೆಯಾಗಿರುತ್ತದೆ. ಕೌನ್ಸಿಲ್ ಸಭೆಯಲ್ಲಿ ಅನುಮೋದನೆಯಾಗಿರುವ ಅನುದಾನಗಳನ್ನು ಬಿಟ್ಟು ಇನ್ನು ಮುಂದೆ ಬರುವ ಸಹಾಯಾನುಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯತೆ ಇರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :–** **ದಿನಾಂಕ : 23–03–2011ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ, ಸಂಘ ಸಂಸ್ಥೆಗಳಿಗೆ 2010–11ರ ಪರಿಷ್ಕೃತ ಆಯವ್ಯದಲ್ಲಿ ಮರು ಹೊಂದಾಣಿಕೆ ಮಾಡಿರುವ ಅನುದಾನದಾನದಲ್ಲಿ ರೂ.10,000/– (ಹತ್ತು ಸಾವಿರ) ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## 11]. ವಿಷಯದ ಸಂಖ್ಯೆ :–ತೆಆಸ್ಥಾಸ/346/2010–11

ಆಯುಕ್ತರ ಟಿಪ್ಪಣಿ ಸಂಖ್ಯೆ : ಸಕಂಅ(ಶಿನ)/ಪಿಆರ್/78/1991–92, ದಿನಾಂಕ:09–12–2010 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:90 (ಹಳೆಯದು–81) ರ ಹಲಸೂರು ಕೆರೆಯಲ್ಲಿ ದೋಣಿ ವಿಹಾರ ಶುಲ್ಕ ವಸೂಲಾತಿಯ ಹಕ್ಕನ್ನು ಗುತ್ತಿಗೆ ಮೇರೆಗೆ ದಿನಾಂಕ:1–7–2007 ರಿಂದ 30–6–2008 ರವರೆಗೆ ಒಂದು ವರ್ಷದ ಅವಧಿಗೆ ವಾರ್ಷಿಕ ಗುತ್ತಿಗೆ ಹಣ ರೂ.1,50,000/– ಗಳನ್ನು ನಿಗಧಿಪಡಿಸಿ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ನೀಡಲಾಗಿತ್ತು. ಸದರಿ ಗುತ್ತಿಗೆ ಅವಧಿ ಮುಗಿನ ನಂತರ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ದೋಣಿ ವಿಹಾರವನ್ನು ಸ್ಥಗಿತಗೊಳಿಸಲು ದಿನಾಂಕ:21–8–2008, 20–10–2008 ಮತ್ತು 25–9–2009 ರಂದು ಅಂತಿಮ ತಿಳುವಳಿಕೆ ಪತ್ರಗಳನ್ನು ನೀಡಲಾಗಿರುತ್ತದೆ. ಸದರಿಯವರು ದಿನಾಂಕ:30–6–2008 ರವರೆಗಿನ ಗುತ್ತಿಗೆ ಮೊತ್ತವನ್ನು ದಿನಾಂಕ:27–10–2007 (ರೂ.50,000/–) ಗಳು 1–9–2008 (ರೂ.50,000/–) ಗಳು ಮತ್ತು ದಿನಾ: 8–9–2009 ರಂದು ರೂ.50,000/–) ಗಲನ್ನು ಪಾವತಿ ಮಾಡಿರುತ್ತಾರೆ.

ದಿನಾಂಕ: 25–8–2010 ರಂದು ಗುತ್ತಿಗೆ ನೀಡಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸ್ವತ್ತುಗಳ ಸಂರಕ್ಷಣೆಗೆ ರಚಿಸಿರುವ ಸಮಿತಿಯು ಜಂಟಿ ಆಯುಕ್ತರು (ಪೂರ್ವ) ರವರ ಕಛೇರಿಯಲ್ಲಿ ಸಭೆಯನ್ನು ಆಯೋಜಿಸಿದ್ದು, ಸಭೆಯ ನಂತರ ನಡೆಸಿದ ತಪಾಸಣೆ ಕಾರ್ಯದ ವೇಳೆ ಹಲಸೂರು ಕೆರೆಯನ್ನು ತಪಾಸಣೆ ಮಾಡಿದ ವೇಳೆಯಲ್ಲಿ ದೋಣಿ ವಿಹಾರವನ್ನು ಸದರಿ ಸಂಸ್ಥೆಯವರು ನಡೆಸುತ್ತಿರುವುದು ಕಂಡು ಬಂದಿದ್ದು, ಈ ಬಗ್ಗೆ ಗುತ್ತಿಗೆ ಅವಧಿ ಮುಗಿದ ನಂತರವೂ ಸಹ ದೋಣಿ ವಿಹಾರವನ್ನು

ನಡೆಸುತ್ತಿರುವುದನ್ನು ಆಕ್ಷೇಪಿಸಿರುತ್ತಾರೆ. ಸದರಿ ಸಂಸ್ಥೆಯವರಿಗೆ ಗುತ್ತಿಗೆ ಅವಧಿ ಮುಗಿದ ನಂತರ ದೋಣಿ ವಿಹಾರವನ್ನು ನಡೆಸಲು ಅಧಿಕೃತವಾಗಿ ಯಾವುದೆ ಅನುಮತಿಯನ್ನು ನೀಡಿಲ್ಲವೆಂಬುದನ್ನು ಸಮಿತಿಯ ಗಮನಕ್ಕೆ ತರಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತಯ ರವರು ದಿನಾಂಕ:13–9–2010 ರಂದು ಪತ್ರ ಸಲ್ಲಿಸಿ ದೋಣಿ ವಿಹಾರವನ್ನು ನಡೆಸಲು ಅನುಮತಿಯನ್ನು ಹಾಗೂ ಗುತ್ತಿಗೆ ಅವಧಿಯನನು 10 ವರ್ಷಕ್ಕೆ ಮುಂದುವರೆಸಲು ಕೋರಿರುತ್ತಾರೆ.

ದಿನಾಂಕ:14–9–2010 ರಂದು ಜಂಟಿ ಆಯುಕ್ತರು (ಪೂರ್ವ) ರವರು ವ್ಯವಸ್ಥಾಪಕ ನಿರ್ದೇಶಕರ ಕೋರಿಕೆಯನ್ನು ಪರಿಗಣಿಸಬಹುದೆಂದು ಸೂಚಿಸಿದ್ದು, ಹಾಗೂ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:21–9–2010 ರಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಮನವಿಯನ್ನು ಪರಿಗಣಿಸಿ, ದೋಣಿ ವಿಹಾರದ ಗುತ್ತಿಗೆಯನ್ನು ದಿನಾಂಕ:1–7–2008 ರಿಂದ 5 ವರ್ಷಗಳಿಗೆ ವಿಸ್ತರಿಸಿ ವಾರ್ಷಿಕ ಗುತ್ತಿಗೆ ಮೊತ್ತವನ್ನು ರೂ.2,00,000/– (ರೂ. ಎರಡು ಲಕ್ಷಗಳನ್ನು ಮಾತ್ರ) ಗಳಿಗೆ ನಿಗದಿಪಡಿಸಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗೆ ಮಂಡಿಸಬಹುದೆಂದು ಸೂಚಿಸಿದ್ದು, ಮಾನ್ಯ ಆಯುಕ್ತರು ದಿನಾಂಕ:23–9–2010 ರಂದು ಅನುಮೋದಿಸಿರುತ್ತಾರೆ.

1. ಕೆ.ಎಸ್.ಟಿ.ಡಿ.ಸಿ. ಸಂಸ್ಥೆಯು ದೋಣಿ ವಿಹಾರಗಳ ಸಂರಕ್ಷಣೆ ಕುರಿತು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು. ತಪ್ಪಿದ್ದಲ್ಲಿ ಸಂಸ್ಥೆಯನ್ನೇ ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.
2. ಬೃಹತ್ ಬೆಂಗಳೂರು ಮಹಾನಗರ ಪಾಲಕೆಯ ಕಂದಯ ಇಲಾಖೆ ವತಿಯಿಂದ ವಿಧಿಸುವ ಶುಲ್ಕವನ್ನು ಕಾಲಕಾಲಕ್ಕೆ ಪಾವತಿಸುವುದು.
3. ದೋಣಿ ವಿಹಾರ ಕೇಂದ್ರದ ಸ್ವಚ್ಛತೆಯನ್ನು ಕಾಪಾಡುವುದು.
4. ವಾಕಿಂಗ್ ಮತ್ತು ಗಾಳಿ ಸೇವನೆಗಾಗಿ ಬರುವ ಸಾರ್ವಜನಿಕರಿಗೆ ದೋಣಿ ವಿಹಾರ ಚಟುವಟಿಕೆಯಿಮದ ಯಾವುದೇ ತೊಂದರೆಯಾಗದಂತೆ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು.
5. ಎಂ.ಇ.ಜಿ. ರಕ್ಷಣಾ ಇಲಾಖೆ, ತೋಟಗಾರಿಕೆ ಸಿಬ್ಬಂದಿ ಹಾಗೂ ಕಾಮಗಾರಿಕೆ ಇಲಾಖೆಗಳೊಂದಿಗೆ ಸಹಕರಿಸುವುದು ಹಾಗೂ ಕೆರೆಯ ಶುಚಿತ್ವ ಮತ್ತು ಹೂಳೆತ್ತುವ (Deweeding) ಸಲುವಾಗಿ ದೋಣಿಯನ್ನು ಒದಗಿಸುವುದು.

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಒಂದು ಸರ್ಕಾರದ ಅಧೀನ ಸಂಸ್ಥೆಯಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸಂಸ್ಥೆ ಎಂಬ ಅಂಶವನ್ನು ಗಣನೆಗೆ ತೆಗೆದುಕೊಂಡು ಕೆರೆಯ ದೋಣಿ ವಿಹಾರ ಶುಲ್ಕ ವಸೂಲಾತಿಯ ಹಕ್ಕಿನ ಗುತ್ತಿಗೆಯನ್ನು 2 ಹಸಿರು ಮನೆಗಳು ಮತ್ತು ದ್ವಿಪಸೇರಿ ದಿನಾಂಕ:01–07–2008 ರಿಂದ 5 ವರ್ಷಗಳ ಅವಧಿಗೆ ಮಾತ್ರ ಅಂದರೆ ದಿನಾಂಕ:01–7–2008 ರಿಂದ 31–08–2013 ರವರೆಗೆ ಹಾಲಿ ಇರುವ ರೂ.1,50,000/– ರಿಂದ ರೂ.2,00,000/– ಗಳಿಗೆ ಹೆಚ್ಚಿಸಿ ವಾರ್ಷಿಕ ಗುತ್ತಿಗೆ ಹಣವನ್ನು ನಿಗದಿಪಡಿಸಿ ಗುತ್ತಿಗೆ ನವೀಕರಣದ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:09–12–2010 ರ ಟಿಪ್ಪಣಿ. ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 15.03.2011ರ ನಿರ್ಣಯ.

**ನಿರ್ಣಯ :– ದಿನಾಂಕ : 09–12–2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 15–03–2011ರ ನಿರ್ಣಯವನ್ನು ಒಪ್ಪಿದೆ. ಹಾಗೂ 5ವರ್ಷಗಳ ಅವಧಿಗೆ ಗುತ್ತಿಗೆ ನವಿಕರಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## 12]. ವಿಷಯದ ಸಂಖ್ಯೆ :–ತೆಆಸ್ಥಾಸ/347/2010–11

ಆಯುಕ್ತರ ಟಿಪ್ಪಣಿ ಸಂಖ್ಯೆ ಎಲ್ ಎಕ್ಯೂ/ಪಿಆರ್/35/2010–11, ದಿನಾಂಕ:24–02–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.187 ರ ಸಾರಕ್ಕಿ ಕೆರೆ ಪ್ರದೇಶದಲ್ಲಿ 2007ರಲ್ಲಿ ಬಿದ್ದ ಭಾರಿ ಮಳೆಯಿಂದ ಹಲವಾರು ಮನೆಗಳು ಜಲಾವೃತಗೊಂಡು ಜನಜೀವನ ಅಸ್ತವ್ಯಸ್ತಗೊಂಡ ಹಿನ್ನೆಲೆಯಲ್ಲಿ ಮಳೆ ನೀರು

ಸುಗಮವಾಗಿ ರಾಜಕಾಲುವೆ ಮೂಲಕ ಸಾಗುವ ಸಂಬಂಧ ಸಾರಕ್ಕಿ ಕೆರೆಯಿಂದ ಪುಟ್ಟೇನಹಳ್ಳಿ, ಬಿಳೇಕಹಳ್ಳಿ, ಮಡಿವಾಳ ಕೆರೆ ಮಾರ್ಗವಾಗಿ ಕಣಿವೆ ಕೆ209, ಕೋರಮಂಗಲ ರವರೆಗೆ ಬೃಹತ್ ಮಳೆ ನೀರುಗಾಲುವೆಯನ್ನು ಪುನರು–ಜ್ಜೀವನಗೊಳಿಸುವ ಕಾಮಗಾರಿಗಾಗಿ ಸಾರಕ್ಕಿ ಕೆರೆ ಗ್ರಾಮದ ಈ ಕೆಳಗೆ ಕಾಣಿಸಿರುವ ಸರ್ವೆ ನಂಬರ್ ಸ್ವತ್ತು/ಆಸ್ತಿಗಳನ್ನು ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಅರಕೆರೆ ಉಪವಿಭಾಗರವರು ಹಾಗೂ ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆ ನೀರುಗಾಲುವೆ, ಬೊಮ್ಮನಹಳ್ಳಿ ವಲಯರವರುಗಳು ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ ಇವರ ಮುಖಾಂತರ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಈ ಕಾಮಗಾರಿ/ಯೋಜನೆಗೆ 23 ಸ್ವತ್ತುಗಳು ಒಳಪಡುವುದಾಗಿ ತಿಳಿಸಲಾಗಿದ್ದು, ಈ ಪೈಕಿ ಮಹಮ್ಮದ್ ರಫೀಕ್ ರವರಿಗೆ ನ್ಯಾಯಾಲಯದ ಆದೇಶದಂತೆ ಈಗಾಗಲೇ ಶೇ.80 ರಷ್ಟು ಭೂಪರಿಹಾರವನ್ನು ವಿತರಿಸಲಾಗಿದೆ, ಉಳಿದ ಶೇ. 20 ರಷ್ಟು ಭೂಪರಿಹಾರವನ್ನು ವಿತರಿಸಲು ಕ್ರಮವಹಿಸಲಾಗಿದೆ. ಹಾಗೂ ಶ್ರೀ.ವೆಂಕಟೇಶ್‌ರೆಡ್ಡಿ ಮತ್ತು ಶ್ರೀ ನಾರಾಯಣಸ್ವಾಮಿಯವರಿಗೆ ಟಿ.ಡಿ.ಆರ್ ನೀಡುವುದರ ಬಗ್ಗೆ ಕಡತಗಳ ಪ್ರಸ್ತಾವನೆಯನ್ನು ತಯಾರಿಸಲಾಗುತ್ತಿದೆ. ಇನ್ನು ಉಳಿದ ಶ್ರೀ ಕೃಷ್ಣಪ್ಪ, ಶ್ರೀ. ಶ್ರೀನಿವಾಸ್, ಶ್ರೀಅರುಣಕುಮಾರ್ ರವರುಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಇವರ ಸ್ವತ್ತುಗಳ ಭೂಸ್ವಾಧೀನ ಪ್ರಸ್ತಾವನೆಯನ್ನು ಸದ್ಯಕ್ಕೆ ತೆಗೆದುಕೊಂಡಿಲ್ಲವೆಂದು ಕಾರ್ಯಪಾಲಕ ಅಭಿಯಂತರರು ಬೃಹತ್ ಮಳೆ ನೀರುಗಾಲುವೆ ಬೊಮ್ಮನಹಳ್ಳಿ ವಲಯರವರು ವರದಿ ನೀಡಿರುತ್ತಾರೆ.

ಈ ಪ್ರಕರಣದ ಆಸ್ತಿಗಳ ಸ್ಥಳ ತನಿಖೆಯನ್ನು ಉಪ ಆಯುಕ್ತರು (ಭೂಸ್ವಾಧೀನ) ರವರು ವಿಶೇಷ ಭೂಸ್ವಾಧೀನಾಧಿಕಾರಿರವರೊಂದಿಗೆ ದಿನಾಂಕ: 08–09–2010 ರಂದು ನಡೆಸಿರುತ್ತಾರೆ. ಆ ಸಮಯದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಅರಕೆರೆ ಉಪ–ವಿಭಾಗ, ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆ ನೀರುಗಾಲುವೆ, ಬೊಮ್ಮನಹಳ್ಳಿ ವಲಯ, ಪಾಲಿಕೆ ವಾರ್ಡ್‌ನ ಸದಸ್ಯರು ಹಾಗೂ ವಲಯದ ಮೋಜಣಿದಾರರು ಹಾಜರಿರುತ್ತಾರೆ. ಹಾಗೂ ಸ್ಥಳ ತನಿಖೆಯಿಂದ ಈ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಅವಶ್ಯಕತೆ ಇದೆಯೆಂದು ವರದಿ ಮಾಡಲಾಗಿದೆ.

ಸಾರಕ್ಕಿ ಕೆರೆ, ಪುಟ್ಟೇನಹಳ್ಳಿ, ಪ್ರದೇಶದಲ್ಲಿನ ಬೃಹತ್ ಮಳೆ ನೀರಿನಿಂದ ಅಲ್ಲಿನ ಜನಜೀವನ ಅಸ್ತವ್ಯಸ್ತಗೊಂಡ ಪ್ರಯುಕ್ತ ಮಳೆ ನೀರು ಸುಗಮವಾಗಿ ಹರಿದು ಹೋಗಲು ಹಾಲಿ ಇರುವ ರಾಜಕಾಲುವೆಯನ್ನು ಅಗಲ ಮಾಡಲು ಹಾಗೂ ಪುನರ್ ನಿರ್ಮಾಣ ಮಾಡುವ ಕಾಮಗಾರಿಗಾಗಿ ಈ ಕೆಳಕಂಡ ಸ್ವತ್ತು/ಆಸ್ತಿಗಳನ್ನು ಭೂಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆ ಇರುತ್ತದೆಂದು ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ. ರವರು ಸಹ ಶಿಫಾರಸ್ಸು ಮಾಡಿರುತ್ತಾರೆ.

## ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತುಗಳ ವಿವರಗಳ ಈ ಕೆಳಕಂಡಂತೆ ಇರುತ್ತವೆ.

| ಕ್ರ. ಸಂ. | ಭೂಸ್ವಾಧೀನಕ್ಕೆ ಒಳಪಟ್ಟ ಆಸ್ತಿಯ/ಸ್ವತ್ತಿನ ಮಾಲೀಕರ/ಅನುಭವದಾರರ ಹೆಸರು | ಗ್ರಾಮದ ಹೆಸರು | ಸರ್ವೆ ನಂ. | ಆಸ್ತಿ ಸಂಖ್ಯೆ | ಖಾತಾ ಸಂ. | ಸ್ವತ್ತಿನ ತರಹೆ (ನಿವೇಶನ+ ಕಟ್ಟಡ ಇತ್ಯಾದಿ) | ಭೂಸ್ವಾಧೀನತೆಗೆ ಒಳಪಟ್ಟಿರುವ ವಿಸ್ತೀರ್ಣ | | ನಿವೇಶನ ಮೌಲ್ಯ | ಕಟ್ಟಡ ಮೌಲ್ಯ | ಒಟ್ಟು |
|---|---|---|---|---|---|---|---|---|---|---|---|
| | | | | | | | ಚ.ಅಡಿ ಗಳಲ್ಲಿ | ಚ.ಮೀ. ಗಳಲ್ಲಿ | | | |
| 1. | ಶ್ರೀ ವಿ.ಶ್ರೀನಿವಾಸ್ ರೆಡ್ಡಿ ಬಿನ್ ಎಸ್.ಎ.ವೆಂಕಟಸ್ವಾಮಿ ರೆಡ್ಡಿ | ಸಾರಕ್ಕಿ ಕೆರೆ | 24/1ಎ | – | – | ನಿವೇಶನ | 990 | 91.97 | 13,86,000 | – | 13,86,000 |
| 2. | ಶ್ರೀಮತಿ ಎನ್.ಲಕ್ಷ್ಮೀ ಕೋಂ. ರಾಮು | ಸಾರಕ್ಕಿ ಕೆರೆ | 24/1ಎ | 1ನೇಸಂ. ಸೈಟ್ | – | ನಿವೇಶನ | 1200 | 111.48 | 16,80,000 | – | 16,80,000 |
| 3. | ಶ್ರೀ ವೇಣುಗೋಪಾಲ ರೆಡ್ಡಿ ಎಸ್.ವಿ ಬಿನ್ ಎಸ್.ಎ.ವೆಂಕಟಸ್ವಾಮಿ ರೆಡ್ಡಿ | ಸಾರಕ್ಕಿ ಕೆರೆ | 24/1ಡಿ | 24/1/6/7 /8/9 | – | ನಿವೇಶನ | 2220 | 206.23 | 31,08,000 | – | 31,08,000 |
| 4. | ಶ್ರೀ ಟಿ.ಗೋವಿಂದ ರೆಡ್ಡಿ ಬಿನ್ ಲೇಟ್ ಮುನಿರೆಡ್ಡಿ | ಸಾರಕ್ಕಿ ಕೆರೆ | 24/1ಇ | – | – | ನಿವೇಶನ | 2130 | 197.87 | 29,82,000 | – | 29,82,000 |
| 5 . | ಶ್ರೀ ರಾಮನ್ ಬಿನ್ ರಾಮಕೃಷ್ಣನಾಯ್ಡು | ಸಾರಕ್ಕಿ ಕೆರೆ | 24/4 | – | – | ನಿವೇಶನ | 1050 | 97.545 | 14,70,000 | – | 14,70,000 |
| 6 6 | ಶ್ರೀ ಭೈರಪ್ಪ ಬಿನ್ ಲೇಟ್ ಭೈರಪ್ಪ | ಸಾರಕ್ಕಿ ಕೆರೆ | 24/1ಇ | – | – | ನಿವೇಶನ | 300 | 27.87 | 4,20,000 | – | 4,20,000 |
| 7. | ಶ್ರೀ ಲೋಕನಾಥನ್ ಬಿನ್ ಗಣೇಶ್ | ಸಾರಕ್ಕಿ ಕೆರೆ | 24/3 | 24/3/66 | – | ಆರ್.ಸಿ.ಸಿ ಕಟ್ಟಡ | 720 | 66.89 | 10,08,000 | 16,40,996 | 26,48,996 |
| 8. | ಶ್ರೀಮತಿ ರೆಡ್ಡಮ್ಮ ಕೋಂ. ಹೆಚ್.ಬಿ ರೆಡ್ಡಪ್ಪ | ಸಾರಕ್ಕಿ ಕೆರೆ | – | 6/6/14/1/ 1 | – | ನಿವೇಶನ | 108 | 10.03 | 1,51,200 | – | 1,51,200 |
| 9. | ಶ್ರೀ ಪಿ.ಶ್ರೀ ರಾಮಯ್ಯ ಬಿನ್ ಲಕ್ಷ್ಮೀ ನಾರಾಯಣಯ್ಯ | ಸಾರಕ್ಕಿ ಕೆರೆ | – | 37 | 12/2 | ಆರ್.ಸಿ.ಸಿ ಕಟ್ಟಡ | 240 | 22.29 | 3,36,000 | 2,88,180 | 6,24,180 |
| 10. | ಶ್ರೀ ಮಹಮದ್ ಶಫೀ ಬಿನ್ ಅಬ್ದುಲ್ ಬಷೀರ್ | ಸಾರಕ್ಕಿ ಕೆರೆ | – | 39 | 12/2 | ಆರ್.ಸಿ.ಸಿ ಕಟ್ಟಡ | 504 | 46.82 | 7,05,600 | 3,51,642 | 10,57,242 |

| | | | | | | | | | | | |
|---|---|---|---|---|---|---|---|---|---|---|---|
| 11. | ಶ್ರೀ ಹೆಚ್.ಆರ್. ಪ್ರಕಾಶ್ ಬಿನ್ ರಾಜಪ್ಪ | ಸಾರಕ್ಕಿ ಕೆರೆ | – | 1 | 10/3 | ಆರ್.ಸಿ.ಸಿ ಕಟ್ಟಡ | 352 | 32.70 | 4,92,800 | 1,18,346 | 6,11,146 |
| 12 | ಶ್ರೀ ಶೇಕ್ ಸಿರಾಜುದ್ದೀನ್ ಬಿನ್ ಶೇಕ್ ಅಬ್ದುಲ್ ಖಾದರ್ | ಸಾರಕ್ಕಿ ಕೆರೆ | – | 9 | 24/1, ಸಿ.ಎಂ .ಸಿ. ಹೊಸ ಖಾತಾ ನಂ. 189 | ನಿವೇಶನ | 1100 | 102.19 | 15,40,000 | – | 15,40,000 |
| 13. | ಶ್ರೀ ಮಹಮದ್ ಅಕ್ಬರ್ ಬಿನ್ ಹಾಜಿ ಅಬ್ದುಲ್ ವಹಾಬ್ | ಸಾರಕ್ಕಿ ಕೆರೆ | – | 1 | 10/2 | ನಿವೇಶನ | 483 | 44.87 | 6,76,200 | – | 6,76,200 |
| 14 | ಶ್ರೀ ಮಹಮದ್ ಅಕ್ಬರ್ ಬಿನ್ ಹಾಜಿ ಅಬ್ದುಲ್ ವಹಾಬ್ | ಸಾರಕ್ಕಿ ಕೆರೆ | – | 1ಎ | 7 ಮತ್ತು 9 | ನಿವೇಶನ | 420 | 39.01 | 5,88,000 | – | 5,88,000 |
| 15. | ಶ್ರೀ ಕೆ.ಚಂದ್ರಶೇಖರ್ ಬಿನ್ ಲೇಟ್ ಸುಬ್ರಮಣಿ ನಾಯ್ಡು | ಸಾರಕ್ಕಿ ಕೆರೆ | – | 9 | 24/1 | ನಿವೇಶನ | 440 | 40.87 | 6,16,000 | – | 6,16,000 |
| 16. | ಶ್ರೀ ಎಮ್.ಗೋವಿಂದ ರಾಜು ಬಿನ್ ಲೇಟ್ ಎಮ್.ವಿ ರಾಜು | ಸಾರಕ್ಕಿ ಕೆರೆ | 4/1 | 4/1/ಎ1 | 4/1/ಎ1 | ಆರ್.ಸಿ.ಸಿ ಕಟ್ಟಡ | 3682'8' (–)1089 2594 | 240.98 | 36,31,600 | 11,94,962 | 48,26,562 |
| 17. | ಶ್ರೀ ಶಶಿಕಲಾ ಕೋಂ. ಅಂಗಡಿ ನಾಗರಾಜು | ಸಾರಕ್ಕಿ ಕೆರೆ | – | 4 | 24/1/24/2 | ನಿವೇಶನ | 63 | 5.85 | 88,200 | – | 88,200 |
| **ಒಟ್ಟು** | | | | | | | **14914** | **1385.465** | **2,08,79,600** | **35,94,126** | **2,44,73,726** |

**1894ರ ಭೂಸ್ವಾಧೀನ ಕಾಯ್ದೆಯನ್ವಯ ಈ ಆಸ್ತಿಗಳಿಗೆ ಸರ್ಕಾರದ ಮಾರ್ಗ ಸೂಚಿ ಬೆಲೆಯನ್ವಯ ಪಾವತಿಸಬೇಕಾದ ಪರಿಹಾರ ಇತರೆ ವೆಚ್ಚಗಳು ಈ ಕೆಳಗಿನಂತೆ ಇರುತ್ತವೆ.**

| 'ಅ' | | |
|---|---|---|
| **ಮಾರ್ಗಸೂಚಿ ಬೆಲೆ ಚ.ಅ. 1ಕ್ಕೆ 1,400/–ರೂ.ಗಳಂತೆ** | | |
| ಭೂಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ 14,914 ಚ.ಅ (1385.465 ಚ.ಮೀ) X 1,400 ರೂ. | 2,08,79,600 | **2,44,73,726** |
| ಭೂಸ್ವಾಧೀನಪಡಿಸಿಕೊಳ್ಳುವ ಕಟ್ಟಡಗಳ ಮೊಬಲಗು | 35,94,126 | |
| ಈ ಮೊಬಲಗಿಗೆ 1894 ಭೂಸ್ವಾಧೀನ ಕಾಯ್ದೆಯನ್ವಯ ಕಲಂ 23(1)(ಎ) ರನ್ವಯ, ಮಾರುಕಟ್ಟೆ ಬೆಲೆಯ ಮೇಲೆ ಸಾಲಿಯಾನ ಶೇ.12 ಹೆಚ್ಚುವರಿ ಮಾರುಕಟ್ಟೆ ಬೆಲೆ 1 ವರ್ಷಕ್ಕೆ | | 29,36,847 |
| 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ದ ಭತ್ಯೆ, ಶೇ. 30 ರಂತೆ | | 73,42,118 |
| | **ಒಟ್ಟು** | --------------------<br>**3,47,52,691**<br>-------------------- |

| 'ಆ' | |
|---|---|
| **ಇತರೇ ವೆಚ್ಚಗಳು** | |
| ಸಿಬ್ಬಂದಿ ವೆಚ್ಚ ಶೇ.10 ರಷ್ಟು | 34,75,269 |
| ಆಡಿಟ್ ವೆಚ್ಚ ಶೇ.1 ರಷ್ಟು | 3,47,527 |
| ಪ್ರಕಟಣಾ ವೆಚ್ಚ (ಅಂದಾಜು) | 2,00,000 |
| **ಒಟ್ಟು** | **40,22,796** |
| **(ಅ+ಆ)** | **3,87,75,487** |

ಮೇಲ್ಕಂಡ ಸ್ವತ್ತುಗಳ ಭೂಪರಿಹಾರದ ಮೊತ್ತವು **(ಅ+ಆ) ಒಟ್ಟು** ರೂ.3,87,75,487 **(ಮೂರು ಕೋಟಿ ಎಂಬತ್ತೇಳು ಲಕ್ಷ ಎಪ್ಪತ್ತೈದು ಸಾವಿರದ ನಾಲ್ಕು ನೂರ ಎಂಬತ್ತೇಳು ರೂ ಮಾತ್ರ)**

ಮೇಲ್ಕಂಡ ಸ್ವತ್ತುಗಳನ್ನು 1894 ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಆಗುವ ಭೂಪರಿಹಾರದ ಮತ್ತು ಇತರೆ ವೆಚ್ಚಗಳು ಸೇರಿ **ಒಟ್ಟು** ರೂ.**3,87,87,487 (ಮೂರು ಕೋಟಿ ಎಂಬತ್ತೇಳು ಲಕ್ಷ ಎಪ್ಪತ್ತೈದು ಸಾವಿರದ ನಾಲ್ಕು ನೂರ ಎಂಬತ್ತೇಳು ರೂ ಮಾತ್ರ)** ಗಳನ್ನು 2010–11 ನೇ ಸಾಲಿನ ಆಯವ್ಯಯದಲ್ಲಿ ಭರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಮಂಡಿಸಲಾದ ಆಯುಕ್ತರ ದಿನಾಂಕ:24–02–2011 ರ ಟಿಪ್ಪಣಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 15.03.2011ರ ನಿರ್ಣಯ.

**ನಿರ್ಣಯ :– ದಿನಾಂಕ : 24–02–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 15.03.2011ರ ನಿರ್ಣಯವನ್ನು ಒಪ್ಪಿದೆ.**

## 13]. ವಿಷಯದ ಸಂಖ್ಯೆ :–ತೆಆಸ್ಥಾಸ/348/2010–11

ಆಯುಕ್ತರ ಟಿಪ್ಪಣಿ ದಿನಾಂಕ : 29–03–2011 ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 106ರಲ್ಲಿ ಕುಡಿಯುವ ನೀರಿಗಾಗಿ ಕೊಳವೆ ಬಾವಿ ಕೊರೆಯುವ ಕಾಮಗಾರಿಗೆ ಸಂಬಂಧಿಸಿದಂತೆ ಅಂದಾಜು ಮೊತ್ತ ರೂ. 10.50 ಲಕ್ಷಗಳಿಗೆ ಜಾಬ್ ನಂಬರ್ ನೀಡಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಪಾಲಿಕೆಯ ಪ್ರತಿ ವಾರ್ಡ್‌ಗೆ ಗರಿಷ್ಟ ಮೂರು ಕೊಳವೆ ಬಾವಿಗಳನ್ನು ಕೊರೆದು ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ನಡವಳಿಗಳು ಸಂಖ್ಯೆ ಸಾನ್ಯಾಸ್ಥಾಸ/28/10–11 ದಿನಾಂಕ 21–2–2011 ರಲ್ಲಿ ತೀರ್ಮಾನಿಸಲಾಗಿದೆ.

2010–11 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ ಹಾಗೂ ಆಯವ್ಯಯ ಅನುಮೋದನೆ ಆದ ನಂತರ ಶೇ 22.75% ಕಾಮಗಾರಿಗಳು ಪಿ1878 ಲೆಕ್ಕಶೀರ್ಷಿಕೆಯಡಿ ರೂ. 6974.59 ಲಕ್ಷಗಳಿಗೆ ಕಾಮಗಾರಿ ಸಂಕೇತ ಮತ್ತು ಜಾಬ್ ನಂಬರ್ ನೀಡಲಾಗಿದ್ದು, ಹೆಚ್ಚುವರಿಯಾಗಿ ರೂ. 5234.59 ಲಕ್ಷಗಳಿಗೆ ಜಾಬ್ ನಂಬರ್ ನೀಡಲಾಗಿದೆ. ಶೇ 22.75% ರ ಕಾಮಗಾರಿಗಳು ಪಿ1878 ಲೆಕ್ಕಶೀರ್ಷಿಕೆಯಡಿ ರೂ. 1740.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮನೆಗಳ ನಿರ್ಮಾಣ ಮತ್ತು ಅಗತ್ಯ ಇತರೆ ಕಾಮಗಾರಿಗಳ ಅನುಷ್ಠಾನಗೊಳಿಸುವ ದೃಷ್ಟಿಯಿಂದ ಹೆಚ್ಚುವರಿಯಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಸಾರ್ವಜನಿಕ ಹಿತದೃಷ್ಟಿಯಿಂದ ಮೇಲ್ಕಂಡ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿದ್ದು, ಸದರಿ ಮೊತ್ತ ರೂ. 10.25 ಲಕ್ಷಗಳನ್ನು 2010–11 ರ ಆಯವ್ಯಯದ ಅಂತ್ಯದಲ್ಲಿ ಇತರೆ ಲೆಕ್ಕಶೀರ್ಷಿಕೆಗಳಿಂದ ಉಳಿತಾಯವಾಗುವ ಅನುದಾನವನ್ನು ಶೇ 22.75% ಕಾಮಗಾರಿಗಳು ಪಿ1878 ಲೆಕ್ಕಶೀರ್ಷಿಕೆಗೆ ಮರುಹೊಂದಾಣಿಕೆ ಮಾಡಿಕೊಳ್ಳಬಾಕಾಗಿದೆ. ಆದ್ದರಿಂದ ಕಾಮಗಾರಿಗೆ ಬೇಕಾಗುವ ಜಾಬ್ ನಂಬರ್ ನೀಡಿ ಕಾಮಗಾರಿಯನ್ನು ನಿರ್ವಹಿಸಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ದಿನಾಂಕ : 29–03–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 14]. ವಿಷಯದ ಸಂಖ್ಯೆ :–ತೆಆಸ್ಥಾಸ/01/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)44/10–11, ದಿನಾಂಕ : 31–03–2011 ರಲ್ಲಿ ವಿವರಿಸಿರುವಂತೆ, ಶ್ರೀ ಎ. ಮಂಜುನಾಥ, ಬೆಂಗಳೂರು ವಿಭಾಗಿ ಸಂಚಾಲಕರು, ದಲಿತ ಸಂಘರ್ಷ ಸಮಿತಿ, ನಂ. 126, 1ನೇ ಕ್ರಾಸ್, ಬೃಂದಾವನ ನಗರ, ತಾವರೇಕೆರೆ, ಬೆಂಗಳೂರು –560 029. ರವರು ಮಾನ್ಯ ಆಯುಕ್ತರಿಗೆ ಪತ್ರ ಬರೆದು ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಐದು ವಿಧಾನ ಸಭಾ ಕ್ಷೇತ್ರಗಳಿದ್ದು ಸದರಿ ಕಾರ್ಯಕ್ರಮಕ್ಕೆ ಒಂದು ವಿಧಾನ ಸಭಾ ಕ್ಷೇತ್ರಕ್ಕೆ ರೂ. 75,000/– ಗಳ ವೆಚ್ಚ ಬರಲಿದ್ದು ಐದು ವಿಧಾನ ಸಭಾ ಕ್ಷೇತ್ರಕ್ಕೆ ಒಟ್ಟು ರೂ. 3,75,000/– ಗಳು ವೆಚ್ಚವಾಗಲಿದ್ದು, ಸದರಿ ಕಾರ್ಯಕ್ರಮಕ್ಕೆ ಪಾಲಿಕೆಯು ಕೇವಲ ರೂ. 10,000/– ಗಳನ್ನು ಬಿಕ್ಷೆಯಂತೆ ಮಂಜೂರು ಮಾಡಿದ್ದು ಈ ಹಣ ಒಂದು ವಿಧಾನ ಸಭಾ ಕ್ಷೇತ್ರದ ಒಂದು ಕಾರ್ಯಕ್ರಮಕ್ಕೂ ಸಾಕಾಗುವುದಿಲ್ಲವೆಂದು ಇದರಿಂದ ಅಸ್ಪೃಶ್ಯರನ್ನು ಅವಮಾನ ಮಾಡಿದಂತಾಗಿರುತ್ತದೆಂದು ಸದರಿ ಕಾರ್ಯಕ್ರಮಕ್ಕೆ ಪಾಲಿಕೆ ವತಿಯಿಂದ ಸಂವಿಧಾನ ಬದ್ಧವಾಗಿ 2010–11 ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟ ಅನುದಾನದಲ್ಲಿ ಸದರಿ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ಮಂಜೂರು ಮಾಡಬೇಕಾಗಿ ಸಮಿತಿ

ಕೋರುತ್ತದೆಂದು, ತಪ್ಪಿದಲ್ಲಿ ದಲಿತ ಸಂಘರ್ಷ ಸಮಿತಿ ಕರ್ನಾಟಕ ವಿತಿಯಿಂದ ಪಾಲಿಕೆಗೆ ಮುತ್ತಿಗೆ ಹಾಕುವುದಾಗಿ ಎಚ್ಚರಿಸುತ್ತದೆಂದು ತಿಳಿಸಿ, ಮಾನ್ಯ ಆಯುಕ್ತರು ಈಗಾಗಲೇ ಮಂಜೂರು ಮಾಡಿರುವ ರೂ. 10,000/- ಸಹಾಯಧನದ ನಕಲು ಪ್ರತಿಯನ್ನು ತಮ್ಮ ಅರ್ಜಿಯೊಂದಿಗೆ ಲಗತ್ತಿಸಿರುತ್ತಾರೆ.

ಅದರಂತೆ ಪರಿಶೀಲಿಸಲಾಗಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 10-02-2011 ರಂದು ನಡೆದ ಸಭೆಯ ನಡವಳಿಗಳ ವಿಷಯದ ಸಂಖ್ಯೆ : ತೆಆಸ್ಥಾಸ/187/2010-11 ರಲ್ಲಿ ದಲಿತ ಸಂಘರ್ಷ ಸಮಿತಿ, ಕರ್ನಾಟಕ (ರಿ) ರವರಿಗೆ ರೂ. 10,000/- ಗಳ ಸಹಾಯ ಧನವನ್ನು ಮಂಜೂರು ಮಾಡಲಾಗಿದೆ.

2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ವಿವಿಧ ಸಂಘ ಸಂಸ್ಥೆಗಳಿಗೆ ಈಗಾಗಲೇ ಹಂಚಿಕೆಯಾಗಿರುತ್ತದೆ. ಕೌನ್ಸಿಲ್ ಸಭೆಯಲ್ಲಿ ಅನುಮೋದನೆಯಾಗಿರುವ ಅನುದಾನಗಳನ್ನು ಬಿಟ್ಟು ಇನ್ನು ಮುಂದೆ ಬರುವ ಸಹಾಯಾನುಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯತೆ ಇರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ದಿನಾಂಕ : 31-03-2011ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ, ಸಂಘ ಸಂಸ್ಥೆಗಳಿಗೆ 2010-11ರ ಪರಿಷ್ಕೃತ ಆಯವ್ಯದಲ್ಲಿ ಮರು ಹೊಂದಾಣಿಕೆ ಮಾಡಿರುವ ಅನುದಾನದಾನದಲ್ಲಿ ಈಗಾಗಲೇ ನೀಡಿರುವ ಅನುದಾನ ರೂ.10,000/- (ಹತ್ತು ಸಾವಿರ ರೂಪಾಯಿ ಸೇರಿ) ಒಟ್ಟು ರೂ.25,000/- (ಇಪ್ಪತ್ತೈದು ಸಾವಿರ) ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## 15]. ವಿಷಯದ ಸಂಖ್ಯೆ :-ತೆಆಸ್ಥಾಸ/02/2011-12

ಆಯುಕ್ತರ ಟಿಪ್ಪಣಿ ದಿನಾಂಕ : 31-03-2011 ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 106ರ ಕಂಠೀರವ ಕಾಲೋನಿಯಲ್ಲಿರುವ 2 ನೇ ಮುಖ್ಯ ರಸ್ತೆಯ ಗಲ್ಲಿಯ ರಸ್ತೆ ಚರಂಡಿ ಅಭಿವೃದ್ಧಿ ಕಾಮಗಾರಿಯ ಅಂದಾಜು ಮೊತ್ತ ರೂ. 10.61 ಲಕ್ಷಗಳಿಗೆ ಶ್ರೀ ಗಂಗಭೈರಯ್ಯನವರು, ಮಾನ್ಯ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ಇವರು ಸದರಿ ಕಾಮಗಾರಿಯನ್ನು ಜರೂರಾಗಿ ಕೆ.ಆರ್.ಐ.ಡಿ.ಎಲ್ ವತಿಯಿಂದ ಕೈಗೆತ್ತಿಕೊಳ್ಳಲು ತಮ್ಮ ಪತ್ರದ ಮುಖಾಂತರ ಕೋರಿರುತ್ತಾರೆ.

2010-11 ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ 151ರ ಶೇ 22.75% ಕಾಮಗಾರಿಗಳು ಪಿ1878 ಲೆಕ್ಕಶೀರ್ಷಿಕೆಯಲ್ಲಿ ರೂ. 1740.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಇದುವರೆವಿಗೂ ರೂ. 6968.71 ಲಕ್ಷಗಳಿಗೆ ಕಾಮಗಾರಿಗಳಿಗೆ ಕಾಮಗಾರಿ ಸಂಕೇತ ನೀಡಲಾಗಿದ್ದು, ಹೆಚ್ಚುವರಿಯಾಗಿ ರೂ. 5234.59 ಲಕ್ಷಗಳಿಗೆ ಜಾಬ್ ನಂಬರ್ ನೀಡಲಾಗಿದೆ. ಹಾಗೂ ರೂ. 4364.00 ಲಕ್ಷಗಳಿಗೆ ಪರಿಷ್ಕೃತ ಆಯವ್ಯಯದಲ್ಲಿ ಮರು ಹೊಂದಾಣಿಕೆ ಮಾಡಿಕೊಳ್ಳಲು ಶಿಫಾರಸ್ಸು ಮಾಡಲಾಗಿದೆ. ಸದರಿ ಮೊತ್ತ ರೂ. 10.61 ಲಕ್ಷಗಳನ್ನು ಭರಿಸಲು ಲೆಕ್ಕಶೀರ್ಷಿಕೆ ಪಿ1878ಗೆ 2010-11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಹೆಚ್ಚಿನ ಅನುದಾನ ಒದಗಿಸಿಕೊಳ್ಳಬೇಕಾಗಿದೆ.

ಆದ್ದರಿಂದ ಸದರಿ ಮೊತ್ತ ರೂ. 10.61 ಲಕ್ಷಗಳನ್ನು ಲೆಕ್ಕಶೀರ್ಷಿಕೆ ಪಿ1878ಗೆ 2010-11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಹಾಗೂ ಹೆಚ್ಚಿನ ಅನುದಾನ ಒದಗಿಸಿಕೊಂಡು, ಕಾಮಗಾರಿಗೆ ಬೇಕಾಗುವ ಜಾಬ್ ನಂಬರ್ ನೀಡಿ ಕಾಮಗಾರಿಯನ್ನು ನಿರ್ವಹಿಸಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ದಿನಾಂಕ : 31-03-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 16]. ವಿಷಯದ ಸಂಖ್ಯೆ :–ತೆಆಸ್ಥಾಸ/03/2011–12

ಆಯುಕ್ತರ ಟಿಪ್ಪಣಿ ದಿನಾಂಕ : 31–03–2011 ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 106ರ ಕಂಠೀರವ ಸ್ಟೇಡಿಯಂನ ಹತ್ತಿರ ಟ್ಯಾಂಕ್ ಬಂಡ್ ಸರ್ವೀಸ್ ರಸ್ತೆಯಲ್ಲಿರುವ ಚರಂಡಿ ಅಭಿವೃದ್ಧಿಪಡಿಸುವ ಕಾಮಗಾರಿಯ ಅಂದಾಜು ಮೊತ್ತ ರೂ. 11.25 ಲಕ್ಷಗಳಿಗೆ ಶ್ರೀ ಗಂಗಭೈರಯ್ಯನವರು, ಮಾನ್ಯ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ಇವರು ಸದರಿ ಕಾಮಗಾರಿಯನ್ನು ಜರೂರಾಗಿ ಕೆ.ಆರ್.ಐ.ಡಿ.ಎಲ್ ವತಿಯಿಂದ ಕೈಗೆತ್ತಿಕೊಳ್ಳಲು ತಮ್ಮ ಪತ್ರದ ಮುಖಾಂತರ ಕೋರಿರುತ್ತಾರೆ.

2010–11 ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ 151ರ ಶೀ 22.75% ಕಾಮಗಾರಿಗಳು ಪಿ1878 ಲೆಕ್ಕಶೀರ್ಷಿಕೆಯಲ್ಲಿ ರೂ. 1740.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಇದುವರೆವಿಗೂ ರೂ. 6968.71 ಲಕ್ಷಗಳಿಗೆ ಕಾಮಗಾರಿಗಳಿಗೆ ಕಾಮಗಾರಿ ಸಂಕೇತ ನೀಡಲಾಗಿದ್ದು, ಹೆಚ್ಚುವರಿಯಾಗಿ ರೂ. 5234.59 ಲಕ್ಷಗಳಿಗೆ ಜಾಬ್ ನಂಬರ್ ನೀಡಲಾಗಿದೆ. ಹಾಗೂ ರೂ. 4364.00 ಲಕ್ಷಗಳಿಗೆ ಪರಿಷ್ಕೃತ ಆಯವ್ಯಯದಲ್ಲಿ ಮರು ಹೊಂದಾಣಿಕೆ ಮಾಡಿಕೊಳ್ಳಲು ಶಿಫಾರಸ್ಸು ಮಾಡಲಾಗಿದೆ. ಸದರಿ ಮೊತ್ತ ರೂ. 11.25 ಲಕ್ಷಗಳನ್ನು ಭರಿಸಲು ಲೆಕ್ಕಶೀರ್ಷಿಕೆ ಪಿ1878ಗೆ 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಹೆಚ್ಚಿನ ಅನುದಾನ ಒದಗಿಸಿಕೊಳ್ಳಬೇಕಾಗಿದೆ.

ಆದ್ದರಿಂದ ಸದರಿ ಮೊತ್ತ ರೂ. 11.25 ಲಕ್ಷಗಳನ್ನು ಲೆಕ್ಕಶೀರ್ಷಿಕೆ ಪಿ1878ಗೆ 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಹಾಗೂ ಹೆಚ್ಚಿನ ಅನುದಾನ ಒದಗಿಸಿಕೊಂಡು, ಕಾಮಗಾರಿಗೆ ಬೇಕಾಗುವ ಜಾಬ್ ನಂಬರ್ ನೀಡಿ ಕಾಮಗಾರಿಯನ್ನು ನಿರ್ವಹಿಸಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ದಿನಾಂಕ : 31–03–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 17]. ವಿಷಯದ ಸಂಖ್ಯೆ :–ತೆಆಸ್ಥಾಸ/04/2011–12

ಆಯುಕ್ತರ ಟಿಪ್ಪಣಿ ದಿನಾಂಕ : 31–03–2011 ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 137ರ ರಾಯಪುರಂನ 20 ಮಂದಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ವೈಯಕ್ತಿಕ ಮನೆ ನಿರ್ಮಾಣದ ಕಾಮಗಾರಿಯ ಅಂದಾಜು ಮೊತ್ತ ರೂ. 60.00 ಲಕ್ಷಗಳಿಗೆ ಶೀ 22.75% ಲೆಕ್ಕಶೀರ್ಷಿಕೆಯಡಿ ಆಡಳಿತಾತ್ಮಕ ಅನುಮೋದನೆ ಮತ್ತು ಜಾಬ್ ನಂಬರ್ ನೀಡಲು ಪ್ರಸ್ತಾವನೆ ಸಲ್ಲಿಸಲಾಗಿದೆ.

ಮೇಲ್ಕಂಡ ಕಾಮಗಾರಿಯ ಅಂದಾಜು ಮೊತ್ತ ರೂ. 60.00 ಲಕ್ಷಗಳಿಗೆ 2010–11 ಸಾಲಿನ ಲೋಕೋಪಯೋಗಿ ಇಲಾಖೆಗಳ ದರಗಳ ಅನುಸಾರ ಅಂದಾಜು ಪಟ್ಟಿ ತಯಾರಿಸಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ತುರ್ತಾಗಿ ನಿರ್ವಹಿಸಬೇಕಾಗಿದೆ.

ಪ್ರಸ್ತುತ 2010–11 ನೇ ಸಾಲಿನ ಆಯವ್ಯಯದಲ್ಲಿ ಶೀ 22.75% ಕಾಮಗಾರಿಗಳು ಪಿ1878 ಲೆಕ್ಕಶೀರ್ಷಿಕೆಯಲ್ಲಿ ರೂ. 1740.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಇದುವರೆವಿಗೂ ರೂ. 6968.71 ಲಕ್ಷಗಳಿಗೆ ಕಾಮಗಾರಿಗಳಿಗೆ ಕಾಮಗಾರಿ ಸಂಕೇತ ನೀಡಲಾಗಿದ್ದು, ಹೆಚ್ಚುವರಿಯಾಗಿ ರೂ. 5228.61 ಲಕ್ಷಗಳಿಗೆ ಜಾಬ್ ನಂಬರ್ ನೀಡಲಾಗಿದ್ದು, ಮೇಲ್ಕಂಡ ರೂ. 60.00 ಲಕ್ಷಗಳನ್ನು ಭರಿಸಲು ಲೆಕ್ಕಶೀರ್ಷಿಕೆ ಪಿ1878ಗೆ 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಹೆಚ್ಚಿನ ಅನುದಾನ ಒದಗಿಸಿಕೊಳ್ಳಬೇಕಾಗಿದೆ.

ಆದ್ದರಿಂದ ಸದರಿ ಮೊತ್ತ ರೂ. 60.00 ಲಕ್ಷಗಳನ್ನು ಲೆಕ್ಕಶೀರ್ಷಿಕೆ ಪಿ1878ಗೆ 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಕಾಮಗಾರಿಗೆ ಬೇಕಾಗುವ ಜಾಬ್ ನಂಬರ್ ನೀಡಿ

ಕಾಮಗಾರಿಯನ್ನು ನಿರ್ವಹಿಸಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ದಿನಾಂಕ : 31–03–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 18]. ವಿಷಯದ ಸಂಖ್ಯೆ :–ತೆಆಸ್ಥಾಸ/05/2011–12

ಆಯುಕ್ತರ ಟಿಪ್ಪಣಿ ದಿನಾಂಕ : 31–03–2011 ರಲ್ಲಿ ವಿವರಿಸಿರುವಂತೆ, ಸುಬ್ರಮಣ್ಯಪುರ ಉಪ ವಿಭಾಗ ವ್ಯಾಪ್ತಿಯ ಅಣ್ಣಯಪ್ಪ ರಸ್ತೆಯಲ್ಲಿ (ಯಲಚೇನಹಳ್ಳಿ) ಸಹಾಯ ಕೇಂದ್ರ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದ್ದು, ಈ ಹಿಂದೆ ನೀಡಿರುವ ಕಾಮಗಾರಿ ಸಂಕೇತ 205-08-N-G-E-B-FO-001 ( Est. Amount 7.90 lakhs) ಸರಿ ಪಡಿಸಿಕೊಡಲು ಸದರಿ ಕಾಮಗಾರಿಯ ಮೂಲ ಕಡತದೊಂದಿಗೆ ಕಾರ್ಯಪಾಲಕ ಅಭಿಯಂತರರು ( ಉತ್ತರಹಳ್ಳಿ) ವಿಭಾಗ ಇವರು ಪ್ರಸ್ಥಾವನೆ ಸಲ್ಲಿಸಿರುತ್ತಾರೆ.

2007–08 ನೇ ಸಾಲಿನಲ್ಲಿ ಆಯುಕ್ತರ ಕಛೇರಿ ಆದೇಶ ಸಂಖ್ಯೆ ಮುಲೆಅ/ಪಿಆರ್/7014/ 2007–08 ದಿನಾಂಕ 19–9–2007 ರಲ್ಲಿ ಪಾಲಿಕೆಯ ಪ್ರದೇಶಗಳಲ್ಲಿ ಸಹಾಯಕ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಪ್ರತಿ ವಲಯಕ್ಕೆ ರೂ. 1.00 ಕೋಟಿಯಂತೆ ರೂ. 8.00 ಕೋಟಿಗಳನ್ನು ಹಂಚಿಕೆ ಮಾಡಲಾಗಿತ್ತು. ಸದರಿ ಕಾಮಗಾರಿಗಳನ್ನು ಆಯವ್ಯಯದ – ಸಾರ್ವಜನಿಕ ಕಾಮಗಾರಿಗಳು – ವಲಯ ಕಟ್ಟಡಗಳು ಪಿ0595 ಅಡಿ ವೆಚ್ಚ ಭರಿಸಲು ಆದೇಶಿಸಲಾಗಿತ್ತು. ಅದರಂತೆ ಆಯಾ ವಲಯದ ಸಹಾಯಕ ನಿಯಂತ್ರಕರು (ಹಣಕಾಸು) ರವರುಗಳು ಕಾಮಗಾರಿ ಸಂಕೇತ ನೀಡಿರುತ್ತಾರೆ. ಆದರೆ ಮೇಲ್ಕಂಡ ಕಾಮಗಾರಿಗೆ ಸಹಾಯಕ ನಿಯಂತ್ರಕರು (ಹಣಕಾಸು) ರಾಜರಾಜೇಶ್ವರಿ ನಗರ ವಲಯ ಇವರು ಕೇಂದ್ರ ಕಛೇರಿಯಲ್ಲಿ ನೀಡಿರುವ 205-08-N-G-E-B-FO-001 ಸಂಕೇತವನ್ನೆ ನೀಡಿರುತ್ತಾರೆ. ಹಾಗೂ ಸದರಿ ವಿವರಗಳನ್ನು ಕೇಂದ್ರ ಕಛೇರಿಯಲ್ಲಿ ಗಣಕೀರಣಗೊಳಿಸಿರುವುದಿಲ್ಲ. ಆದ್ದರಿಂದ ಸದರಿ ಕಾಮಗಾರಿಯು ಮುಂದುವರೆದ ಕಾಮಗಾರಿಗಳ ಪಟ್ಟಿಯಲ್ಲಿ ಸೇರಿರುವುದಿಲ್ಲ.

ಸಾರ್ವಜನಿಕ ಹಿತದೃಷ್ಟಿಯಿಂದ ಮೇಲ್ಕಂಡ ಕಾಮಗಾರಿಯನ್ನು ನಿರ್ಮಾಣ ಮಾಡಲಾಗಿದ್ದು, ಸದರಿ ಮೊತ್ತ ರೂ. 7.90 ಲಕ್ಷಗಳನ್ನು 2010–11 ನೇ ಸಾಲಿನ ಆಯವ್ಯಯಕ್ಕೆ ಸೇರಿಸಿಕೊಳ್ಳಬೇಕಾಗಿದೆ. ಆದ್ದರಿಂದ 2010–11 ನೇ ಸಾಲಿನ ಆಯವ್ಯಯದ ಅಂತ್ಯದಲ್ಲಿ ಇತರೆ ಲೆಕ್ಕಶೀರ್ಷಿಕೆಗಳಿಂದ ಉಳಿತಾಯವಾಗುವ ಅನುದಾನವನ್ನು ಪಿ0595 ವಲಯ ಕಟ್ಟಡಗಳು ಲೆಕ್ಕಶೀರ್ಷಿಕೆಯ ಮುಂದುವರೆದ ಕಾಮಗಾರಿಗಳು ಲೆಕ್ಕಶೀರ್ಷಿಕೆಗೆ ಮರುಹೊಂದಾಣಿಕೆ ಮಾಡಿಕೊಂಡು ಕಾಮಗಾರಿಗೆ ಬೇಕಾಗುವ ಜಾಬ್ ನಂಬರ್ ನೀಡಿ ಅನುಷ್ಟಾನಗೊಳಿಸಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ದಿನಾಂಕ : 31–03–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 19]. ವಿಷಯದ ಸಂಖ್ಯೆ :–ತೆಆಸ್ಥಾಸ/06/2011–12

ಆಯುಕ್ತರ ಟಿಪ್ಪಣಿ ದಿನಾಂಕ : 28–03–2011 ರಲ್ಲಿ ವಿವರಿಸಿರುವಂತೆ, ಜೆ.ಪಿ ಪಾರ್ಕ್‌ನಲ್ಲಿ ಪರಿಸರಕ್ಕೆ ಸಂಬಂಧಿಸಿದಂತೆ ಮೂಲಭೂತ ಸೌಕರ್ಯ ಒದಗಿಸುವ ಹಂತ –1ರ ಕಾಮಗಾರಿಗೆ 2009–10 ನೇ ಸಾಲಿನಲ್ಲಿ ಕಾಮಗಾರಿಯ ಅಂದಾಜು ಮೊತ್ತ ರೂ. 450.42 ಲಕ್ಷಗಳಿಗೆ ಜೆ.ಪಿ ಉದ್ಯಾನವನದ ಸುಂದರೀಕರಣ ಹಂತ 1 ಮತ್ತು 2ಕ್ಕೆ ಕಡತದ ಕಂಡಿಕೆ ಸಂಖ್ಯೆ (215) ರ ಮಾನ್ಯ ಆಡಳಿತಗಾರರ ಅನುಮೋದನೆಯೊಂದಿಗೆ ಕಂಡಿಕೆ ಸಂಖ್ಯೆ (225) ರಲ್ಲಿ 018-10-N-P-H-P-IM-001 ಕಾಮಗಾರಿ ಸಂಕೇತ ನೀಡಲಾಗಿದೆ.

ಮೇಲ್ಕಂಡ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ಗಿಟ್ಟ ಮೊತ್ತ ಮೊಬಲಗು ರೂ. 4,41,42,813.00 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ ಎನ್.ಎಂ. ಕೃಷ್ಣಮೂರ್ತಿರವರು ಶೇಕಡ 9.18% ರಷ್ಟು ಕಡಿಮೆ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ಸದರಿಯವರು ನಮೂದಿಸಿರುವ ದರಗಳನ್ನು ಲೋಕೋಪಯೋಗಿ ಇಲಾಖೆಯ 2009–10 ನೇ ಸಾಲಿನ ದರ ಪಟ್ಟಿಯ ಮೇಲೆ ನಮೂದಿಸಿರುವ ಸೇಕಡಾ 9.18% ರಷ್ಟು ಕಡಿಮೆ ದರವಾದ ರೂ. 4,00,90,935.00 ( ನಾಲ್ಕು ಕೋಟಿ ತೊಂಭತ್ತು ಸಾವಿರದ ಒಂಬೈನೂರ ಮೂವತ್ತೈದು ಮಾತ್ರ) ಗಳಿಗೆ ದಿನಾಂಕ 29–10–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ತೀರ್ಮಾನವಾದ ಅಧಿಕ ವಿಷಯದ ಸಂಖ್ಯೆ 2(132)/2010–11 ರ ನಿರ್ಣಯದಲ್ಲಿ ಅನುಮೋದಿಸಲಾಗಿದೆ.

2009–10 ನೇ ಸಾಲಿನ ಆಯವ್ಯಯ ಪುಟ ಸಂಖ್ಯೆ 67ರ " ಜೆ.ಪಿ ಉದ್ಯಾನವನದ 2 ನೇ ಹಂತದ ಸುಂದರೀಕರಣ ಪಿ0410" ಲೆಕ್ಕಶೀರ್ಷಿಕೆಯಡಿ ರೂ 50.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಹೆಚ್ಚುವರಿಯಾಗಿ ಕಾಮಗಾರಿ ಸಂಕೇತ ನೀಡಿರುವ ಮೊತ್ತ ರೂ. 450.42

ಲಕ್ಷಗಳನ್ನು 2009–10 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0410 ಗೆ ಮರುಹೊಂದಾಣಿಕೆ ಮಾಡಿಕೊಂಡಿರುವುದಿಲ್ಲ. ಆದ್ದರಿಂದ ಸದರಿ ಮೊತ್ತವು 2010–11 ಸಾಲಿನ ಆಯವ್ಯಯದ ಮುಂದುವರೆದ ಕಾಮಗಾರಿಗಳ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವುದಿಲ್ಲ. ಕಾಮಗಾರಿಯು ಪ್ರಗತಿಯಲ್ಲಿದ್ದು, ಪ್ರಸ್ತುತ ಸದರಿ ಕಾಮಗಾರಿಯನ್ನು ಪುನರ್ ನವೀಕರಣ ಮಾಡಲು ಮೊತ್ತ ರೂ. 450.42 ಲಕ್ಷಗಳನ್ನು 2010–11 ನೇ ಆಯವ್ಯಯದ ಅಂತ್ಯದಲ್ಲಿ ಇತರೆ ಲೆಕ್ಕಶೀರ್ಷಿಕೆಗಳಲ್ಲಿ ಉಳಿತಾಯವಾಗುವ ಅನುದಾನವನ್ನು ಪಿ0410 ಲೆಕ್ಕಶೀರ್ಷಿಕೆಗೆ 2010–11 ರ ಪರಿಷ್ಕೃತ ಆಯವ್ಯಯದಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಬೇಕಾಗಿದೆ.

ಆದ್ದರಿಂದ ಸದರಿ ಕಾಮಗಾರಿಗೆ ಬೇಕಾಗುವ ಪುನರ್‌ನವೀಕರಣ ಜಾಬ್ ನಂಬರ್ ನೀಡಲು 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ರೂ. 450.92 ಲಕ್ಷಗಳ ಅನುದಾನವನ್ನು ಮರುಹೊಂದಾಣಿಕೆ ಮಾಡಿಕೊಳ್ಳಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ದಿನಾಂಕ : 28–03–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 20]. ವಿಷಯದ ಸಂಖ್ಯೆ :–ತೆಆಸ್ಥಾಸ/07/2011–12

ಆಯುಕ್ತರ ಟಿಪ್ಪಣಿ ದಿನಾಂಕ : 31–03–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು, ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ –5 ರವರು Construcjtion of Corridor from Okalipuram to Fountain circle (Traffic free) ಕಾಮಗಾರಿಗೆ ರೂ.115.00 ಕೋಟಿಗಳಿಗೆ ಕಾಮಗಾರಿ ಸಂಖ್ಯೆಯನ್ನು ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಪ್ರಧಾನ ಅಭಿಯಂತರರು ರವರ ಮೂಲಕ ಸಲ್ಲಿಸಿರುತ್ತಾರೆ.

ಆಯವ್ಯಯ ಪುಟ ಸಂಖ್ಯೆ 2050/113 ರಲ್ಲಿ ಓಕಳೀಪುರಂನಿಂದ ಫೌಂಟೆನ್ ವೃತ್ತದ ಬಳಿ ಕಾರಿಡಾರ್ ನಿರ್ಮಾಣ (ನಿಲುಗಡೆ ರಹಿತ) ಲೆಕ್ಕ ಶೀರ್ಷಿಕೆಯಲ್ಲಿ ಕಾಮಗಾರಿ ಸಂಖ್ಯೆಯನ್ನು ನೀಡಬೇಕಾಗಿರುತ್ತದೆ.

**ಸದರಿ ಕಾಮಗಾರಿಗೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ನಅಇ/547/ಎಂ.ಎನ್.ವೈ/2010 ಬೆಂಗಳೂರು ದಿನಾಂಕ 2–2–2011 ರಂತೆ ಅನುಮೋದನೆ ನೀಡಿರುತ್ತದೆ.**

ಸದರಿ ಲೆಕ್ಕ ಶೀರ್ಷಿಕೆಯಲ್ಲಿರುವ ಅನುದಾನದ ಬಗ್ಗೆ ಪರಿಶೀಲಿಸಲಾಗಿ,

| ಆಯವ್ಯಯ ಪಿ.ಸಂಖ್ಯೆ 2050/ 113ರಲ್ಲಿ ನಿಗಧಿಪಡಿಸಿದ ಮೊತ್ತ | ಕಾಮಗಾರಿ ಸಂಖ್ಯೆ | ಕಾಮಗಾರಿ ಸಂಖ್ಯೆಗಾಗಿ ಪ್ರಸ್ತಾವನೆ | ಕಾಮಗಾರಿ ಸಂಖ್ಯೆ ನೀಡಿರುವ /ಆದೇಶಕ್ಕೆ ಸಲ್ಲಿಸಿರುವ ಮೊತ್ತ | ಲಭ್ಯವಿರುವ ಅನುದಾನ |
|---|---|---|---|---|
| ರೂ.200.00 ಮುಂದುವರೆದ ಕಾಮಗಾರಿಗಳಿಗಾಗಿ | 1 | 115.00 ಕೋಟಿ | ಇಲ್ಲ | ಇಲ್ಲ |

ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಮೀಸಲಿರಿಸಿರುವ ಅನುದಾನ ರೂ.200.00ಲಕ್ಷಗಳು ಮುಂದುವರೆದ ಕಾಮಗಾರಿಗಳಿಗೆ ಸೀಮಿತವಾಗಿರುವುದರಿಂದ, ಸದರಿ ಅನುದಾನದಲ್ಲಿ ಕಾಮಗಾರಿ ಸಂಖ್ಯೆ ನೀಡಲು ಬರುವುದಿಲ್ಲ.

ಸರ್ಕಾರದ ಅದೇಶದ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಗೆ 2010–11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ 28- Engineering-Capital Investment Plan ಲೆಕ್ಕ ಶೀರ್ಷಿಕೆಯಲ್ಲಿ ಲಭ್ಯವಿರುವ ಅನುದಾನದಿಂದ ಮರು ಹೊಂದಾಣಿಕೆ ಮಾಡಿ ಲೆಕ್ಕ ಶೀರ್ಷಿಕೆ ಪಿ.2050/113ರ ಲೆಕ್ಕ ಶೀರ್ಷಿಕೆಗೆ ಅನುದಾನ ಒದಗಿಸಿಕೊಂಡು ರೂ.35.00 ಕೋಟಿಗಳಿಗೆ ಕಾಮಗಾರಿ ಸಂಖ್ಯೆ ನೀಡಬಹುದಾಗಿರುತ್ತದೆ.

**ಆದ್ದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.**

**ನಿರ್ಣಯ :– ದಿನಾಂಕ : 31–03–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 21]. ವಿಷಯದ ಸಂಖ್ಯೆ :–ತೆಆಸ್ಥಾಸ/08/2011–12

ಆಯುಕ್ತರ ಟಿಪ್ಪಣಿ ದಿನಾಂಕ : 31–03–2011 ರಲ್ಲಿ ವಿವರಿಸಿರುವಂತೆ, ರಾಜರಾಜೇಶ್ವರಿ ವಲಯದ ಬಂಗಾರಪ್ಪನಗರ, ಜವರೇಗೌಡನ ದೊಡ್ಡಿ ಮತ್ತು ಡಿಸೌಜಾ ನಗರಗಳಿಗೆ ಸಂಪರ್ಕ ಕಲ್ಪಿಸುವ ಸುತ್ತಮುತ್ತಿಲಿನ ರಸ್ತೆಗಳು, ಹಾಗೂ

ಜವರೇಗೌಡನ ದೊಡ್ಡಿ ರಸ್ತೆಯನ್ನು ಕೆಂಚೇನಹಳ್ಳಿ ಮುಖ್ಯರಸ್ತೆಯಿಂದ ಬಂಗಾರಪ್ಪನಗರ ಮುಖಾಂತರ ನೈಸ್ ರಸ್ತೆ ಅಂಡಾರ್‌ಪಾಸ್ ವರೆಗೂ, ಅಗಲೀಕರಣ ಮತ್ತು ಸಬಲೀಕರಣಗೊಳಿಸಲು ಯೋಜನಾ ವರದಿ ತಯಾರಿಸಲಾಗಿದೆ. ಯೋಜನಾ ವರದಿಯನ್ನು ತಯಾರಿಸಲು ಮೆ॥ ಆಲ್‌ಕಾನ್ ಕನ್ಸ್‌ಟೆಂಟ್ಸ್ ಅಂಡ್ ಆರ್ಕಿಟೆಕ್ಟ್ ರವರ ಸೇವೆಯನ್ನು ಪಡೆದುಕೊಂಡು ಯೋಜನಾ ವರದಿಯನ್ನು ತಯಾರಿಸಲಾಗಿದೆ. ಪ್ರಸ್ತಾಪಿಸಿರುವ ರಸ್ತೆಗಳು ಪ್ರಮುಖ ರಸ್ತೆಗಳಿಗೆ ಸಂಪರ್ಕ ಕಲ್ಪಿಸಿರುವ ಅತಿ ಮುಖ್ಯರಸ್ತೆಗಳಾಗಿದ್ದು, ಹಾಲಿ ಇರುವ ರಸ್ತೆಗಳು ಇಕ್ಕಟಾಗಿದ್ದು, ಕೆಲವು ಕಡೆ ಅಗಲೀಕರಣಗೊಳಿಸುವ ಅನಿವಾರ್ಯತೆ ಇದೆ. ರಸ್ತೆಯ ಗುಣಮಟ್ಟಕ್ಕೆ ಅನುಗುಣವಾಗಿ ಸಿ.ಬಿ.ಆರ್ ಮತ್ತು ಬಿ.ಬಿ.ಡಿ ಟೆಸ್ಟ್‌ಗಳನ್ನು ಮಾಡಿಸಿ ಅದರಂತೆ, Crust thickness ಅನ್ನು ಯೋಜನಾ ವರದಿಯಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದು ಮುಖ್ಯ ಅಭಿಯಂತರರು (ರಸ್ತೆ ಮೂಲಭೂರ್ತ ಸೌಕರ್ಯ) ರವರು ತಿಳಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಕೆಳಕಂಡ ಅಂದಾಜುಗಳನ್ನು ತಯಾರಿಸಲಾಗಿದೆ.

1. ಜವರೇಗೌಡನ ದೊಡ್ಡಿ ರಸ್ತೆಯ ಅಗಲೀಕರಣ ಮತ್ತು ಸಬಲೀಕರಣಗೊಳಿಸಲು (ಕೆಂಚೇನಹಳ್ಳಿ ಮುಖ್ಯರಸ್ತೆಯಿಂದ ಬಂಗಾರಪ್ಪನಗರ ಮುಖಾಂತರ ನೈಸ್ ರಸ್ತೆ ಅಂಡಾರ್‌ಪಾಸ್ ವರೆಗೆ ಹೊಸಕೆರೆಹಳ್ಳಿ ಕೆರೆ ಹತ್ತಿರ – ಅಂದಾಜು ಮೊತ್ತ ರೂ – 495.70 ಲಕ್ಷಗಳು

ಮೇಲ್ಕಂಡ ಕಾಮಗಾರಿಗೆ ಸೂಕ್ತ ಅನುದಾನ ಬಿಡುಗಡೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ದಿನಾಂಕ : 31–03–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 22]. ವಿಷಯದ ಸಂಖ್ಯೆ :–ತೆಆಸ್ಥಾಸ/09/2011–12

ಆಯುಕ್ತರ ಟಿಪ್ಪಣಿ ದಿನಾಂಕ : 30–03–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು, ಬೆಂಗಳೂರು ವೈಟ್‌ಫೀಲ್ಡ್‌ನ ವಿಶೇಷ ಆರ್ಥಿಕ (SEZ) Export Promotion Industrial Park (EPIP) ವಲಯದಲ್ಲಿ ರಸ್ತೆಗಳು ಮತ್ತು ಅಂಡರ್‌ಪಾಸ್ ನಿರ್ಮಾಣ ಮಾಡುವ ಕಾಮಗಾರಿಗಳನ್ನು ASIDE & BBMPJ ಎರಡು ಸಂಸ್ಥೆಗಳು ಸೇರಿ ವೆಚ್ಚವನ್ನು ಭರಿಸಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

| ಕ್ರ.ಸ | ಕಾಮಗಾರಿಗಳ ವಿವರಗಳು | ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ) |
|---|---|---|
| 1 | Improvements, strengthening and asphalting to internal roads and construction of underpass at EPIP zone, whitefield, Bangalore Phase II | 46.00 |
| | Total Rs. | 46.00 |

ಮೇಲ್ಕಂಡ ಕಾಮಗಾರಿಗಳ ಒಟ್ಟು ಮೊತ್ತ ರೂ.46.00 ಕೋಟಿಗಳ ಅಂದಾಜು ವೆಚ್ಚವನ್ನು ಭರಿಸಲು ಈ ಕೆಳಕಂಡಂತೆ ಆರ್ಥಿಕ ಹಂಚಿಕೆ ಮಾಡಲಾಗಿದೆ.

| Sl. No. | Details | Amount (Rs.in crores) |
|---|---|---|
| **1** | **ASIDE Share** | **20.00** |
| **2** | **BBMP Share** | **26.00** |
| | **Total Rs.** | **46.00** |

ಸದರಿ ಕಾಮಗಾರಿಯ ಒಟ್ಟು ಮೊತ್ತ ರೂ.46.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ದಿನಾಂಕ 10–2–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಸಭೆಯ ನಡವಳಿ ವಿಷಯ ಸಂಖ್ಯೆ 35/2010–11 ರಂತೆ ಅನುಮೋದನೆ ನೀಡಲಾಗಿದೆ.

ಸದರಿ ಕಾಮಗಾರಿಯ ಒಟ್ಟು ಮೊತ್ತ ರೂ.46.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ದಿನಾಂಕ 24–2–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ ಸಂಖ್ಯೆ 16(242)2010–11 ರಂತೆ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿದೆ.

**ಸದರಿ ಕಾಮಗಾರಿಗಳ 1ನೇ ಹಂತದ ಕಾಮಗಾರಿಗೆ ರೂ.50.22 ಕೋಟಿಗಳಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ, ಆಯವ್ಯಯ ಲೆಕ್ಕ ಶೀರ್ಷಿಕೆ 20– ಕಾಮಗಾರಿ – ಮೂಲಭೂತ ಸೌಕರ್ಯಗಳ ಶಾಖೆ – ರಸ್ತೆಗೆ ಸಂಬಂಧಪಟ್ಟ ಕೆಲಸಗಳು – ಮುಖ್ಯ ರಸ್ತೆ/ ಆರ್ಟೀರಿಯಲ್ / ಉಪ ಆರ್ಟೀರಿಯಲ್ ರಸ್ತೆ – ಮುಖ್ಯ ರಸ್ತೆಗಳ ವಿಭಾಗ – ಪಿ. ಸಂಖ್ಯೆ 2019/ 128 ರಲ್ಲಿ ನಿಗಧಿಪಡಿಸಿರುವ ರೂ.400.00 ಲಕ್ಷಗಳಿಗೆ ಮರುಹೊಂದಾಣಿಕೆ ಮೂಲಕ ಹೆಚ್ಚುವರಿ ಅನುದಾನವನ್ನು ಒದಗಿಸಿ ಕಾಮಗಾರಿ ಸಂಖ್ಯೆ ನೀಡಲಾಗಿರುತ್ತದೆ.**

**ಅದೇ ರೀತಿ 2ನೇ ಹಂತದ ಸದರಿ ಕಾಮಗಾರಿಗೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ.46.00 ಕೋಟಿಗಳಿಗೆ ಮರು ಹೊಂದಾಣಿಕೆ ಮೂಲಕ ಕಾಮಗಾರಿ ಸಂಖ್ಯೆ ನೀಡಬೇಕಾಗಿರುತ್ತದೆ.**

**ಆದ್ದರಿಂದ 2010–11ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ 156 ರಲ್ಲಿ ಕಾಮಗಾರಿಗಳು – ಬಂಡವಾಳ ಹೂಡಿಕೆ (28- Engineering- Capital Investment Plan) ಲೆಕ್ಕಶೀರ್ಷಿಕೆಯಲ್ಲಿ ಒದಗಿಸಿರುವ ಅನುದಾನವು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮೊಕದ್ದಮೆ ಇತ್ಯರ್ಥವಾಗದೇ ಇರುವ ಪ್ರಯುಕ್ತ ಕಾಮಗಾರಿಗಳು ಅನುಮೋದನೆಯಾಗದಿರುವುದರಿಂದ ಅನುದಾನ ಪೂರ್ಣ ಪ್ರಮಾಣದಲ್ಲಿ ಬಳಕೆ ಆಗಿರುವುದಿಲ್ಲ. ಈ ಪ್ರಧಾನ ಲೆಕ್ಕ ಶೀರ್ಷಿಕೆಯಲ್ಲಿ ವಿವಿಧ ಉಪ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ರೂ.1000.00** ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ. ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ **ರೂ.12.81** ಕೋಟಿಗಳಿಗೆ ಕಾಮಗಾರಿ ಸಂಖ್ಯೆ ನೀಡಲಾಗಿದೆ ಮತ್ತು **ರೂ.690.13** ಕೋಟಿಗಳಿಗೆ **ಪ್ರಸಕ್ತ ಸಾಲಿನಲ್ಲಿ ಪರಿಷ್ಕೃತ ಆಯವ್ಯಯದಲ್ಲಿ ಮರು ಹೊಂದಾಣಿಕೆಗೆ ಸಲ್ಲಿಸಲಾಗಿದೆ. ಒಟ್ಟಾರೆ ರೂ.702.94 ಕೋಟಿಗಳನ್ನು ಬಳಸಿಕೊಳ್ಳಲಾಗಿದೆ ಹಾಗೂ ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ.297.06 ಕೋಟಿಗಳ ಅನುದಾನ ಮರು ಹೊಂದಾಣಿಕೆಗೆ ಲಭ್ಯವಿರುತ್ತದೆ.**

**ಆದ್ದರಿಂದ ಮೇಲ್ಕಂಡ ಕಾಮಗಾರಿಯ 2ನೇ ಹಂತದ ಮೊತ್ತ ರೂ.46.00 ಕೋಟಿಗಳಿಗೆ ಮರು ಹೊಂದಾಣಿಕೆ ಮಾಡಿಕೊಂಡು 2010–11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕಾಗಿರುತ್ತದೆ.**

**ಆದ್ದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಟಿಪ್ಪಣಿಯನ್ನು ಅನುಮೋದನೆ ಮತ್ತು ಸಹಿಗಾಗಿ ಮಂಡಿಸಿದೆ.**

ನಿರ್ಣಯ :– ದಿನಾಂಕ : 30–03–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

## 23]. ವಿಷಯದ ಸಂಖ್ಯೆ :–ತೆಆಸ್ಥಾಸ/10/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)189/10–11, ದಿನಾಂಕ : 31–03–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮಾನ್ಯ ಆಯುಕ್ತರಿಗೆ ಪತ್ರ ಬರೆದು ಸುನೀಲ್ ಪುರಾಣಿಕ್, ಅಧ್ಯಕ್ಷರು "ಸಮೃದ್ಧಿ ಮೀಡಿಯ ಫಾರ್ ಎಕ್ಸ್‌ಲೇನ್ಸ್ ಬೆಂಗಳೂರು ರವರು ಸಲ್ಲಿಸಿರುವ ಪತ್ರವನ್ನು ಲಗತ್ತಿಸುತ್ತಾ, ತಾವು ನಾಡಪ್ರಭು ಕೆಂಪೇಗೌಡರ ಜೀವನ ಚರಿತ್ರೆಯ ಒಂದು ಘಂಟೆಯ ಸಾಕ್ಷ್ಯ ಚಿತ್ರವನ್ನು ಪಾಲಿಕೆಯ ಆಡಳಿತ ಕಾರ್ಯಚಟುವಟಿಕೆಗಳ ಹಾಗು ಹಾಲಿ ಮತ್ತು ಮಾಜಿ ಮಹಾಪೌರರುಗಳ ಹಾಗೂ ಬೆಂಗಳೂರು ನಗರದ ಬೆಳವಣಿಗೆಗೆ ಕಾರಣೀಭೂತರಾದ ಗಣ್ಯಾತಿಗಣ್ಯ ವ್ಯಕ್ತಿಗಳ ವಿವರಗಳನ್ನುಒಳಗೊಂಡಂತೆ ತಯಾಗಿಸಿ ಅಂತರ್ಜಾಲ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಪ್ರಚಾರ ಪಡಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕಾರ್ಯಾದೇಶ ನೀಡುವುದರೊಂದಿಗೆ ಈ ಕಾರ್ಯಕ್ರಮಕ್ಕಾಗಿ 2010–11 ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ಅನುದಾನವನ್ನು ಮಂಜೂರು ಮಾಡಲು ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ. ಇವರ ಮನವಿಯನ್ನು ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿ ಪೂಜ್ಯ ಮಹಾಪೌರರು ಟಿಪ್ಪಣಿಯನ್ನು ಹಾಗೂ ಸನ್ಮಾನ್ಯ ಆರ್ ಅಶೋಕ್, ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಹಾಗೂ ಬೆಂಗಳೂರು (ದಕ್ಷಿಣ) ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಸಹ ಸಹಾಯ ಮಾಡಲು ಪತ್ರ ಮುಖೇನ ತಿಳಿಸಿರುತ್ತಾರೆಂದು ತಿಳಿಸುತ್ತಾ, ಸಮೃದ್ಧಿ ಮೀಡಿಯ ಫಾರ್ ಎಕ್ಸ್‌ಲೇನ್ಸ್ ಬೆಂಗಳೂರು ರವರು ಯೋಜಿಸಿರುವ ಈ ಮಹತ್ತರ ಕಾಯಕವನ್ನು ಕೈಗೊಳ್ಳಲು 2010–11ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ವಿವಿಧ ಸಂಘ ಸಂಸ್ಥೆಗಳಿಗೆ ಈಗಾಗಲೇ ಹಂಚಿಕೆಯಾಗಿರುತ್ತದೆ. ಕೌನ್ಸಿಲ್ ಸಭೆಯಲ್ಲಿ ಅನುಮೋದನೆಯಾಗಿರುವ ಅನುದಾನಗಳನ್ನು ಬಿಟ್ಟು ಇನ್ನು ಮುಂದೆ ಬರುವ ಸಹಾಯಾನುಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯತೆ ಇರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

*ನಿರ್ಣಯ :– ದಿನಾಂಕ : 31–03–2011ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ 2010–11ರ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ–24–ಸಂಸ್ಕೃತಿ ಮತ್ತು ಕ್ರೀಡೆ–ಸಾಮಾನ್ಯ ವೆಚ್ಚಗಳು, ಡಾಕ್ಯುಮೆಂಟರಿ ವೆಚ್ಚಗಳು ಪಿ0052 ಅಡಿಯಲ್ಲಿ ಮೀಸಲಿರಿಸಿರುವ ಅನುದಾನದಲ್ಲಿ ಸಮೃದ್ಧಿ ಮೀಡಿಯ ಫಾರ್ ಎಕ್ಸಲೆನ್ಸ್ ರವರಿಗೆ ನಾಡಪ್ರಭು ಕೆಂಪೇಗೌಡರ ಜೀವನ ಚರಿತ್ರೆಯ ಸಾಕ್ಷ್ಯ ಚಿತ್ರವನ್ನು ತಯಾರಿಸಲು ಅನುದಾನವನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.*

## 24]. ವಿಷಯದ ಸಂಖ್ಯೆ :–ತೆಆಸ್ಥಾಸ/11/2011–12

ಆಯುಕ್ತರ ಟಿಪ್ಪಣಿ ದಿನಾಂಕ : 31–03–2011 ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 106ರ ಕಂಠೀರವ ಸ್ಟೇಡಿಯಂನ ಸರ್ವೀಸ್ ರಸ್ತೆಯ ಚರಂಡಿ ಅಭಿವೃದ್ಧಿಪಡಿಸುವ ಕಾಮಗಾರಿಯ ಅಂದಾಜು ಮೊತ್ತ ರೂ. 11.35 ಲಕ್ಷಗಳಿಗೆ ಶ್ರೀ ಗಂಗಭೈರಯ್ಯನವರು, ಮಾನ್ಯ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ಇವರು ಸದರಿ ಕಾಮಗಾರಿಯನ್ನು ಜರೂರಾಗಿ ಕೆ.ಆರ್.ಐ.ಡಿ.ಎಲ್ ವತಿಯಿಂದ ಕೈಗೆತ್ತಿಕೊಳ್ಳಲು ತಮ್ಮ ಪತ್ರದ ಮುಖಾಂತರ ಕೋರಿರುತ್ತಾರೆ.

2010–11 ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ 151ರ ಶೇ 22.75% ಕಾಮಗಾರಿಗಳು ಪಿ1878 ಲೆಕ್ಕಶೀರ್ಷಿಕೆಯಲ್ಲಿ ರೂ. 1740.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಇದುವರೆವಿಗೂ ರೂ. 6968.71 ಲಕ್ಷಗಳಿಗೆ ಕಾಮಗಾರಿಗಳಿಗೆ ಕಾಮಗಾರಿ ಸಂಕೇತ ನೀಡಲಾಗಿದ್ದು, ಹೆಚ್ಚುವರಿಯಾಗಿ ರೂ. 5234.59 ಲಕ್ಷಗಳಿಗೆ ಜಾಬ್ ನಂಬರ್ ನೀಡಲಾಗಿದೆ. ಹಾಗೂ ರೂ. 4364.00 ಲಕ್ಷಗಳಿಗೆ ಪರಿಷ್ಕೃತ ಆಯವ್ಯಯದಲ್ಲಿ ಮರು ಹೊಂದಾಣಿಕೆ

ಮಾಡಿಕೊಳ್ಳಲು ಶಿಫಾರಸ್ಸು ಮಾಡಲಾಗಿದೆ. ಸದರಿ ಮೊತ್ತ ರೂ. 11.35 ಲಕ್ಷಗಳನ್ನು ಭರಿಸಲು ಲೆಕ್ಕಶೀರ್ಷಿಕೆ ಪಿ1878ಗೆ 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಹೆಚ್ಚಿನ ಅನುದಾನ ಒದಗಿಸಿಕೊಳ್ಳಬೇಕಾಗಿದೆ.

ಆದ್ದರಿಂದ ಸದರಿ ಮೊತ್ತ ರೂ. 11.35 ಲಕ್ಷಗಳನ್ನು ಲೆಕ್ಕಶೀರ್ಷಿಕೆ ಪಿ1878ಗೆ 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಹಾಗೂ ಹೆಚ್ಚಿನ ಅನುದಾನ ಒದಗಿಸಿಕೊಂಡು, ಕಾಮಗಾರಿಗೆ ಬೇಕಾಗುವ ಜಾಬ್ ನಂಬರ್ ನೀಡಿ ಕಾಮಗಾರಿಯನ್ನು ನಿರ್ವಹಿಸಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ದಿನಾಂಕ : 31–03–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 25]. ವಿಷಯದ ಸಂಖ್ಯೆ :–ತೆಆಸ್ಥಾಸ/12/2011–12

ಆಯುಕ್ತರ ಟಿಪ್ಪಣಿ ದಿನಾಂಕ : 31–03–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಕಾರ್ಯಪಾಲಕ ಅಭಿಯಂತರರು ಟಿ.ಇ.ಸಿ (ಬೃಹತ್ ರಸ್ತೆಗಳು) ರವರು, Proposal for Bicycle friendly routes in Jayanagar Bangalore ಕಾಮಗಾರಿಗೆ ರೂ.259.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗಾಗಿ ಮುಖ್ಯ ಅಭಿಯಂತರರು ಬೃಹತ್ ರಸ್ತೆಗಳು ರವರ ಮೂಲಕ ಸಲ್ಲಿಸಿರುತ್ತಾರೆ.

| | | | | ರೂ.ಲಕ್ಷಗಳಲ್ಲಿ |
|---|---|---|---|---|
| ಆಯವ್ಯಯ ಪಿ.ಸಂಖ್ಯೆ 0536/ 135 ರಲ್ಲಿ ನಿಗಧಿಪಡಿಸಿದ ಮೊತ್ತ | ಕಾಮಗಾರಿ ಸಂಖ್ಯೆ ನೀಡಿರುವ ಮೊತ್ತ/ಆದೇಶಕ್ಕೆ ಸಲ್ಲಿಸಿರುವ ಮೊತ್ತ | ಕಾಮಗಾರಿ ಸಂಖ್ಯೆಗೆ ಪ್ರಸ್ತಾವನೆ | ಲಭ್ಯವಿರುವ ಅನುದಾನ | ಕೊರತೆ ಅನುದಾನ |
| ರೂ.159.00 | ರೂ.108.20 | ರೂ.259.00 | ರೂ.50.80 | ರೂ.208.20 |

**ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕ 10–3–2011 ರಂದು ನಡೆದ ಸಭೆಯ ನಡವಳಿ ವಿಷಯ ಸಂಖ್ಯೆ 41/ 2010–11 ರಂತೆ ಸದರಿ ಕಾಮಗಾರಿಯನ್ನು ಕೈಗೊಳ್ಳಲು . ಹಾಗೂ ಬಾಕಿ ಮೊತ್ತವನ್ನು 2011–12ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳಾಗಿ ಮೀಸಲಿರಿಸಲು ಅನುಮೋದಿಸಿರುತ್ತದೆ.**

ಆದ್ದರಿಂದ ಸದರಿ ಕಾಮಗಾರಿಗೆ ಕಾಮಗಾರಿ ಸಂಖ್ಯೆ ನೀಡಲು ಕೊರತೆ ಇರುವ ರೂ.208.20 ಲಕ್ಷಗಳ ಅನುದಾನವನ್ನು 2010–11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಂಡು ಹಾಗೂ ತುರ್ತು ಪರಿಹಾರ ನಿಧಿಯಿಂದ ಮರು ಹೊಂದಾಣಿಕೆ ಮಾಡಿಕೊಂಡು ಕಾಮಗಾರಿ ಸಂಕೇತ ನೀಡುವ ಸಲುವಾಗಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ದಿನಾಂಕ : 31–03–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 26]. ವಿಷಯದ ಸಂಖ್ಯೆ :–ತೆಆಸ್ಥಾಸ/13/2011–12

ಆಯುಕ್ತರ ಟಿಪ್ಪಣಿ ದಿನಾಂಕ : 31–03–2011 ರಲ್ಲಿ ವಿವರಿಸಿರುವಂತೆ, ಕಾರ್ಯಪಾಲಕ ಅಭಿಯಂತರರು, ರಸ್ತೆ ಅಗಲೀಕರಣ ರವರು, ಬಳ್ಳಾರಿ ರಸ್ತೆ ಬಿ.ಡಿ.ಎ ಜಂಕ್ಷನ್ ನಿಂದ ಮೇಖ್ರಿ ವೃತ್ತದವರೆಗೆ ರಸ್ತೆ ಅಗಲೀಕರಿಸುವ ಅರಮನೆ ಆವರಣದಲ್ಲಿ ಹಾಲಿ ಇರುವ ಎರಡು ಕಟ್ಟಡ ಮತ್ತು ಗಾರ್ಡ್ ಕಟ್ಟಡಗಳನ್ನು ಸ್ಥಳಾಂತರಿಸುವ ಅಂದಾಜು ಪಟ್ಟಿಯ ಮೊತ್ತ ರೂ.47.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡಲು ಕೋರಿ ಪ್ರಸ್ತಾವನೆಯನ್ನು ಮುಖ್ಯ ಅಭಿಯಂತರರು ಬೃಹತ್ ರಸ್ತೆಗಳು ಮೂಲಕ ಸಲ್ಲಿಸಿರುತ್ತಾರೆ.
ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮೂಲಕ ಕೈಗೊಳ್ಳಲು ಕಂಡಿಕೆ 21 ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.
ಕಂಡಿಕೆ 38 ರಲ್ಲಿ ಮಾನ್ಯ ಆಯುಕ್ತರು ಕಾಮಗಾರಿ ಸಂಖ್ಯೆ ನೀಡಲು ಅನುಮೋದಿಸಿರುತ್ತಾರೆ.

ಆಯವ್ಯಯ ಲೆಕ್ಕ ಶೀರ್ಷಿಕೆಯನ್ನು ನಮೂದಿಸಿರುವುದಿಲ್ಲ. ಆದಾಗ್ಯೂ ಆಯವ್ಯಯ ಲೆಕ್ಕ ಶೀರ್ಷಿಕೆ 20– ಕಾಮಗಾರಿ ಮೂಲಭೂತ ಸೌಕರ್ಯಗಳ ಶಾಖೆ – ರಸ್ತೆ ಅಗಲೀಕರಣ – – ಬಳ್ಳಾರಿ ರಸ್ತೆ – ಪಿ.ಸಂಖ್ಯೆ 1946/129 ರಲ್ಲಿ ಮೀಸಲಿರಿಸಿರುವ ರೂ.4407.00 ಲಕ್ಷಗಳ ಅನುದಾನದಲ್ಲಿ ಕಾಮಗಾರಿ ಸಂಖ್ಯೆಗೆ ಪರಿಗಣಿಸಬಹುದಾಗಿರುತ್ತದೆ.
ಸದರಿ ಲೆಕ್ಕ ಶೀರ್ಷಿಕೆಯಲ್ಲಿರುವ ಅನುದಾನದ ಬಗ್ಗೆ ಪರಿಶೀಲಿಸಲಾಗಿ,

| | | | ರೂ.ಲಕ್ಷಗಳಲ್ಲಿ |
|---|---|---|---|
| ಆಯವ್ಯಯ ಪಿ.ಸಂಖ್ಯೆ 1946 129ರಲ್ಲಿ ನಿಗಧಿಪಡಿಸಿದ ಮೊತ್ತ | ಕಾಮಗಾರಿ ಸಂಖ್ಯೆಗಾಗಿ ನೀಡಿರುವ ಮೊತ್ತ | ಕಾಮಗಾರಿ ಸಂಖ್ಯೆ ಗಾಗಿ ಪ್ರಸ್ತಾವನೆ | ಹೆಚ್ಚಾಗಿ ನೀಡಿರುವ ಮೊತ್ತ |
| **ರೂ.4407.00** | **ರೂ.7991.87** | **ರೂ.47.00** | **ರೂ.3584.47** |

**ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ.3584.87 ಲಕ್ಷಗಳಿಗೆ ಹೆಚ್ಚಾಗಿ ಕಾಮಗಾರಿ ಸಂಕೇತ ನೀಡಲಾಗಿರುತ್ತದೆ 2010–11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಮರು ಹೊಂದಾಣಿಕೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಟಿಪ್ಪಣಿಯನ್ನು ಈಗಾಗಲೇ ಸಲ್ಲಿಸಲಾಗಿದೆ.**
**ಆದಾಗ್ಯೂ** 2010–11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ 28- Engineering- Capital Investment Plan ಲೆಕ್ಕ ಶೀರ್ಷಿಕೆಯಲ್ಲಿ ಲಭ್ಯವಿರುವ ಅನುದಾನದಿಂದ ಮರು ಹೊಂದಾಣಿಕೆ ಮಾಡಿಕೊಂಡು **ರೂ.47.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.**

**ನಿರ್ಣಯ :– ದಿನಾಂಕ : 31–03–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## ಹೆಚ್ಚುವರಿ ವಿಷಯಗಳು;

## 01]. ವಿಷಯದ ಸಂಖ್ಯೆ :–ತೆಆಸ್ಥಾಸ/14/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)190/10–11, ದಿನಾಂಕ : 31–03–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮಾನ್ಯ ಆಯುಕ್ತರಿಗೆ ಪತ್ರ ಬರೆದು ಶ್ರೀ ಆರ್. ಸುಬ್ರಮಣ್ಯಂ, ಅಧ್ಯಕ್ಷರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕೇಂದ್ರೀಯ ಸಂಘ (ರಿ) ರವರು ಸಲ್ಲಿಸಿರುವ ಪತ್ರವನ್ನು ಲಗತ್ತಿಸುತ್ತಾ ಸದರಿಯವರು ತಮ್ಮ ಪತ್ರದಲ್ಲಿ ತಮ್ಮ ಸಂಘದ ಚುನಾವಣೆಯನ್ನು ಘೋಷಿಸಲಾಗಿರುತ್ತದೆ. ಆದುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಚುನಾವಣಾ ಕೆಲಸ ಕಾರ್ಯಗಳಿಗಾಗಿ ರೂ. 8.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕೇಂದ್ರೀಯ ಸಂಘ (ರಿ) ರವರಿಗೆ ರೂ. 8.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಶ್ರೀ ಆರ್. ಸುಬ್ರಮಣ್ಯಂ, ಅಧ್ಯಕ್ಷರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕೇಂದ್ರೀಯ ಸಂಘ (ರಿ) ಕೇಂದ್ರ ಕಛೇರಿ ಆವರಣ, ಬೆಂಗಳೂರು ರವರು ಮನವಿ ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೌಕರರ ಎರಡು ಸಂಘಗಳಿದ್ದು, ಇದರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕೇಂದ್ರೀಯ ಸಂಘ (ರಿ) ರಿಜಿಸ್ಟರ್ಡ್ ಕಛೇರಿ ವಿಳಾಸ ನಂ. 922, ಬನಶಂಕರಿ 2ನೇ ಹಂತ, ಬೆಂಗಳೂರು –70 ಈ ಸಂಘಕ್ಕೆ 2010–11 ನೇ ಸಾಲಿನ ನಗರ ಪಾಲಿಕೆಯ ಆಯವ್ಯಯದಲ್ಲಿ ರೂ. 20.00 ಲಕ್ಷ ರೂ.ಗಳ ಅನುದಾನವನ್ನು ನಿಗಧಿಪಡಿಸಿದ್ದು ಇದಕ್ಕೆ ಸರ್ಕಾರದ ಅನುಮೋದನೆ ಪಡೆಯಲಾಗಿರುವುದಾಗಿ ಈ ಅನುದಾನವನ್ನು ನಗರ ಪಾಲಿಕೆಯಲ್ಲಿರುವ ಮತ್ತೊಂದು ಸಂಘವು ಆಡಳಿತ ವರ್ಗಕ್ಕೆ ಪತ್ರವನ್ನು ನೀಡಿ, ನಮ್ಮ ಸಂಘಕ್ಕೆ ನಿಗಧಿಪಡಿಸಿರುವ ಅನುದಾನವನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ಸಾಹಿತ್ಯ ಸಮ್ಮೇಳನಕ್ಕಾಗಿ ನೀಡಲು ಪತ್ರ ನೀಡಿ, ಅಧಿಕಾರಿಗಳಿಗೆ ತಪ್ಪು ಮಾಹಿತಿ ನೀಡಿ ಅವರ ದಾರಿ ತಪ್ಪಿಸಿ, ಸದರಿ ಹಣವನ್ನು ದಿನಾಂಕ 25–01–2011 ರಂದು (ಅನುದಾನವನ್ನು) ಕನ್ನಡ ಸಾಹಿತ್ಯ ಪರಿಷತ್ತಿಗೆ ಬಿಡುಗಡೆಗೊಳಿಸಲಾಗಿದೆಯೆಂದು ತಿಳಿಸಿರುತ್ತಾರೆ.

ತಮ್ಮ ಸಂಘದ ಅರಿವಿಲ್ಲದೆ ಮತ್ತೊಂದು ಸಂಘವು ತಮ್ಮ ಸಂಘದ ಚಟುವಟಿಕೆಗಳಿಗೆ ಮೀಸಲಿಟ್ಟಿದ್ದ ಅನುದಾನವನ್ನು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನೀಡಿದ ಬಗ್ಗೆ (ಚೆಕ್ ಬಿಡುಗಡೆ ಮಾಡಿದ ದಿನವೇ) ಆಡಳಿತ ಪಕ್ಷದ ನಾಯಕರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ತಮಗೂ ಹಾಗೂ ಮಾನ್ಯ ಆಯುಕ್ತರು ಮತ್ತು ಮುಖ್ಯ ಲೆಕ್ಕಾಧಿಕಾರಿರವರ ಗಮನಕ್ಕೆ ತಂದು ಚೆಕ್ಕನ್ನು ತಡೆ ಹಿಡಿಯಲು ವಿನಂತಿಸಿಕೊಳ್ಳಲಾಗಿತ್ತು. ಈ ಸಮಯದಲ್ಲಿ ನಮ್ಮ ಸಂಘಕ್ಕೆ ಅನುದಾನ ನೀಡುವುದಾಗಿ ಮುಖ್ಯ ಲೆಕ್ಕಾಧಿಕಾರಿರವರು ಆಶ್ವಾಸನೆ ನೀಡಿರುವುದಾಗಿ ದಿನಾಂಕ 11.04.2011 ರಂದು ತಮ್ಮ ಸಂಘದ ಚುನಾವಣೆ ನಡೆಯಲಿದ್ದು, ಸದರಿ ಚುನಾವಣೆಗೆ ಸಂಘಕ್ಕೆ ಹಣಕಾಸಿನ ಅಗತ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕೇಂದ್ರಿಯ ಸಂಘ (ರಿ) ರಿಜಿಸ್ಟರ್ಡ್ ಕಛೇರಿ ವಿಳಾಸ ನಂ. 922, ಬನಶಂಕರಿ 2ನೇ ಹಂತ, ಬೆಂಗಳೂರು – 70. ಸಂಘದ ಅಗತ್ಯತೆಗಾಗಿ ರೂ. 8.00 ಲಕ್ಷಗಳ ಅನುದಾನವನ್ನು ತಮ್ಮ ಸಂಘಕ್ಕೆ ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

ಮುಂದುವರೆದಂತೆ ರೂ. 20.00 ಲಕ್ಷಗಳ ಅನುದಾನ ಬಿಡುಗಡೆ ಸಂಬಂಧಿಸಿದ ಮತ್ತೊಂದು ಕಡತವು ಮಾನ್ಯ ಆಯುಕ್ತರ ಆದೇಶಕ್ಕಾಗಿ ಈಗಾಗಲೇ ಸಲ್ಲಿಸಲಾಗಿರುತ್ತದೆ.

ಈ ಸಂಬಂಧವಾಗಿ ನಿವೇದಿಸುವುದೇನೆಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನೌಕರರ ಕೇಂದ್ರೀಯ ಸಂಘಗಳು ಎರಡು ಅಸ್ಥಿತ್ವದಲ್ಲಿದ್ದು, ಈ ಎರಡು ಸಂಘಗಳ ನಡುವೆ ಸಂಘರ್ಷ ಏರ್ಪಟ್ಟಿರುತ್ತದೆ. ಆದ್ದರಿಂದ ಮೇಲೆ ಉಲ್ಲೇಖಿಸಿದ ಕಡತದಲ್ಲಿ ಯುಕ್ತ ತೀರ್ಮಾನವಾದ ನಂತರ, ಆರ್ಥಿಕ ಅನುದಾನವನ್ನು ನೀಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ ಎಂದು ತೀರ್ಮಾನಿಸಬಹುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕೆಳಗಿನ ಅಂಶಗಳನ್ನು ಮಂಡಿಸಲಾಗಿದೆ.

ಪ್ರಸಕ್ತ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ: 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ಈಗಾಗಲೇ ಹಂಚಿಕೆಯಾಗಿದ್ದು, ಸಹಾಯಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯವಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ದಿನಾಂಕ : 31–03–2011ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ, ಸಂಘ ಸಂಸ್ಥೆಗಳಿಗೆ 2010–11ರ ಪರಿಷ್ಕೃತ ಆಯವ್ಯದಲ್ಲಿ ಮರು ಹೊಂದಾಣಿಕೆ ಮಾಡಿರುವ ಅನುದಾನದಲ್ಲಿ ರೂ. 8 ಲಕ್ಷ (ರೂ. ಎಂಟು ಲಕ್ಷ) ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## 02]. ವಿಷಯದ ಸಂಖ್ಯೆ :–ತೆಆಸ್ಥಾಸ/15/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)183/10–11, ದಿನಾಂಕ : 05–04–2011 ರಲ್ಲಿ ವಿವರಿಸಿರುವಂತೆ, ಶ್ರೀಮತಿ ಇಂದಿರ ಎಸ್. ಎನ್. ಅಧ್ಯಕ್ಷರು, ಶ್ರೀ ಧರ್ಮರಾಯಸ್ವಾಮಿ ದೇವಾಲಯ, ತಿಗಳರ ಪೇಟೆ, ಬೆಂಗಳೂರು – 560002. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಬೆಂಗಳೂರು ನಗರ ತಿಗಳರ ಪೇಟೆಯಲ್ಲಿ ನೆಲೆಸಿರುವ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಅನಾದಿ ಕಾಲದಿಂದಲೂ ಅನೂಚಾನವಾಗಿ ನಡೆದು ಕೊಂಡು ಬರುತ್ತಿರುವ ಬೆಂಗಳೂರು ನಾಡ ಹಬ್ಬವೆಂದೇ ಖ್ಯಾತಿಗೊಂಡಿರುವ ಕರಗ ಶಕ್ತ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಬೆಂಗಳೂರು ಮಹಾನಗರ ಪಾಲಿಕೆಯು ಪ್ರತಿ ವರ್ಷವೂ ಹತ್ತು ಲಕ್ಷ ರೂಪಾಯಿಗಳ ಅನುದಾನ ನೀಡುತ್ತಲಿದ್ದು, ಕಳೆದ ಸಾಲಿನಲ್ಲಿ ನೀಡಲಾದ ಅನುದಾನವನ್ನು ಸದ್ಬಳಕೆ ಮಾಡಿಕೊಂಡಿರುವ ಬಗ್ಗೆ ಆಡಿಟ್ಟಾದ ಲೆಕ್ಕ ಪತ್ರವನ್ನು ಮತ್ತು ದೃಢೀಕರಣ ಪತ್ರವನ್ನು ಲಗತ್ತಿಸುತ್ತಾ, 2011ನೇ ಸಾಲಿನ ಕರಗ ಶಕ್ತ್ಯೋತ್ಸವ ದಿನಾಂಕ 10.04.2011 ರಿಂದ 20.04.2011 ರವರೆವಿಗೂ ನಡೆಯಲಿರುವುದರಿಂದ, ಪೂರ್ವ ಸಿದ್ಧತೆಗಳಿಗಾಗಿ ಹಣ

ಬೇಕಾಗಿರುವುದರಿಂದ ರೂ. 10,00,000/– (ಹತ್ತು ಲಕ್ಷ ರೂಪಾಯಿ)ಗಳನ್ನು ಅತಿಶೀಘ್ರವಾಗಿ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (24) ರಲ್ಲಿ "ಕರಗ ಉತ್ಸವ ಹಾಗೂ ಸಮಾರಂಭದ ಇತರ ಕೆಲಸ ಕಾರ್ಯಗಳು, ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನ ರಸ್ತೆ" ರವರಿಗೆ ನಿಗಧಿ ಪಡಿಸಲಾಗಿರುವ ರೂ. 50.00 ಲಕ್ಷಗಳ (ರೂ. ಐವತ್ತು ಲಕ್ಷಗಳು ಮಾತ್ರ) ಅನುದಾನದ ಪೈಕಿ ರೂ. 10.00 ಲಕ್ಷ (ರೂ. ಹತ್ತು ಲಕ್ಷಗಳು ಮಾತ್ರ) ಗಳನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ದಿನಾಂಕ : 05–04–2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 03]. ವಿಷಯದ ಸಂಖ್ಯೆ :–ತೆಆಸ್ಥಾಸ/16/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)191/10–11, ದಿನಾಂಕ : 05–04–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ.ಎನ್. ಸದಾಶಿವ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಟಿ. ರಮೇಶ್, ಪ್ರಧಾನ ಕಾರ್ಯದರ್ಶಿ "ಶ್ರೀ ಚೌಡೇಶ್ವರಿ ದೇವಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘ" ನಂ. 23, 16ನೇ ಅಡ್ಡರಸ್ತೆ, ರಂಗಸ್ವಾಮಿ ಗುಡಿ ಬೀದಿ, ಚಿಕ್ಕಪೇಟೆ, ಬೆಂಗಳೂರು –560 053. ರವರು ಸಲ್ಲಿಸಿರುವ ಪತ್ರವನ್ನು ಲಗತ್ತಿಸುತ್ತಾ, ತಮ್ಮ ಸಂಘವು ಹಲವಾರು ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಚಟುವಟಿಕೆಗಳನ್ನು ನಡೆಸುತ್ತಿರುವ ತಮ್ಮ ಸಂಘದ ಕಾರ್ಯಚಟುವಟಿಕೆಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನ ಸಹಾಯ ಕೋರಿರುತ್ತಾರೆಂದು ತಿಳಿಸುತ್ತಾ, ಸದರಿಯವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸೂಕ್ತ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (19) ರಲ್ಲಿ "ಶ್ರೀ ಚೌಡೇಶ್ವರಿ ದೇವಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘ" ರವರಿಗೆ ನಿಗಧಿ ಪಡಿಸಲಾಗಿರುವ ರೂ. 8.00 ಲಕ್ಷ (ರೂ. ಎಂಟು ಲಕ್ಷಗಳು ಮಾತ್ರ) ಗಳನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ದಿನಾಂಕ : 05–04–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 04]. ವಿಷಯದ ಸಂಖ್ಯೆ :–ತೆಆಸ್ಥಾಸ/17/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)188/10–11, ದಿನಾಂಕ : 05–04–2011 ರಲ್ಲಿ ವಿವರಿಸಿರುವಂತೆ, ವೈದ್ಯಕೀಯ ಅಧೀಕ್ಷಕರು, ವಾಣಿ ವಿಲಾಸ ಆಸ್ಪತ್ರೆ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು 560 002. ರವರು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ, ವಾಣಿ ವಿಲಾಸ ಆಸ್ಪತ್ರೆಯಲ್ಲಿ ಲೋಕೋಪಯೋಗಿ ವತಿಯಿಂದ ಹೊಸದಾಗಿ ನಿರ್ಮಿಸಲಾಗುತ್ತಿರುವ ನವಜಾತ

ಶಿಸುವಿನ ತೀವ್ರ ನಿಗಾ ಘಟಕ (NICU) ಸಂಬಂಧ ಬೇಕಾದ ವೈದ್ಯಕೀಯ ಉಪಕರಣಗಳನ್ನು ಶಿಶು ವೈದ್ಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ವೈದ್ಯಕೀಯ ಉಪಕರಣಗಳನ್ನು ಅಂದಾಜು ಸುಮಾರು ರೂ. 2.00 ಕೋಟಿಗಳ ವೆಚ್ಚದಲ್ಲಿ ಬೇಡಿಕೆ ಪತ್ರ ಸಲ್ಲಿಸುತ್ತಾ, ತಮ್ಮ ಆಸ್ಪತ್ರೆಯಲ್ಲಿ ಹೆಚ್ಚಾಗಿ ಪ್ರವಸವಾಗುತ್ತಿದ್ದು ಇದರಿಂದ ಹೆಚ್ಚಿನ ಮಕ್ಕಳು ನವಜಾತ ಶಿಶುವಿನ ತೀವ್ರ ನಿಗಾ ಘಟಕ (NICU) ಕ್ಕೆ ದಾಖಲಾಗುತ್ತಾರೆ. ಅಲ್ಲದೆ ತಮ್ಮ ಅಧೀನದ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ಪತ್ರೆಯಿಂದ ಈ ಆಸ್ಪತ್ರೆಗೆ ರೆಫರಲ್ ಆಗಿ ಬರುವ ಮಕ್ಕಳು ಹೆಚ್ಚಾಗಿ ದಾಖಲಾಗುವುದರಿಂದ ಈ ಉಪಕರಣಗಳು ಅತ್ಯಾವಶ್ಯಕವಾತರುತ್ತದೆಂದು ತಿಳಿಸುತ್ತಾ, ಬೃಹತ್ ಬೆಂಗಳೂರು ಮಹಾನಗ ಪಾಲಿಕೆ ವತಿಯಿಂದ ವತಿಯಿಂದ ಈ ಹಿಂದೆ ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗಕ್ಕೆ ರೂ. 35.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದ್ದು ಆಯವ್ಯಯದಲ್ಲಿ ವಿವರವನ್ನು ಸಲ್ಲಿಸಲಾತರುತ್ತದೆಂದು ತಿಳಿಸಿ, ನವಜಾತ ಶಿಶು ವಿಭಾಗಕ್ಕೂ ಕೂಡ ರೂ 50.00 ಲಕ್ಷಗಳ ಅನುದಾನವನ್ನು 2010–11ನೇ ಸಾಲಿಗೆ ಬಿಡುಗಡೆ ಮಾಡಬೇಕಾಗಿ ಕೋರಿರುತ್ತಾರೆ.

2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ವಿವಿಧ ಸಂಘ ಸಂಸ್ಥೆಗಳಿಗೆ ಈಗಾಗಲೇ ಹಂಚಿಕೆಯಾಗಿರುತ್ತದೆ. ಕೌನ್ಸಿಲ್ ಸಭೆಯಲ್ಲಿ ಅನುಮೋದನೆಯಾಗಿರುವ ಅನುದಾನಗಳನ್ನು ಬಿಟ್ಟು ಇನ್ನು ಮುಂದೆ ಬರುವ ಸಹಾಯಾನುಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯತೆ ಇರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– 2011–12ನೇ ಸಾಲಿನ ಆಯವ್ಯಯದಲ್ಲಿ ಪರಿಗಣಿಸಬಹುದಾಗಿರುತ್ತದೆಂದು ಸಮಿತಿಯು ತೀರ್ಮಾನಿಸಲಾಯಿತು.**

## 05]. ವಿಷಯದ ಸಂಖ್ಯೆ :–ತೆಆಸ್ಥಾಸ/18/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)186/10–11, ದಿನಾಂಕ : 05–04–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ.ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಜಿ. ಮಂಜುನಾಥ್ ರಾಜು ಕಾಡು ಮಲ್ಲೇಶ್ವರಂ ವಾರ್ಡ್ ಸಂಖ್ಯೆ – 65 ರ ಸದಸ್ಯರು, ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸದಸ್ಯರು, ಆದ ಇವರು ತಮ್ಮ ಪತ್ರದಲ್ಲಿ ನಾದಜ್ಯೋತಿ ಶ್ರೀ ತ್ಯಾಗರಾಜಸ್ವಾಮಿ ಭಜನಾ ಸಭಾ (ರಿ) ಶ್ರೀ ಪುರಂದರದಾಸರ ಮತ್ತು ತ್ಯಾಗರಾಜ ಸ್ವಾಮಿಗಳ ಆರಾಧನೀತ್ಸವದ 46ನೇ ನಾದಜ್ಯೋತಿ ಸಂಗೀತೋತ್ಸವವನ್ನು ದಿನಾಂಕ 29–01–2011 ರಿಂದ 06–02–2011 ರವರೆಗೆ ಸಾಸವಿ ಮಹಲ್ ಮಲ್ಲೇಶ್ವರದಲ್ಲಿ ಹಮ್ಮಿಕೊಂಡಿದ್ದು ಸದರಿ ಕಾರ್ಯಕ್ರಮಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನ ಸಹಾಯ ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸಿ, ನಾದಜ್ಯೋತಿ ಶ್ರೀ ತ್ಯಾಗರಾಜಸ್ವಾಮಿ ಭಜನಾ ಸಭಾ (ರಿ) ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸೂಕ್ತ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿದೆ.

2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ವಿವಿಧ ಸಂಘ ಸಂಸ್ಥೆಗಳಿಗೆ ಈಗಾಗಲೇ ಹಂಚಿಕೆಯಾಗಿರುತ್ತದೆ. ಕೌನ್ಸಿಲ್ ಸಭೆಯಲ್ಲಿ ಅನುಮೋದನೆಯಾಗಿರುವ ಅನುದಾನಗಳನ್ನು ಬಿಟ್ಟು ಇನ್ನು ಮುಂದೆ ಬರುವ ಸಹಾಯಾನುಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯತೆ ಇರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ದಿನಾಂಕ : 05–04–2011ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ, ಸಂಘ ಸಂಸ್ಥೆಗಳಿಗೆ 2010–11ರ ಪರಿಷ್ಕೃತ ಆಯವ್ಯದಲ್ಲಿ ಮರು ಹೊಂದಾಣಿಕೆ ಮಾಡಿರುವ ಅನುದಾನದಲ್ಲಿ ರೂ.25,000/– (ಇಪ್ಪತ್ತೈದು ಸಾವಿರ) ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## 06]. ವಿಷಯದ ಸಂಖ್ಯೆ :–ತೆಆಸ್ಥಾಸ/19/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)187/10–11, ದಿನಾಂಕ : 05–04–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ.ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಕೆ ವೆಂಕಟೇಶ, ಖಜಾಂಚಿ, ಕರ್ನಾಟಕ ಹವ್ಯಾಸಿ ದೇಹದಾರ್ಢ್ಯ ಸಂಸ್ಥೆ ರವರು ಸಲ್ಲಿಸಿರುವ ಪತ್ರವನ್ನು ಲಗತ್ತಿಸುತ್ತಾ, ತಮ್ಮ ಸಂಸ್ಥೆಯ ಕಾರ್ಯ ಚಟುವಟಿಕೆಗಳಿಗೆ 2010–11 ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕಾಯ್ದಿರಿಸಿರುವ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆಂದು ತಿಳಿಸಿ, "ಕರ್ನಾಟಕ ಹವ್ಯಾಸಿ ದೇಹದಾರ್ಢ್ಯ ಸಂಸ್ಥೆ" ರವರಿಗೆ 2010–11 ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಲಾಗಿರುವ ರೂ 5.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (69) ರಲ್ಲಿ "ಕರ್ನಾಟಕ ಹವ್ಯಾಸಿ ದೇಹದಾರ್ಢ್ಯ ಸಂಸ್ಥೆ, ನಾಗರಬಾವಿ" ರವರಿಗೆ ನಿಗಧಿ ಪಡಿಸಲಾಗಿರುವ ರೂ. 5.00 ಲಕ್ಷಗಳ (ರೂ. ಐದು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ದಿನಾಂಕ : 05–04–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

## 07]. ವಿಷಯದ ಸಂಖ್ಯೆ :–ತೆಆಸ್ಥಾಸ/20/2011–12

ಆಯುಕ್ತರ ಟಿಪ್ಪಣಿ ದಿನಾಂಕ : 31–03–2011 ರಲ್ಲಿ ವಿವರಿಸಿರುವಂತೆ, ರಾಜರಾಜೇಶ್ವರಿ ವಲಯದ ಬಂಗಾರಪ್ಪನಗರ, ಜವರೇಗೌಡನ ದೊಡ್ಡಿ ಮತ್ತು ಡಿಸೌಜಾ ನಗರಗಳಿಗೆ ಸಂಪರ್ಕ ಕಲ್ಪಿಸುವ ಸುತ್ತಮುತ್ತಿಲಿನ ರಸ್ತೆಗಳು, ಹಾಗೂ ಜವರೇಗೌಡನ ದೊಡ್ಡಿ ರಸ್ತೆಯಿಂದ ಡಿಸೌಜಾನಗರದ ವರೆಗೆ (ದರ್ಶನ್ ಫಾರಂ ಮತ್ತು ನೈಸ್ ರಸ್ತೆ ಅಂಡಾರ್‌ಪಾಸ್ ಮುಖಾಂತರ) ಅಗಲೀಕರಣ ಮತ್ತು ಸಬಲೀಕರಣಗೊಳಿಸಲು ಯೋಜನಾ ವರದಿ ತಯಾರಿಸಲಾಗಿದೆ. ಯೋಜನಾ ವರದಿಯನ್ನು ತಯಾರಿಸಲು ಮೆ॥ ಆಲ್‌ಕಾನ್ ಕನ್ಸ್‌ಲ್ಟೆಂಟ್ಸ್ ಅಂಡ್ ಆರ್ಕಿಟೆಕ್ಟ್ ರವರ ಸೇವೆಯನ್ನು ಪಡೆದುಕೊಂಡು ಯೋಜನಾ ವರದಿಯನ್ನು ತಯಾರಿಸಲಾಗಿದೆ. ಪ್ರಸ್ತಾಪಿಸಿರುವ ರಸ್ತೆಗಳು ಪ್ರಮುಖ ರಸ್ತೆಗಳಿಗೆ ಸಂಪರ್ಕ ಕಲ್ಪಿಸಿರುವ ಅತಿ ಮುಖ್ಯರಸ್ತೆಗಳಾಗಿದ್ದು, ಹಾಲಿ ಇರುವ ರಸ್ತೆಗಳು ಇಕ್ಕಟಾಗಿದ್ದು, ಕೆಲವು ಕಡೆ ಅಗಲೀಕರಣಗೊಳಿಸುವ ಅನಿವಾರ್ಯತೆ ಇದೆ. ರಸ್ತೆಯ ಗುಣಮಟ್ಟಕ್ಕೆ ಅನುಗುಣವಾಗಿ ಸಿ.ಬಿ.ಆರ್ ಮತ್ತು ಬಿ.ಬಿ.ಡಿ ಟೆಸ್ಟ್‌ಗಳನ್ನು ಮಾಡಿಸಿ ಅದರಂತೆ, Crust thickness ಅನ್ನು ಯೋಜನಾ ವರದಿಯಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದು ಮುಖ್ಯ ಅಭಿಯಂತರರು (ರಸ್ತೆ ಮೂಲಭೂರ್ತ ಸೌಕರ್ಯ) ರವರು ತಿಳಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಕೆಳಕಂಡ ಅಂದಾಜುಗಳನ್ನು ತಯಾರಿಸಲಾಗಿದೆ.

1. ಜವರೇಗೌಡನ ದೊಡ್ಡಿ ರಸ್ತೆಯಿಂದ ಡಿಸೌಜಾನಗರದ ಅಗಲೀಕರಣ ಮತ್ತು ಸಬಲೀಕರಣ (ದರ್ಶನ್ ಫಾರಂ ಮತ್ತು ನೈಸ್ ರಸ್ತೆ ಅಂಡಾರ್‌ಪಾಸ್ ಮುಖಾಂತರ – ಅಂದಾಜು ಮೊತ್ತ ರೂ – 222.00 ಲಕ್ಷಗಳು

ಮೇಲ್ಕಂಡ ಕಾಮಗಾರಿಗೆ ಸೂಕ್ತ ಅನುದಾನ ಬಿಡುಗಡೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :- ದಿನಾಂಕ : 31-03-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 08]. ವಿಷಯದ ಸಂಖ್ಯೆ :-ತೆಆಸ್ಥಾಸ/21/2011-12

ಆಯುಕ್ತರ ಟಿಪ್ಪಣಿ ದಿನಾಂಕ : 31-03-2011 ರಲ್ಲಿ ವಿವರಿಸಿರುವಂತೆ, ರಾಜರಾಜೇಶ್ವರಿ ವಲಯದ ಬಂಗಾರಪ್ಪನಗರ, ಜವರೇಗೌಡನ ದೊಡ್ಡಿ ಮತ್ತು ಡಿಸೌಜಾ ನಗರಗಳಿಗೆ ಸಂಪರ್ಕ ಕಲ್ಪಿಸುವ, ಸುತ್ತಮುತ್ತಿಲಿನ ರಸ್ತೆಗಳು ಹಾಗೂ ನೈಸ್ ರಸ್ತೆಗೆ ಸಮಾನಾಂತರ ರಸ್ತೆಯಿಂದ ಬಂಗಾರಪ್ಪನಗರದ ವರೆಗೆ ಅಗಲೀಕರಣ ಮತ್ತು ಸಬಲೀಕರಣಗೊಳಿಸಲು ಯೋಜನಾ ವರದಿ ತಯಾರಿಸಲಾಗಿದೆ. ಯೋಜನಾ ವರದಿಯನ್ನು ತಯಾರಿಸಲು ಮೆ॥ ಆಲ್‌ಕಾನ್ ಕನ್‌ಸ್ಟೆಂಟ್ಸ್ ಅಂಡ್ ಆರ್ಕಿಟೆಕ್ಟ್ ರವರ ಸೇವೆಯನ್ನು ಪಡೆದುಕೊಂಡು ಯೋಜನಾ ವರದಿಯನ್ನು ತಯಾರಿಸಲಾಗಿದೆ. ಪ್ರಸ್ತಾಪಿಸಿರುವ ರಸ್ತೆಗಳು ಪ್ರಮುಖ ರಸ್ತೆಗಳಿಗೆ ಸಂಪರ್ಕ ಕಲ್ಪಿಸಿರುವ ಅತಿ ಮುಖ್ಯರಸ್ತೆಗಳಾಗಿದ್ದು, ಹಾಲಿ ಇರುವ ರಸ್ತೆಗಳು ಇಕ್ಕಟಾಗಿದ್ದು, ಕೆಲವು ಕಡೆ ಅಗಲೀಕರಣಗೊಳಿಸುವ ಅನಿವಾರ್ಯತೆ ಇದೆ. ರಸ್ತೆಯ ಗುಣಮಟ್ಟಕ್ಕೆ ಅನುಗುಣವಾಗಿ ಸಿ.ಬಿ.ಆರ್ ಮತ್ತು ಬಿ.ಬಿ.ಡಿ ಟೆಸ್ಟ್‌ಗಳನ್ನು ಮಾಡಿಸಿ ಅದರಂತೆ, Crust thickness ಅನ್ನು ಯೋಜನಾ ವರದಿಯಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದು ಮುಖ್ಯ ಅಭಿಯಂತರರು ರಸ್ತೆ ಮೂಲಭೂರ್ತ ಸೌಕರ್ಯ ರವರು ತಿಳಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಕೆಳಕಂಡ ಅಂದಾಜುಗಳನ್ನು ತಯಾರಿಸಲಾಗಿದೆ.

1. ನೈಸ್ ರಸ್ತೆಗೆ ಸಮಾನಾಂತರದಿಂದ ಬಂಗಾರಪ್ಪನಗರದ ವರೆಗೆ ಅಗಲೀಕರಣ ಮತ್ತು ಸಬಲೀಕರಣಗೊಳಿಸುವ ಕಾಮಗಾರಿ – ಅಂದಾಜು ಮೊತ್ತ – ರೂ.132.00 ಲಕ್ಷಗಳು.

ಮೇಲ್ಕಂಡ ಕಾಮಗಾರಿಗೆ ಸೂಕ್ತ ಅನುದಾನ ಬಿಡುಗಡೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :- ದಿನಾಂಕ : 31-03-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 09]. ವಿಷಯದ ಸಂಖ್ಯೆ :-ತೆಆಸ್ಥಾಸ/22/2011-12

ಆಯುಕ್ತರ ಟಿಪ್ಪಣಿ ದಿನಾಂಕ : 31-03-2011 ರಲ್ಲಿ ವಿವರಿಸಿರುವಂತೆ, ಮಲ್ಲೇಶ್ವರಂ ಕ್ಷೇತ್ರ ವ್ಯಾಪ್ತಿಯಲ್ಲಿ ಇಲ್ಲಿಯವರೆಗೂ ಬ್ರಹ್ಮಣ ಜನಾಂಗದವರಿಗೆ ಮಾತ್ರ ವೈದಿಕ ಸಭಾ ಭವನವಿದ್ದು, ಬ್ರಾಹ್ಮಣೇತರ ಜನಾಂಗದವರಿಗೆ ಯಾವುದೇ ವೈದಿಕ ಸಭಾ ಭವನವಿರುವುದಿಲ್ಲ.

ಬ್ರಾಹ್ಮಣೇತರ ಜನಾಂಗದವರು ಇಲ್ಲಿಯ ತನಕ ಮರಣೋತ್ತರ ಉತ್ತರ ಕ್ರಿಯಾದಿ ಕಾರ್ಯಕ್ರಮಗಳನ್ನು ಸ್ಯಾಂಕಿ ಕೆರೆಯಲ್ಲಿ ನೆರವೇರಿಸುತ್ತಿದ್ದು ಕೆರೆಯು ಈ ಕ್ರಯೆಯಿಂದ ಕಲುಷಿತಗೊಂಡು ಜಲಚರ ಪ್ರಾಣಿಗಳಿಗೆ ಹಾಗೂ ವಾಯು ವಿಹಾರಿಗಳಿಗೆ ತುಂಬಾ ಅನಾನುಕೂಲ ಉಂಟಾಗುತ್ತಿತ್ತು.

ಇದನ್ನು ಮನಗೊಂಡ ಮಲ್ಲೇಶ್ವರಂ ಕ್ಷೇತ್ರದ ಸನ್ಮಾನ್ಯ ಶಾಸಕರಾದ ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ್ ರವರು ಬ್ರಾಹ್ಮಣೇತರ ಜನಾಂಗದವರಿಗೆ ಅನುಕೂಲವಾಗುವಂತೆ ಬಿಬಿಎಂಪಿ ವತಿಯಿಂದ ಒಂದು ಸಮುದಾಯ ಭವನವನ್ನು ನಿರ್ಮಿಸಲು ಕೋರಿರುವ ಮೇರೆಗೆ ಬಿಬಿಎಂಪಿ ವತಿಯಿಂದ ರೂ.69.90 ಲಕ್ಷಗಳ ಅಂದಾಜು ವೆಚ್ಚದಲ್ಲಿ ಸಮುದಾಯ ಭವನವನ್ನು ನಿರ್ಮಿಸಲಾಗಿರುತ್ತದೆ.

ಸದರಿ ಸಮುದಾಯ ಭವನವನ್ನು ಸಾರ್ವಜನಿಕರ ಉಪಯೋಗಕ್ಕೆ ವಿನಿಯೋಗಿಸಲು ಅನುಕೂಲವಾಗುವಂತೆ ಬಾಡಿಗೆ ನಿಗಧಿ ಪಡಿಸಲು ಪಿಡಬ್ಲ್ಯೂಡಿ ನಿಯಮಾವಳಿಗಳ ಪ್ರಕಾರ ಬಾಡಿಗೆ ದರ ತಃಖ್ತೆಯನ್ನು ತಯಾರಿಸಿದ್ದು ಅದರಂತೆ ದಿನಂಪ್ರತಿ ರೂ.2822.00 ಆಗಿರುತ್ತದೆ. ಇದರ ಬಗ್ಗೆ ದಿನಾಂಕ : 15-02-2011ರಂದು ಮಾನ್ಯ ಶಾಸಕರು ಹಾಗೂ ಸ್ಥಳೀಯ ಸಾರ್ವಜನಿಕರೊಂದಿಗೆ ಸಭೆ ನಡೆಸಿ ಈ ಕಟ್ಟಡಕ್ಕೆ ಬಾಡಿಗೆ ನಿಗಧಿ ಪಡಿಸುವ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ್ದು ಸಭೆಯ ನಿರ್ಧಾರದಂತೆ ಈ ಕೆಳಕಂಡಂತೆ ಬಾಡಿಗೆ ನಿಗಧಿ ಪಡಿಸಲು ತೀರ್ಮಾನಿಸಲಾಗಿದೆ.

| ಕ್ರ. ಸಂ. | ವಿವರ | ದಿನನಿತ್ಯದ ಬಾಡಿಗೆ ರೂ.ಗಳು |
|---|---|---|
| 1. | ಪೂಜೆ ಹಾಗೂ ವೈದಿಕ ಕ್ರಿಯೆಗೆ ಸೀಮಿತಗೊಂಡಂತೆ (ಮೊದಲನೆ ಮಹಡಿಯನ್ನು ಹೊರತು ಪಡಿಸಿ) | 750.00 |
| 2. | ಪೂಜೆ, ವೈದಿಕ ಕ್ರಿಯೆ ಹಾಗೂ ಮೊದಲನೇ ಮಹಡಿಯ ಊಟೋಪಾಚರದ ಕೊಠಡಿಯನ್ನೊಳಗೊಂಡಂತೆ | 3000.00 |

ಈ ಮೇಲ್ಕಂಡ ಕಟ್ಟಡಕ್ಕೆ 3 ಕಾವಲುಗಾರರು (8 ಗಂಟೆ ಕಾಲಕ್ಕೆ ಒಬ್ಬರಂತೆ) ಮತ್ತು 2 ಶುಚಿಗಾರರು ಬೆಳಿಗ್ಗೆಯಿಂದ ಸಂಜೆಯವರೆಗೂ ಮತ್ತು ಒಬ್ಬ ಅಕ್ಷರಸ್ತ ಸಹಾಯಕರನ್ನು ಸಹ ನೇಮಿಸಲು ಈಗಾಗಲೇ ಕ್ರಮವಹಿಸಲಾಗಿದೆ. ಇದರ ಜೊತೆಗೆ ಮಾಹೆಯಾನ ವಿದ್ಯುತ್‌ಛ್ಚಕ್ತಿ ಶುಲ್ಕ ಮತ್ತು ನೀರಿನ ಶುಲ್ಕವನ್ನು ಬಿಬಿಎಂಪಿ ವತಿಯಿಂದ ಭರಿಸಬೇಕಾಗಿರುತ್ತದೆ.

ಇವೆಲ್ಲದರ ಖರ್ಚನ್ನು ಗಣನೆಗೆ ತೆಗೆದುಕೊಂಡರೆ ಈಗ ನಿಗಧಿ ಪಡಿಸಿರುವ ಬಾಡಿಗೆ ದರವು ಸಾರ್ವಜನಿಕರಿಗೆ ಹೊರೆಯಾಗಲಾರದು.

ಆದುದರಿಂದ ಈ ಕಟ್ಟಡಕ್ಕೆ ನಿಗಧಿ ಪಡಿಸಿರುವ ಬಾಡಿಗೆ ದರವನ್ನು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :- ದಿನಾಂಕ : 31-03-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 10]. ವಿಷಯದ ಸಂಖ್ಯೆ :-ತೆಆಸ್ಥಾಸ/23/2011-12

**ನಿರ್ಣಯ :- ಪ್ರೊ. ಎಂ. ವಿ.ಕೃಷ್ಣರಾವ್ ರವರಿಂದ ರಚಿತವಾದ ಬೆಂಗಳೂರು ಕೆಂಪೇಗೌಡ ಎಂಬ ಪುಸ್ತಕವನ್ನು 1964ರಲ್ಲಿ ಬೆಂಗಳೂರು ನಗರ ಕಾರ್ಪೋರೇಷನ್‌ನಿಂದ ಪ್ರಕಟಣೆಗೊಳಿಸಲಾಗಿತ್ತು. 2011ರಲ್ಲಿ ಕೆಂಪೇಗೌಡರ 500ನೇ ವರ್ಷದ ಜಯಂತೋತ್ಸವವನ್ನು ಆಚರಿಸುತ್ತಿರುವ ಈ ಸುಸಂದರ್ಭದಲ್ಲಿ ಮೇಲೆ ತಿಳಿಸಿರುವ ಪುಸ್ತಕದ 5000 (ಐದು ಸಾವಿರ) ಪ್ರತಿಗಳನ್ನು ಮರು ಮುದ್ರಿಸಿ ಪ್ರಕಟಣೆಗೊಳಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## 11]. ವಿಷಯದ ಸಂಖ್ಯೆ :-ತೆಆಸ್ಥಾಸ/24/2011-12

**ನಿರ್ಣಯ :- ಬಸವನಗುಡಿಯಲ್ಲಿ ಕಳೆದ ಅನೇಕ ವರ್ಷಗಳಿಂದ ಬಸವನಗುಡಿ ಕಪ್ ಕ್ರಿಕೆಟ್ ಕ್ರೀಡಾ ಉತ್ಸವವನ್ನು ನಡೆಸಿಕೊಂಡು ಬರಲಾಗುತ್ತಿದ್ದು, ಈ ವರ್ಷವೂ ಸಹಾ ಮೇ-ಜೂನ್ ತಿಂಗಳಿನಲ್ಲಿ ರಾಜ್ಯ ಮಟ್ಟದ ಕ್ರಿಕೆಟ್ ಕ್ರೀಡಾ ಉತ್ಸವವನ್ನು ನಡೆಸಲು ನಿಶ್ಚಯಿಸಲಾಗಿದ್ದು. ಕಟ್ಟೆ ಬಳಗ ಹಾಗೂ ಶ್ರೀ ಕಾರಂಜಿ ಶ್ರೀರಾಮ ಸೇವಾ ಸಮಿತಿ ಟ್ರಸ್ಟ್‌ನ**

**<u>ಸಂಯುಕ್ತ ಆಶ್ರಯದಲ್ಲಿ ಈ ಕ್ರಿಕೆಟ್ ಉತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಬಸವನಗುಡಿಯಲ್ಲಿ ನಡೆಸಲು ಹಾಗೂ ಕ್ರೀಡೆಗಳಿಗೆ ವಿಶೇಷ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಈ ಕಾರ್ಯಕ್ರಮಕ್ಕೆ ಸಂಘ ಸಂಸ್ಥೆಗಳಿಗೆ ನೀಡುವ ಅನುದಾನದಲ್ಲಿ ರೂ.20,00,000 (ಇಪ್ಪತ್ತು ಲಕ್ಷ ಮಾತ್ರ) ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.</u>**

<u>12]. ವಿಷಯದ ಸಂಖ್ಯೆ :–ತೆಆಸ್ಥಾಸ/25/2011–12</u>

**<u>ನಿರ್ಣಯ :–</u>** ಡಾ॥. ವಿ.ಆಂಜನಪ್ಪ, ಅಧ್ಯಕ್ಷರು, ಅಖಿಲ ಭಾರತ ಒಕ್ಕಲಿಗರ ಮಹಾಸಭಾ (ರಿ.) ರವರು ಮಹಾಸಭಾದ ರಚನಾತ್ಮಕ ಜನಪರ ಕಾರ್ಯಚಟುವಟಿಕೆಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನಸಹಾಯ ಮಂಜೂರು ಮಾಡಲು ಕೋರಿರುವ ಹಿನ್ನೆಲೆಯಲ್ಲಿ **<u>ಸಂಘ ಸಂಸ್ಥೆಗಳಿಗೆ 2010–11ರ ಪರಿಷ್ಕೃತ ಆಯವ್ಯದಲ್ಲಿ ಮರು ಹೊಂದಾಣಿಕೆ ಮಾಡಿರುವ ಅನುದಾನದಲ್ಲಿ ರೂ.5,00,000/– (ಐದು ಲಕ್ಷ ಮಾತ್ರ) ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.</u>**

<u>13]. ವಿಷಯದ ಸಂಖ್ಯೆ :–ತೆಆಸ್ಥಾಸ/26/2011–12</u>

ನಿರ್ಣಯ :– ಶ್ರೀಮತಿ. ಎಂ.ಜಿ. ಜಯರತ್ನ ಶ್ರೀರಾಮಮಂದಿರ ವಾರ್ಡ್ ಸಂಖ್ಯೆ–108ರ ಸದಸ್ಯರು, ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸದಸ್ಯರು, ಆದ ಇವರು ತಮ್ಮ ಪತ್ರದಲ್ಲಿ, ರಾಜಾಜಿನಗರ ಪದ್ಮಭೂಷಣ ಡಾ॥ ರಾಜ್‌ಕುಮಾರ್ ಪ್ರತಿಷ್ಠಾಪನ ಮಂಡಳಿ (ರಿ) ರವರ ವತಿಯಿಂದ ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು–10. ಇಲ್ಲಿ ಪದ್ಮಭೂಷಣ ಡಾ॥ ರಾಜ್‌ಕುಮಾರ್ ರವರ ಕಂಚಿನ ಪ್ರತಿಮೆಯನ್ನು ಪ್ರತಿಷ್ಠಾಪಿಸುವ ಕಾಮಗಾರಿಯನ್ನು 21.00 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದ್ದು, ಸದರಿ ಕಾಮಗಾರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನಸಹಾಯ ಮಂಜೂರು ಮಾಡಲು ಕೋರಿರುವ ಹಿನ್ನೆಲೆಯಲ್ಲಿ **<u>ಸಂಘ ಸಂಸ್ಥೆಗಳಿಗೆ 2010–11ರ ಪರಿಷ್ಕೃತ ಆಯವ್ಯದಲ್ಲಿ ಮರು ಹೊಂದಾಣಿಕೆ ಮಾಡಿರುವ ಅನುದಾನದಲ್ಲಿ ರೂ.10,00,000/– (ಹತ್ತು ಲಕ್ಷ ಮಾತ್ರ) ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.</u>**

<u>14]. ವಿಷಯದ ಸಂಖ್ಯೆ :–ತೆಆಸ್ಥಾಸ/27/2011–12</u>

**<u>ನಿರ್ಣಯ :–</u>** ಶ್ರೀ. ಟಿ.ಎ. ನಾರಾಯಣಗೌಡರು, ರಾಜ್ಯಾಧ್ಯಕ್ಷರು, ಕರ್ನಾಟಕ ರಕ್ಷಣಾ ವೇದಿಕೆ ಇವರು ತಮ್ಮ ವೇದಿಕೆಯ ವತಿಯಿಂದ 2011 ಏಪ್ರಿಲ್ ತಿಂಗಳ 28, 29 ಮತ್ತು 30 ರಂದು ನಡೆಸಲಿರುವ, ಕರವೇ 10ವರ್ಷ–ಜಾನಪದ ಸಂಭ್ರಮ ಎಂಬ ರಾಜ್ಯ ಮಟ್ಟದ ಸಮಾವೇಶಕ್ಕಾಗಿ ಬೃಹತ್

ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನಸಹಾಯ ಮಂಜೂರು ಮಾಡಲು ಕೋರಿರುವ ಹಿನ್ನೆಲೆಯಲ್ಲಿ **ಸಂಘ ಸಂಸ್ಥೆಗಳಿಗೆ 2010-11ರ ಪರಿಷ್ಕೃತ ಆಯವ್ಯಯದಲ್ಲಿ ಮರು ಹೊಂದಾಣಿಕೆ ಮಾಡಿರುವ ಅನುದಾನದಾನದಲ್ಲಿ ರೂ.20,00,000/- (ಇಪ್ಪತ್ತು ಲಕ್ಷ ಮಾತ್ರ) ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

15]. ವಿಷಯದ ಸಂಖ್ಯೆ :-ತೆಆಸ್ಥಾಸ/28/2011-12

ನಿರ್ಣಯ :- ಫೌಂಡೇಶನ್ ಫಾರ್ ಆರ್ಟ್ ಅಂಡ್ ಕಲ್ಚರ್ ಫಾರ್ ಡೆಫ್, ಎಂಬ ಸಂಸ್ಥೆಯು ಶ್ರವಣ ಮಾಂದ್ಯ ವಿಕಲ ಚೇತನರ ಏಳಿಗೆಗಾಗಿ ದುಡಿಯುತ್ತಿರುವ ಒಂದು ಸಂಸ್ಥೆಯಾಗಿದ್ದು, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ 2010-11ನೇ ಸಾಲಿನ ಆಯವ್ಯಯದಲ್ಲಿ ರೂ.1,00,000/- (ಒಂದು ಲಕ್ಷ ಮಾತ್ರ) ಗಳ ಅನುದಾನ ಕಾಯ್ದಿರಿಸಲಾಗಿರುವುದನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

16]. ವಿಷಯದ ಸಂಖ್ಯೆ :-ತೆಆಸ್ಥಾಸ/29/2011-12

ನಿರ್ಣಯ :- ದೊಡ್ಡ ಬಸವನಗುಡಿ **"ಕಡಲೆಕಾಯಿ ಪರಿಷೆ"** ಉತ್ಸವವನ್ನು ಸಮರ್ಥನ ಟ್ರಸ್ಟ್ (ರಿ)" ರವರ ವತಿಯಿಂದ ನಡೆಸಲಾಗಿದ್ದು, ಈ ಸಂಬಂಧ ಮಹಾನಗರ ಪಾಲಿಕೆಯಿಂದ 2010-11ನೇ ಸಾಲಿನ ಆಯವ್ಯಯದಲ್ಲಿ **(ಪಿ-ಕೋಡ್ 2213)** ಕಾಯ್ದಿರಿಸಿರುವ ಅನುದಾನ ರೂ.15.00 ಲಕ್ಷಗಳು ಹಾಗೂ ಉತ್ಸವಕ್ಕೆ ಹೆಚ್ಚುವರಿ ವೆಚ್ಚವಾಗಿರುವುದನ್ನು ಪರಿಗಣಿಸಿ 2010-11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗಿರುವ ರೂ.7.00 ಲಕ್ಷಗಳು ಸೇರಿ ಒಟ್ಟು ರೂ.22.00 ಲಕ್ಷಗಳನ್ನು **ಸಮರ್ಥನ ಟ್ರಸ್ಟ್ (ರಿ)** ಗೆ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

17]. ವಿಷಯದ ಸಂಖ್ಯೆ :-ತೆಆಸ್ಥಾಸ/30/2011-12

ನಿರ್ಣಯ: ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಹಾಗೂ ಮುಖ್ಯ ಲೆಕ್ಕಾಧಿಕಾರಿಗಳೊಂದಿಗೆ ಚರ್ಚಿಸಲಾಯಿತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2010-11ನೇ ಸಾಲಿನ ಆಯವ್ಯಯ ಸಿದ್ದತೆಯಲ್ಲಿ ಕಛೇರಿ ವೇಳೆಗೆ ಮೀರಿ ಹಾಗೂ ರಜಾ ದಿನಗಳಲ್ಲಿ ಸಹಾ ಕರ್ತವ್ಯ ನಿರ್ವಹಿಸಿರುವ ಈ ಕೆಳಕಂಡ ಅಧಿಕಾರಿ/ಸಿಬ್ಬಂಧಿಗಳಿಗೆ ಸೆಪ್ಟಂಬರ್-2010ರ ಮಾಹೆಯಲ್ಲಿ ಅವರುಗಳು ಪಡೆಯುತ್ತಿದ್ದ ಒಂದು ತಿಂಗಳ ಮೂಲ ವೇತನವನ್ನು (ಇತರೆ ಭತ್ಯಗಳನ್ನು ಹೊರತುಪಡಿಸಿ) ಸರ್ಕಾರದ ಆದೇಶ ಸಂಖ್ಯೆ: ಅಇ 10 ಬಿಪಿಇ

2010 ಬೆಂಗಳೂರು ದಿನಾಂಕ:28–12–2010 ರಂತೆ ಆಯವ್ಯಯ ಸಂಭಾವನೆಯನ್ನು ನೀಡಲು ಸಮಿತಿಯು ಸರ್ವಾನುಮತದಿಂದ ಒಪ್ಪಿದೆ.

| ಕ್ರ.ಸ | ಅಧಿಕಾರಿ/ಸಿಬ್ಬಂಧಿ ಹೆಸರು | ಹುದ್ದೆ | ಸೆಪ್ಟರಂಬರ್ 2010ಕ್ಕೆ ಮೂಲ ವೇತನ |
|---|---|---|---|
| | | **ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿ** | |
| 1 | ಎಂ. ಅಶೋಕ್ ಕುಮಾರ್ | ಮುಖ್ಯ ಲೆಕ್ಕಾಧಿಕಾರಿಗಳು | 29,625.00 |
| 2 | ಶ್ರೀ ಬಸವರಾಜು | ಲೆಕ್ಕ ಅಧೀಕ್ಷಕರು | 12,650.00 |
| 3 | ಶ್ರೀ ಶ್ರೀನಿವಾಸ್ ಟಿ | ಶೀಘ್ರಲಿಪಿಗಾರರು | 10,000.00 |
| 4 | ಶ್ರೀಮತಿ ಅನಿತ | ಲೆಕ್ಕ ಅಧೀಕ್ಷಕರು | 11,100.00 |
| 5 | ಶ್ರೀಮತಿ ರಾಧಮ್ಮ | ಪ್ರ.ದ.ಸ. | 7,625.00 |
| 6 | ಶ್ರೀ ಜಿ.ಎಸ್. ವಾಸುದೇವಮೂರ್ತಿ | ದ್ವಿ.ದ.ಸ. | 7275.00 |
| 7 | ಶ್ರೀ ಕನಕರಾಜ್ | ದ್ವಿ.ದ.ಸ. | 6250.00 |
| 8 | ಶ್ರೀ ನಾರಾಯಣಸ್ವಾಮಿ | ಗಣಕಯಂತ್ರ ಆಪರೇಟರ್ | (ಗುತ್ತಿಗೆ ನೌಕರರು) ಒಟ್ಟಾರೆ 6,000.00 |
| 9 | ಶ್ರೀಮತಿ ಕಮಲಾಕ್ಷಿ | ನಾ.ದ.ನೌ | 8000.00 |
| 10 | ಶ್ರೀ ಕೋದಂಡರಾಮ | ನಾ.ದ.ನೌ | 5,800.00 |
| 11 | ಶ್ರೀ ವೆಂಕಟೇಗೌಡ | ನಾ.ದ.ನೌ | 10,175.00 |
| 12 | ಶ್ರೀ ಬಿ.ಶಂಕರ್‌ರಾವ್ | ನಾ.ದ.ನೌ | 5,800.00 |
| 13 | ಶ್ರೀ ಬಸವರಾಜು | ನಾ.ದ.ನೌ, ಸಾ.ಸಂ.ಕಛೇರಿ | 8,825.00 |
| 14 | ಶ್ರೀಮತಿ ಕೆ ಲಕ್ಷ್ಮೀ | ಶೀಘ್ರಲಿಪಿಗಾರರು | 8,000.00 |
| 15 | ಶ್ರೀ ರಾಮಯ್ಯ. ಡಿ | ಪ್ರ.ದ.ಸ. | 9275.00 |
| 16 | ಶ್ರೀಮತಿ ಮಮತ | ಎಫ್.ಬಿ.ಎ.ಎಸ್. | (ಸಲಹಾಸಂಸ್ಥೆನೌಕರರು) ಒಟ್ಟಾರೆ 10,000.00 |
| 17 | ಶ್ರೀ ದೀಪಕ್ | ಎಫ್.ಬಿ.ಎ.ಎಸ್. | (ಸಲಹಾಸಂಸ್ಥೆನೌಕರರು) ಒಟ್ಟಾರೆ 10,000.00 |
| 18 | ಶ್ರೀ ಧನಂಜಯ ಆರ್. | ವಾಹನ ಚಾಲಕರು | 6000.00 |
| 19 | ಶ್ರೀ ವೆಂಕಟೇಶ್ | ವಾಹನ ಚಾಲಕರು | 8825.00 |
| 20 | ಶ್ರೀ ಕೊಂಡಯ್ಯ | ವಾಹನ ಚಾಲಕರು | 6,950.00 |
| 21 | ಶ್ರೀ ಸುರೇಶ್, | ದ್ವಿ..ದ. ಸ. | 6,250.00 |
| 22 | ಶ್ರೀ ಪ್ರಶಾಂತ್ | ಪ್ರ.ದ.ಸ | 7275.00 |
| 23 | ಶ್ರೀ ರವಿಕುಮಾರ್ ಬಿ. | ಪ್ರ.ದ.ಸ. | 8200.00 |


| | | | |
|---|---|---|---|
| 20 | ಶ್ರೀ ಕೊಂಡಯ್ಯ | ವಾಹನ ಚಾಲಕರು | 6,950.00 |
| 21 | ಶ್ರೀ ಸುರೇಶ್, | ದ್ವಿ..ದ. ಸ. | 6,250.00 |
| 22 | ಶ್ರೀ ಪ್ರಶಾಂತ್ | ಪ್ರ.ದ.ಸ | 7275.00 |
| 23 | ಶ್ರೀ ರವಿಕುಮಾರ್ ಬಿ. | ಪ್ರ.ದ.ಸ. | 8200.00 |

| ಕೌನ್ಸಿಲ್ ಕಾರ್ಯಾಲಯ | | | |
|---|---|---|---|
| 1. | ಶ್ರೀ ಮಾರಿಯೋ ಪೀರಿಸ್ | ಅಧಿಕ ಕೌನ್ಸಿಲ್ ಕಾರ್ಯಾದರ್ಶಿ | 17,250.00 |
| 2. | ಶ್ರೀ ವಿ. ಮಂಜುನಾಥ್ | ವ್ಯವಸ್ಥಾಪಕರು | 10,000.00 |
| 3. | ಶ್ರೀ ಕೃಷ್ಣಮೂರ್ತಿ | ದ್ವಿ.ದ.ಸ | 7,625.00 |
| 4. | ಶ್ರೀ ಪುಷ್ಪರಾಜ್.ಜಿ | ವಾಹನ ಚಾಲಕರು | 9,500.00 |
| 5. | ಶ್ರೀ ಉಮೇಶ್ | ನಾ.ದ.ನೌ | 7800.00 |

| ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ | | | |
|---|---|---|---|
| 1. | ಶ್ರೀ ಮಂಜಯ್ಯ | ವ್ಯವಸ್ಥಾಪಕರು | 10,250.00 |
| 2. | ಶ್ರೀ ವಿ. ದಕ್ಷಿಣಾಮೂರ್ತಿ | ಪ್ರ.ದ.ಸ. | 7,800.00 |
| 3. | ಶ್ರೀ ಕೆ.ಎಲ್. ಧನೋಜಿರಾವ್ | ವಾಹನ ಚಾಲಕರು | 7,625.00 |
| 4. | ಶ್ರೀ ಬಿ.ಹೆಚ್. ವೆಂಕಟಪ್ಪ | ನಾ.ದ.ನೌ | 9,500.00 |
| 5. | ಶ್ರೀ ರಂಗಪ್ಪ | ನಾ.ದ.ನೌ | 5,700.00 |

## 18]. ವಿಷಯದ ಸಂಖ್ಯೆ :–ತೆಆಸ್ಥಾಸ/31/2011–12

**ನಿರ್ಣಯ :–** ಡಾ॥ ಆಶ್ವತ್‌ನಾರಾಯಣ್ ಸಿ.ಎನ್, ಶಾಸಕರು, ಮಲ್ಲೇಶ್ವರಂ ಕ್ಷೇತ್ರ, ರವರು ಮಲ್ಲೇಶ್ವರಂ ಸಾಂಸ್ಕೃತಿಕ ಸಂಘ ಮತ್ತು ಡಾ॥ ಸಿ.ಎನ್. ಅಶ್ವತ್‌ನಾರಾಯಣ್ ಫೌಂಡೇಶನ್ ವತಿಯಿಂದ ತಮ್ಮ ಮತಕ್ಷೇತ್ರ ವ್ಯಾಪ್ತಿಯ ಎಲ್ಲಾ 7 ವಾರ್ಡ್‌ಗಳಲ್ಲಿ ಮಲ್ಲೇಶ್ವರಂ ಯುಗಾದಿ ವಸಂತೋತ್ಸವವನ್ನು ಆಚರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನಸಹಾಯ ಮಂಜೂರು ಮಾಡಲು ಕೋರಿರುವ ಹಿನ್ನೆಲೆಯಲ್ಲಿ **ಸಂಘ ಸಂಸ್ಥೆಗಳಿಗೆ 2010–11ರ ಪರಿಷ್ಕೃತ ಆಯವ್ಯದಲ್ಲಿ ಮರು ಹೊಂದಾಣಿಕೆ ಮಾಡಿರುವ ಅನುದಾನದಲ್ಲಿ ರೂ.7,50,000/– (ಏಳು ಲಕ್ಷ ಐವತ್ತು ಸಾವಿರ) ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## 19]. ವಿಷಯದ ಸಂಖ್ಯೆ :–ತೆಆಸ್ಥಾಸ/32/2011–12

**ನಿರ್ಣಯ :–** ಕೃಷಿಕ ಸರ್ವೋದಯ ಫೌಂಡೇಶನ್, ಸಂಸ್ಥೆಯು ಕರ್ನಾಟಕ ರಾಜ್ಯದ ನಗರ ಹಾಗೂ ಗ್ರಾಮೀಣ ಪ್ರದೇಶದ ಯುವಕ/ಯುವತಿಯರಿಗೆ ಆಡಳಿತ ಸೇವೆ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ತರಬೇತಿಯನ್ನು ಕೆಲವೇ ಆಯ್ದ ನಗರ/ಪಟ್ಟಣಗಳಲ್ಲಿ ಮಾತ್ರ ಶಾಖೆಗಳನ್ನು ತೆರೆಯಲಾಗಿರುತ್ತದೆ. ಈ ಸಂಬಂಧ ಇನ್ನೂ ಹೆಚ್ಚಿನ ಅಭಿವೃದ್ಧಿ ಗೊಳಿಸುವ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನಸಹಾಯ ಮಂಜೂರು ಮಾಡಲು ಕೋರಿರುವ ಹಿನ್ನೆಲೆಯಲ್ಲಿ **ಸಂಘ ಸಂಸ್ಥೆಗಳಿಗೆ 2010–11ರ ಪರಿಷ್ಕೃತ ಆಯವ್ಯದಲ್ಲಿ ಮರು ಹೊಂದಾಣಿಕೆ ಮಾಡಿರುವ ಅನುದಾನದಲ್ಲಿ ರೂ.10,00,000/– (ಹತ್ತು ಲಕ್ಷ ಮಾತ್ರ) ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

**20]. ವಿಷಯದ ಸಂಖ್ಯೆ :–ತೆಆಸ್ಥಾಸ/33/2011–12**

**ನಿರ್ಣಯ :–** ಶ್ರೀ. ಎನ್. ವೀರಣ್ಣ, ಕೆಆರ್ ಪುರಂ, ವಾರ್ಡ್ ಸಂಖ್ಯೆ–52ರ ಸದಸ್ಯರು, ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸದಸ್ಯರು, ಆದ ಇವರು ತಮ್ಮ ಪತ್ರದಲ್ಲಿ, ಆಂಜನೇಯಸ್ವಾಮಿ ದೇವಸ್ಥಾನ ನವ ನಿರ್ಮಾಣ ಟ್ರಸ್ಟ್, ಬೆಂಗಳೂರು, ರವರು ಕೋರಿರುವಂತೆ, ಈಗಾಗಲೇ ಸದರಿ ಪತ್ರವನ್ನು ಸಮಿತಿಯಿಂದ ದಿನಾಂಕ 06–04–2011 ರಂದು ಆಯುಕ್ತರವರಿಗೆ ಕಳುಹಿಸಲಾಗಿರುತ್ತದೆ. ಆದುದರಿಂದ ದೇವಸ್ಥಾನದ ವಾರ್ಷಿಕ ಕಾರ್ಯಕ್ರಮಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನಸಹಾಯ ಮಂಜೂರು ಮಾಡಲು ಕೋರಿರುವ ಹಿನ್ನೆಲೆಯಲ್ಲಿ **ಸಂಘ ಸಂಸ್ಥೆಗಳಿಗೆ 2010–11ರ ಪರಿಷ್ಕೃತ ಆಯವ್ಯದಲ್ಲಿ ಮರು ಹೊಂದಾಣಿಕೆ ಮಾಡಿರುವ ಅನುದಾನದಲ್ಲಿ ರೂ.2,00,000/– (ಎರಡು ಲಕ್ಷ ಮಾತ್ರ) ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

**21]. ವಿಷಯದ ಸಂಖ್ಯೆ :–ತೆಆಸ್ಥಾಸ/34/2011–12**

**ನಿರ್ಣಯ :–** ಶ್ರೀಮತಿ. ಶಕೀಲ ಎಂ, ದಯಾನಂದನಗರ ವಾರ್ಡ್ ಸಂಖ್ಯೆ–97ರ ಸದಸ್ಯರು, ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸದಸ್ಯರು, ಆದ ಇವರು ತಮ್ಮ ಪತ್ರದಲ್ಲಿ, ಡಾ॥ ಬಿ.ಆರ್. ಅಂಬೇಡ್ಕರ್ ಎಸ್.ಸಿ/ಎಸ್.ಟಿ ವಿಚಾರ ವೇದಿಕೆ (ರಿ.) ರವರು ಕೋರಿರುವಂತೆ, ಪರಿಶ್ಟಿಷ್ಟ ಜಾತಿ /ಪರಿಶ್ಟಿಷ್ಟ ವರ್ಗ ಹಾಗೂ ಅಲ್ಪ ಸಂಖ್ಯಾತರು, ಹಿಂದುಳಿದ ವರ್ಗದ ಬಡ ಜನರಿಗೆ ಉಚಿತವಾಗಿ ಹಲವಾರು ಸಮಾಜ ಸೇವಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದು, ಸದರಿ ಸಂಸ್ಥೆಯ ಸೇವಾ ಕಾರ್ಯಚಟುವಟಿಕೆಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನಸಹಾಯ ಮಂಜೂರು ಮಾಡಲು ಕೋರಿರುವ ಹಿನ್ನೆಲೆಯಲ್ಲಿ **ಸಂಘ ಸಂಸ್ಥೆಗಳಿಗೆ 2010–11ರ ಪರಿಷ್ಕೃತ ಆಯವ್ಯದಲ್ಲಿ ಮರು ಹೊಂದಾಣಿಕೆ ಮಾಡಿರುವ ಅನುದಾನದಲ್ಲಿ ರೂ.8,00,000/– (ಎಂಟು ಲಕ್ಷ ಮಾತ್ರ) ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

**22]. ವಿಷಯದ ಸಂಖ್ಯೆ :–ತೆಆಸ್ಥಾಸ/03/2010–11**

ಆಯುಕ್ತರವರ ಟಿಪ್ಪಣಿ ದಿನಾಂಕ : 25–06–2010 ರಲ್ಲಿ ವಿವರಿಸಿರುವಂತೆ, ವಾರ್ಡ್–76ರ ಮಗರತ್ ರಸ್ತೆಯಲ್ಲಿರುವ ಪಾಲಿಕೆಯ ಜಂಟಿ ಸಹಭಾಗಿತ್ವದಡಿಯಲ್ಲಿ ಮೇ॥.ಮೆವರಿಕ್ ಹೋಲ್ಡಿಂಗ್ ಪ್ರೈ.ಲಿ.ರವರು ವಾಣಿಜ್ಯ ಸಂಕೀರ್ಣ ಹಾಗೂ ಬಹು ಅಂತಸ್ತಿನ ವಾಹನ ನಿಲುಗಡೆ ಸಂಕೀರ್ಣವನ್ನು ನಿರ್ಮಿಸಲಾಗಿದ್ದು. ಪಾಲಿಕೆಗೆ ಸೇರಿದ ವಾಣೀಜ್ಯ ಸಂಕೀರ್ಣದ ಭಾಗವನ್ನು ಸದರಿ ಜಂಟಿ ಸಹಭಾಗಿತ್ವದಾರರಿಗೆ ನಿರ್ವಹಿಸಲು ಕರಾರನ್ನು ಮಾಡಿಕೊಳ್ಳಲಾಗಿದೆ. ಅದರಂತೆ ಸದರಿ ಕಟ್ಟಡದಲ್ಲಿ 14 ಅಂತಸ್ತುಗಳು ಇದ್ದು, ಲೋಯರ್ ಬೇಸ್‌ಮೆಂಟ್, ಅಪ್ಪರ್ ಬೇಸ್‌ಮೆಂಟ್, ನೆಲಮಹಡಿ ಮತ್ತು 11 ಮೇಲು ಅಂತಸ್ತುಗಳನ್ನೊಳಗೊಂಡ ಕಟ್ಟಡವಾಗಿರುತ್ತದೆ. ಸದರಿ ಕಟ್ಟಡದಲ್ಲಿ 972 ನಾಲ್ಕು ಚಕ್ರದ ವಾಹನ ನಿಲುಗಡೆಗೆ

ಅವಕಾಶ ಕಲ್ಪಿಸಲಾಗಿದೆ. ಈ 972ರಲ್ಲಿ 220 ಡೆವಲಪ್ಪರ್ ಶೇರು, 252 ಪಾಲಿಕೆಯ ಶೇರು ಇದ್ದು ಪಾಲಿಕೆಯ ಶೇರನ್ನು ಸಹ ಡೆವಲ್ಪರ್‌ದಾರರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಉಳಿಕೆ 500 ಸಾರ್ವಜನಿಕ 4 ಚಕ್ರದ ವಾಹನಗಳ ನಿಲುಗಡೆಯಾಗಿರುತ್ತದೆ. ಈ 500 ಸಾರ್ವಜನಿಕರ ವಾಹನಗಳ ನಿಲುಗಡೆ ಸ್ಥಳವನ್ನು ಸಹ ಬರುವ ಆದಾಯದಲ್ಲಿ ಪಾಲಿಕೆಗೆ ಶೇಕಡ 51ರಷ್ಟನ್ನು ಪಾವತಿಸುವ ನಿಬಂಧನೆಯಂತೆ ಕರಾರನ್ನು ಮಾಡಿಕೊಂಡಿದ್ದು, ಸದರಿ ಅವಧಿಯು ದಿನಾಂಕ : 28–02–2008ಕ್ಕೆ ಮುಕ್ತಾಯವಾದ ಹಿನ್ನೆಲೆಯಲ್ಲಿ ಬರುವ ಸಾರ್ವಜನಿಕರ ಉಪಯೋಗಕ್ಕೆ ನಿರ್ಮಿಸಲಾಗಿರುವ 500 ನಾಲ್ಕು ಚಕ್ರದ ವಾಹನ ನಿಲುಗಡೆ ಸ್ಥಳವನ್ನು 2ವರ್ಷಗಳಿಗೆ ದಿನಾಂಕ 01–03–2008 ರಿಂದ 28–02–2010ರವರೆವಿಗೆ ಮೂಲ ಕರಾರಿನ ಷರತ್ತಿನಂತೆ ಪಾಲಿಕೆಗೆ ಶೇಕಡ 55ರಷ್ಟನ್ನು ಸಂದಾಯ ಮಾಡುವ ಷರತ್ತಿನಂತೆ ಆಡಳಿತಗಾರರ ನಿರ್ಣಯ ಸಂಖ್ಯೆ : 53/2008–2009 ದಿನಾಂಕ 16–04–2008ರ ನಿರ್ಣಯಿಸಿದ್ದು, ಸದರಿ ನಿರ್ಣಯವನ್ನು ಸರ್ಕಾರದ ಅನುಮೋದನೆಗೆ ಕಳುಹಿಸಿಕೊಡಲಾಗಿದೆ. ಇದುವರೆವಿಗೂ ಸರ್ಕಾರದ ಅನುಮೋದನೆಯಾಗಿರುವುದಿಲ್ಲ.

ತದನಂತರ ಮೇ॥.ಮೆವರಿಕ್ ಹೋಲ್ಡಿಂಗ್ ಪ್ರೈ.ಲಿ.ರವರು ದಿನಾಂಕ: 16–04–2010 ರಂದು ಮನವಿ ಸಲ್ಲಿಸಿ ಕಾರರು ಪತ್ರದ ಷರತ್ತಿನಂತೆ ಮತ್ತೆ ಮೂರು ವರ್ಷಗಳಿಗೆ ಮುಂದುವರಿಸಲು ಹಾಗೂ ವಾಹನ ನಿಲುಗಡೆ ಸ್ಥಳವು ವೀಕ್ ಡೇಗಳಲ್ಲಿ ಖಾಲಿ ಇದ್ದು, ಇತರೆ ಖರ್ಚುಗಳು ಹೆಚ್ಚಾಗಿರುವುದರಿಂದ ಮೂಲ ಕಾರಿನಂತೆ ಶೇಕಡ 51:49ರಷ್ಟನ್ನು ಪಾವತಿಸುವ ನಿಬಂದನೆಯಂತೆ ಮುಂದುವರೆಸಲು ಕೋರಿರುವರು.

ಆದ್ದರಿಂದ ದಿನಾಮಕ : 28–02–2008ಕ್ಕೆ ವಾಹನ ನಿಲುಗಡೆ ಸ್ಥಳದ ಅವಧಿಯು ಮುಕ್ತಾಯವಾಗಿರುವುದರಿಂದ ದಿನಾಂಕ : 01–03–2010ರಿಂದ ವಾಹನ ನಿಲುಗಡೆ ಮ್ಯಾನೇಜ್‌ಮೆಂಟ್ ಕರಾರು ಪತ್ರದ ಪುಟ ಸಂಖ್ಯೆ : 06ರಲ್ಲಿರುವ, 6ನೇ ಷರತ್ತಿನಲ್ಲಿ ಪರಸ್ಪರ ಒಪ್ಪಂದದ ಮೇರೆಗೆ ಮುಂದಿನ ಅವಧಿಗೆ ನವೀಕರಿಸಬಹುದು ಎಂಬ ಅಂಶವನ್ನು ಪರಿಗಣಿಸಿ ಮಗರತ್ ರಸ್ತೆಯಲ್ಲಿರುವ ಜಂಟಿಸಹಭಾಗಿತ್ವದ ಕಟ್ಟಡದಲ್ಲಿರುವ ಸರ್ವಾಜನಿಕರ 500 ನಾಲ್ಕು ಚಕ್ರದ ಪಾವತಿ ಮತ್ತು ನಿಲುಗಡೆ ಶುಲ್ಕದಿಂದ ಬರುವ ಮೊತ್ತದ ಬಗ್ಗೆ ಈ ಕೆಳಕಂಡ ವಿಷಯಗಳ ಬಗ್ಗೆ ತೀರ್ಮಾನಿಸಬೇಕಾಗಿರುತ್ತದೆ.

1. ಹಾಲಿ ಇರುವ ಶೇಕಡ 55: 45ಅನ್ನು ಮುಂದುವರೆಸಲು ಅಥವಾ ಹೆಚ್ಚಿಸುವ ಬಗ್ಗೆ.
2. ಜಂಟಿ ಸಹಭಾಗಿತ್ವದಾರರು ಕೋರಿರುವ ಮನವಿಯಂತೆ ಮೂಲ ಕಾರಾರು ಪತ್ರದಲ್ಲಿ ಆಗಿರುವ ಶೇಕಡ 51:49ರಂತೆ ನಿಗಧಿಪಡಿಸುವ ಬಗ್ಗೆ.

ದಿನಾಂಕ : 01–03–2010ರಿಂದ 2 ವರ್ಷಗಳ ಅವಧಿಗೆ ಮೇ॥.ಮೆವರಿಕ್ ಹೋಲ್ಡಿಂಗ್ಸ್ ಪ್ರೈ.ಲಿ.ರವರನ್ನೇ ಮುಂದುವರೆಸುವ ಬಗ್ಗೆ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :–** **ಸಂಬಂದಪಟ್ಟ ಅಧಿಕಾರಿಗಳೊಂದಿಗೆ ಸ್ಥಳಪರಿಶೀಲಿಸಲಾಯಿತು, ದಿನಾಂಕ : 25–06–2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ ಹಾಲಿ ಇರುವ ಶೇಕಡ : 55:45 (ಶೇಕಡ ಐವತ್ತೈದು : ನಲವತ್ತೈದು) ಅನ್ನು ಮುಂದುವರಿಸುವುದೆಂದು ಸಮಿತಿಯು ತೀಮಾನಿಸಿತು.**

## 23]. ವಿಷಯದ ಸಂಖ್ಯೆ :–ತೆಆಸ್ಥಾಸ/216/2010–11

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(1)/ಪಿಆರ್/16/10–11, ದಿನಾಂಕ : 31–12–2010ರಲ್ಲಿ ವಿವರಿಸಿರುವಂತೆ, ಕುಮಾರಿ ನಾಗಿಣಿ, ನಾಗಪ್ಪ ರಸ್ತೆ, ಶೇಷಾದ್ರಿಪುರಂ ಇವರಿಗೆ ನಾಗಪ್ಪ ರಸ್ತೆ ಮತ್ತು ನಾರ್ಥ್ ಪಾರ್ಕ್ ರಸ್ತೆ ಮಧ್ಯದಲ್ಲಿರುವ ಮಹಾನಗರ ಪಾಲಿಕೆಯ ಸ್ವತ್ತಿನಲ್ಲಿ 8X6 ಅಡಿಗಳ ಜಾಗವನ್ನು 18/12/1997 ರಿಂದ 3 ವರ್ಷದ ಅವಧಿಗೆ ಜ್ಯೂಸ್ ಅಂಗಡಿ ನಡೆಸುವ ಸಲುವಾಗಿ ತಿಂಗಳಿಗೆ ರೂ.500/–ರಂತೆ ಗುತ್ತಿಗೆ ಹಣ ನಿಗಧಿಪಡಿಸಿ ಗುತ್ತಿಗೆ ನೀಡಿದ್ದು, ಸದರಿ ಗುತ್ತಿಗೆ ಅವಧಿಯು ಕಾಲ ಕಾಲಕ್ಕೆ ನವೀಕರಿಸಿದ್ದು, ಮತ್ತು ಗುತ್ತಿಗೆ ಮೊತ್ತವೂ ಸಹ ಪರಿಷ್ಕೃತವಾಗಿರುತ್ತದೆ. ಈ ಗುತ್ತಿಗೆಯ ಅವಧಿಯು 31/12/2009 ರಂದು ಮುಕ್ತಾಯವಾಗಿದ್ದು, ಈಗ

ದಿನಾಂಕ:01/01/2010 ರಿಂದ 3 ವರ್ಷಗಳ ಅವಧಿಗೆ ತಿಂಗಳಿಗೆ ಗುತ್ತಿಗೆ ಮೊತ್ತ ರೂ.2000/–ರಂತೆ ನವೀಕರಿಸಬಹುದೆಂದು ಕಂದಾಯ ಅಧಿಕಾರಿ (ಗಾಂಧಿನಗರ) ಮತ್ತು ಜಂಟಿ ಆಯುಕ್ತರು ಮತ್ತು ಉಪ ಅಯುಕ್ತರು (ಪಶ್ಚಿಮ) ರವರು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಹಾಗೂ ಪ್ರಸ್ತುತ ಜಾಗವು ಪಾದಚಾರಿ ಮಾರ್ಗದಲ್ಲಿ ಇರುವುದಿಲ್ಲ ಮತ್ತು ಪಾದಚಾರಿ ಸಂಚಾರಕ್ಕೆ ಯಾವುದೇ ತೊಂದರೆ ಯಾಗುವುದಿಲ್ಲ ಎಂದು ತಮ್ಮ ಟಿಪ್ಪಣಿಯಲ್ಲಿ ದಾಖಲು ಮಾಡಿರುತ್ತಾರೆ.

ಸದರಿ ಸ್ಥಳದ ಪ್ರಸ್ತುತ ಮಾರುಕಟ್ಟೆ ದರವು ಸರ್ಕಾರದ ಮಾರ್ಗಸೂಚಿ ದಿನಾಂಕ: 17/04/2007 ರಂತೆ ವಸತಿ ದರ ಚದರ ಅಡಿಗೆ ರೂ.2300/– ಮತ್ತು ವಸತಿಯೇತರಕ್ಕೆ ಚದರ ಅಡಿಗೆ ದರ ರೂ.3220/– ಇರುತ್ತದೆ. ಇದರಂತೆ ಶೇ 10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದೆಂದಿದೆ. ಇದರಂತೆ ಅರ್ಜಿದಾರರಿಗೆ ನೀಡಿರುವ ಸ್ವತ್ತಿನ ಅಳತೆ 8X6=48 ಚದರ ಅಡಿಗಳಾಗಿದ್ದು 48X3220= ರೂ.1,54,560/– ಗಳಾಗಿದ್ದು, ಇದರಂತೆ ಶೇಕಡಾ 10ರಷ್ಟು ಲೆಕ್ಕಾಚಾರ ಮಾಡಲಾಗಿ ರೂ.15,456/12= ತಿಂಗಳಿಗೆ ರೂ.1288/– ಗಳಾಗಿರುತ್ತದೆ. ಆದರೆ ಜಂಟಿ ಆಯುಕ್ತರು ತಿಂಗಳಿಗೆ ರೂ.2000/–ರಂತೆ 3 ವರ್ಷಕ್ಕೆ ನವೀಕರಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ ಅನ್ವಯ 1976 ಕಲಂ 176ರ (6) ಹಾಗು (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇರುತ್ತದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿಗಳು ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ ನಅಇ 129 ಟಿ.ಎಂ.ಡಿ 2002 ದಿನಾಂಕ: 02/06/2003 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.

ಗುತ್ತಿಗೆ ನಿಗಧಿಪಡಿಸಿ ಕರಾರು ನೊಂದಾಯಿಸಿರುವ ದಿನಾಂಕದಿಂದ 5 ವರ್ಷಗಳ ಅವಧಿಗೆ ನವೀಕರಿಸಲು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 31–12–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

**ನಿರ್ಣಯ :–** **ಸಂಬಂದಪಟ್ಟ ಅಧಿಕಾರಿಗಳೊಂದಿಗೆ ಸ್ಥಳಪರಿಶೀಲಿಸಲಾಯಿತು, ದಿನಾಂಕ : 31–12–2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯವನ್ನು ಒಪ್ಪಿದೆ.**

## 24]. ವಿಷಯದ ಸಂಖ್ಯೆ :–ತೆಆಸ್ಥಾಸ/221/2010–11

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(4)ಪಿಆರ್/58/04–05, ದಿನಾಂಕ:23–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:179, ಜಯನಗರ 5ನೇ ಬ್ಲಾಕ್, 10ನೇ ಮುಖ್ಯರಸ್ತೆ ಮತ್ತು 9ನೇ ಮುಖ್ಯರಸ್ತೆ ಮಧ್ಯೆ ಇರುವ (Marginal Land)ನ್ನು ಗಾರ್ಡನ್ ಉಪಯೋಗಕ್ಕಾಗಿ

ಗುತ್ತಿಗೆಗೆ ನೀಡಿದ್ದು, ಅವಧಿ ಮುಗಿದಿರುವುದರಿಂದ, ಕ್ರಯಕ್ಕೆ ನೀಡುವ ಬಗ್ಗೆ ಶ್ರೀ ಮುಲ್ಕ ಗೋವಿಂದರೆಡ್ಡಿ ರವರು ಮನವಿ ಸಲ್ಲಿಸಿ ಕೋರಿರುತ್ತಾರೆ.

ಈ ಸ್ವತ್ತನ್ನು 1980 ರಿಂದ 5 ವರ್ಷಗಳ ಅವಧಿಗೆ ಹೂದೋಟ ನಿರ್ಮಾಣಕ್ಕಾಗಿ ಗುತ್ತಿಗೆಗೆ ನೀಡಿದ್ದು, ಅವಧಿ ಮುಗಿದಿರುತ್ತದೆ. ಈ ಬಗ್ಗೆ ಕಾಮಗಾರಿ ಇಲಾಖೆಯವರು ಸ್ಥಳ ಪರಿಶೀಲಿಸಿ, ಅರ್ಜಿದಾರರ ಜಾಗದ ಪಕ್ಕದಲ್ಲಿರುವ 10X64 ಅಡಿಗಳಷ್ಟು ಮಾರ್ಜಿನಲ್ ಜಾಗವಿದ್ದು, ಈ ಜಾಗವು ನಗರಪಾಲಿಕೆಗೆ ಅವಶ್ಯಕತೆ ಇರುವುದಿಲ್ಲವೆಂದು ವರದಿಯಲ್ಲಿ ತಿಳಿಸಿರುತ್ತಾರೆ. ಅರ್ಜಿದಾರರಿಗೆ ಕ್ರಯಕ್ಕೆ ನೀಡಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಈ ಬಗ್ಗೆ ಆಸ್ತಿ ವಿಭಾಗದಿಂದ ಸ್ಥಳ ಪರಿಶೀಲನೆ ನಡೆಸಲಾಗಿ, 10X64 ಅಡಿಗಳ ಜಾಗ ನಿವೇಶನಗಳ ಸಂಖ್ಯೆ 38 ಮತ್ತು 39 ರ ಮಧ್ಯದಲ್ಲಿದ್ದು, ನಿವೇಶನ ಸಂಖ್ಯೆ 38 ರ ಮಾಲಿಕರು 64X3 ಅಡಿ ಪ್ರದೇಶದಲ್ಲಿ ಅನಧಿಕೃತ ಕಾಂಪೌಂಡ್ ನಿರ್ಮಿಸಿರುತ್ತಾರೆ. ಈ ಮಾಲೀಕರಿಂದ ಈ ಪ್ರದೇಶದ ಕೋರಿಕೆ ಅರ್ಜಿ ಬಂದಿರುವುದಿಲ್ಲ. ಹಾಗೂ ಉಳಿಕೆ ಜಾಗ 64X7 ಅಡಿ ಪ್ರದೇಶ. ನಿವೇಶನ ಸಂಖ್ಯೆ 39 ರ ಮಾಲಿಕರಾದ ಶ್ರೀ ಮುಲ್ಕ ಗೋವಿಂದರೆಡ್ಡಿ ರವರ ಅನುಭವದಲ್ಲಿದ್ದು, ಸ್ವಲ್ಪ ಜಾಗದಲ್ಲಿ ಮನೆ ವಿಸ್ತರಿಸಿ ಉಳಿದ ಜಾಗವನ್ನು ಹೂದೋಟವನ್ನಾಗಿ ಉಪಯೋಗಿಸುತ್ತಿದ್ದು, ಈ ನಿವೇಶನ ಎರಡು ಸ್ವತ್ತುಗಳ ಮಧ್ಯ ಇರುವುದರಿಂದ ಪ್ರಸಕ್ತ ಮಾರುಕಟ್ಟೆ ದರದಲ್ಲಿ ನೀಡಬಹುದೆಂದು ಅಭಿಪ್ರಾಯಿಸಲಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿ ಉದ್ದೇಶಕ್ಕೆ ರೂ.4000/–ಗಳಿದ್ದು, ಅರ್ಜಿದಾರರು ಕೋರಿರುವ 10X64 ಅಡಿಗಳ ಜಾಗವು 640 ಚ.ಅಡಿಗಳಾಗುತ್ತದೆ. ಇದರಂತೆ 640X4000 = 25,60,000/– ರೂಗಳಾಗುತ್ತದೆ. ಸರ್ಕಾರದ ಆದೇಶದ ಮೇರೆಗೆ ಸ್ವತ್ತಿನ ಶೇಕಡ 20 ರಷ್ಟು ಹೆಚ್ಚುವರಿ ಮಾಡಿದಾಗ ಒಟ್ಟಾರೆ ಸ್ವತ್ತಿನ ಮೌಲ್ಯವು ರೂ. 30,72,000/–ಗಳಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ಬೆಂಗಳೂರು, ದಿನಾಂಕ:02–06–2003 ರ ಮಾರ್ಗಸೂಚಿಯಲ್ಲಿ ಪಾಲಿಕೆ ಸ್ವತ್ತುಗಳನ್ನು ಕ್ರಯದ ಆಧಾರದ ಮೇಲೆ ನೀಡಿದಲ್ಲಿ, ಮಾರುಕಟ್ಟೆ ದರ ಹಾಗೂ ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂದು ಇರುತ್ತದೆ. ಈ ಸ್ವತ್ತು ಎರಡು ವಸತಿ ಮನೆಗಳ ಮಧ್ಯ ಇರುವುದರಿಂದ ಸಾರ್ವಜನಿಕರು ಹರಾಜಿಗೆ ಆಸಕ್ತಿ ತೋರದೆ ಇರುವುದರಿಂದ ಅರ್ಜಿದಾರರಿಗೆ ಮಾರುಕಟ್ಟೆ ದರದಲ್ಲಿ ನೀಡುವುದು ಸೂಕ್ತವೆಂದು ಅಭಿಪ್ರಾಯಿಸಲಾಗಿದೆ.

ಈ ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಗುತ್ತಿಗೆ ನೀಡುವ ಸಂಬಂಧಪಟ್ಟ ಪ್ರಕರಣಗಳನ್ನು ಸ್ಥಾಯಿ ಸಮಿತಿಗಳ ಮುಂದಿರಿಸಲು ಸೂಚಿಸಿದ್ದು, ಸರ್ಕಾರಿ ಆದೇಶ ಸಂಖ್ಯೆ:ನಅಇ/222/ಎಂ.ಎನ್.ವೈ/2008, ಬೆಂಗಳೂರು, ದಿನಾಂಕ:03–09–2009 ರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಬರುವ ಸಾರ್ವಜನಿಕರ ಸರ್ಕಾರಿ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲೀ ಅಥವಾ ಮಾರಾಟ ಮಾಡುವ ಬದಲಾಗಿ ಅವುಗಳನ್ನು ಸೂಕ್ತವಾಗಿ ಅಭಿವೃದ್ಧಿಪಡಿಸುವ ವಿಷಯದಲ್ಲಿ ಸೂಕ್ತ ಸಲಹಾ ಶಿಫಾರಸ್ಸುಗಳನ್ನು ನೀಡಲು ಸಂಬಂಧಪಟ್ಟ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಅನುಮೋದನೆ ಪಡೆಯಬೇಕಾಗಿದೆ.

ಈ ಮೇಲಿನ ಹಿನ್ನೆಲೆಯಲ್ಲಿ 10X64 ಅಡಿಗಳ ಮಾರ್ಜಿನಲ್ ಜಾಗವನ್ನು ಶ್ರೀ ಮುಲ್ಕ ಗೋವಿಂದರೆಡ್ಡಿ ರವರಿಗೆ ಕ್ರಯಕ್ಕೆ ನೀಡಲು ಸರ್ಕಾರದ ಅನುಮೋದನೆ ಪಡೆಯುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 23–12–2010ರ ಟಿಪ್ಪಣಿಯನ್ನು ಮಾರ್ಪಡಿಸಿ ನೊಂದಣಿ ಮಾರ್ಗಸೂಚಿ ಬೆಲೆ ಅಥವಾ ಹಾರಾಜು ಮಾಡಿ ಗಳಿಸುವ ಬೆಲೆ ಅದರಲ್ಲಿ ಯಾವುದು ಹೆಚ್ಚೊ ಆ ಬೆಲೆಗೆ ವಿಲೇ ಮಾಡುವಂತೆ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

**ನಿರ್ಣಯ :–** **ಸಂಬಂದಪಟ್ಟ ಅಧಿಕಾರಿಗಳೊಂದಿಗೆ ಸ್ಥಳಪರಿಶೀಲಿಸಲಾಯಿತು, ದಿನಾಂಕ : 23–12–2010ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯವನ್ನು ಒಪ್ಪಿದೆ.**

## 25]. ವಿಷಯದ ಸಂಖ್ಯೆ :–ತೆಆಸ್ಥಾಸ/222/2010–11

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(4)ಪಿಆರ್/134/10–11, ದಿನಾಂಕ:23–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಂ:67/6, 7ನೇ ಡಿ ಮುಖ್ಯರಸ್ತೆ, ಬಿ.ಸಿ.ಸಿ. ಕಾಲೋನಿ, 4ನೇ 'ಟಿ' ಬ್ಲಾಕ್, ಜಯನಗರ ವಿಳಾಸದಲ್ಲಿ 60X40 ಅಡಿಗಳ ನಿವೇಶನವನ್ನು ದಿನಾಂಕ:13–09–1978 ರಿಂದ 30 ವರ್ಷಗಳ ಅವಧಿಗೆ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ ನಿರ್ಮಾಣಕ್ಕಾಗಿ ಗುತ್ತಿಗೆ ನೀಡಿದ್ದು, ದಿನಾಂಕ:12–09–2008ಕ್ಕೆ ಅವಧಿ ಮುಕ್ತಾಯವಾಗಿರುತ್ತದೆ.

ಸದರಿ ಸಂಸ್ಥೆಯು ಈ ಸ್ಥಳದಲ್ಲಿ ಕೇಂದ್ರ / ರಾಜ್ಯ ಸರ್ಕಾರ ಹಾಗೂ ಸಂಸ್ಥೆಯ ಹಣದಿಂದ ಕಟ್ಟಡ ನಿರ್ಮಿಸಿ, 30 ಉದ್ಯೋಗಸ್ಥ ಮಹಿಳೆಯರಿಗೆ ಆಶ್ರಯ ನೀಡಿದ್ದು, ಇದರ ಜೊತೆಯಲ್ಲಿ ಹಲವು ಶೈಕ್ಷಣಿಕ, ಸಾಂಸ್ಕೃತಿಕ, ತಾಂತ್ರಿಕ ಮತ್ತು ಸಾರ್ವಜನಿಕ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮ ನಡೆಸುತ್ತಿದ್ದು, 30–ವರ್ಷಗಳಿಗೆ ಗುತ್ತಿಗೆ ಅವಧಿ ನವೀಕರಿಸಲು ಕೋರಿರುತ್ತಾರೆ.

ಸದರಿ ಸಂಸ್ಥೆಯವರು ಸ್ಥಳದಲ್ಲಿ ವಸತಿ ನಿಲಯ ನಿರ್ಮಿಸಿ, ಉದ್ಯೋಗಸ್ಥ ಮಹಿಳೆಯರಿಗೆ ಆಶ್ರಯ ನೀಡಿದ್ದು, ಯಾವುದೇ ಗುತ್ತಿಗೆ ಷರತ್ತು ಉಲ್ಲಂಘನೆ ಮಾಡಿರುವುದಿಲ್ಲ ಹಾಗೂ ಮಹಿಳೆಯರ ಶ್ರೆಯೋಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮ ನಡೆಸುತ್ತಿರುವುದು ತಿಳಿದು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ 30 ವರ್ಷಗಳ ಅವಧಿಗೆ ಮಾಹೆಯಾನ ರೂ. 1000/– ನಿಗಧಿಪಡಿಸಿ, ನವೀಕರಿಸಬಹುದೆಂದು ಅಭಿಪ್ರಾಯಿಸಲಾಗಿದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ರೂ.2,500/–ಗಳಿದ್ದು, ಅರ್ಜಿದಾರರುಗಳು ಕೋರಿರುವ 60X40 ಅಡಿಗಳ ಜಾಗವು 2400

ಚ.ಅಡಿಗಳಾಗುತ್ತದೆ. ಇದರಂತೆ 2400X2500 = 60,00,000/- ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ ರೂ.6,00,000/- ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ ರೂ.50,000/- ಗಳಾಗುತ್ತದೆ.

ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ನಿರ್ಧರಿಸಲಾಗಿದ್ದು, ಈ ಸಂಸ್ಥೆಗೆ ಮಾಸಿಕ ಗುತ್ತಿಗೆ ಹಣ ರೂ. 1000/- ನಿಗಧಿಪಡಿಸಲು ಅಭಿಪ್ರಾಯಿಸಲಾಗಿರುತ್ತದೆ.

ಮೇಲ್ಕಂಡ ಪ್ರಸ್ತಾವನೆಯಂತೆ, ಗುತ್ತಿಗೆ ನವೀಕರಿಸುವ ಬಗ್ಗೆ ಸರ್ಕಾರದ ಅನುಮೋದನೆ ಪಡೆಯಲು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:23-12-2010 ರ ಟಿಪ್ಪಣಿಯನ್ನು ಮಾರ್ಪಡಿಸಿ ಗುತ್ತಿಗೆ ಅವಧಿ 5ವರ್ಷಕ್ಕೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25-01-2011ರ ನಿರ್ಣಯ.

**ನಿರ್ಣಯ :-** **ಸಂಬಂದಪಟ್ಟ ಅಧಿಕಾರಿಗಳೊಂದಿಗೆ ಸ್ಥಳಪರಿಶೀಲಿಸಲಾಯಿತು, 23-12-2010ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ಗುತ್ತಿಗೆ ಅವಧಿ 5ವರ್ಷಕ್ಕೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25-01-2011ರ ನಿರ್ಣಯವನ್ನು ಒಪ್ಪಿದೆ. ಮಾಸಿಕ ಗುತ್ತಿಗೆ ಹಣ ರೂ.1000/- (ಒಂದು ಸಾವಿರ ಮಾತ್ರ) ನಿಗಧಿ ಪಡಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## 26]. ವಿಷಯದ ಸಂಖ್ಯೆ :-ತೆಆಸ್ಥಾಸ/233/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಎ3(4)ಪಿಆರ್/33/09-10, ದಿನಾಂಕ: 29-11-2010ರಲ್ಲಿ ವಿವರಿಸಿರುವಂತೆ ವಾರ್ಡ್ ಸಂಖ್ಯೆ:51 ಬಸವನಗುಡಿ ಬಡಾವಣೆಯ ಪೊಲೀಸ್ ಸ್ಟೇಷನ್ ರಸ್ತೆಯಲ್ಲಿರುವ ಸ್ವತ್ತಿನ ಸಂಖ್ಯೆ: 24/1ರ ಮುಂಭಾಗದಲ್ಲಿರುವ ಖಾಲಿ ನಿವೇಶನ (ಮಾರ್ಜಿನಲ್ ಲ್ಯಾಂಡ್) ಜಾಗವನ್ನು ಕ್ರಯಕ್ಕೆ ನೀಡಲು ಶ್ರೀ.ಕೆ.ವಿ.ಅಕ್ಷಯ ರವರು ಮನವಿ ಸಲ್ಲಿಸಿ ಕೋರಿರುತ್ತಾರೆ.

ಈ ಬಗ್ಗೆ ಕಾಮಗಾರಿ ಇಲಾಖೆಯವರು ಸ್ಥಳ ಪರಿಶೀಲಿಸಿ ಅರ್ಜಿದಾರರ ಜಾಗದ ಮುಂಭಾಗದಲ್ಲಿರುವ 27X 8 ಅಡಿಗಳಷ್ಟು ಮಾರ್ಜಿನಲ್ ಜಾಗವಿದ್ದು, ಇದರಲ್ಲಿ 5 ಅಡಿಗಳ ಅಗಲದಷ್ಟು ಪ್ಯಾಸೇಜ್ ಗೆ ಜಾಗವನ್ನು ಬಿಟ್ಟು ಉಳಿದ 22 X 8 ಅಡಿಗಳ ಜಾಗವನ್ನು ಅರ್ಜಿದಾರರಿಗೆ ನೀಡಬಹುದೆಂದು ಹಾಗೂ ಈ ಜಾಗವು ನಗರಪಲಿಕೆಗೆ ಅವಶ್ಯಕತೆ ಇರುವುದಿಲ್ಲವೆಂದು ಹಾಗೂ ಈ ನಿವೇಶನ ಮುಂದೆ ರಸ್ತೆ ಅಗಲೀಕರಣ ಮಾಡುವ ಪ್ರಸ್ತಾವನೆ ಇರುವುದಿಲ್ಲವೆಂದು ತಿಳಿಸಿ, ಅರ್ಜಿದಾರರಿಗೆ ಕ್ರಯಕ್ಕೆ ನೀಡಬಹುದೆಂದು ಅಭಿಪ್ರಾಯಿಸಲಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 17-4-2007ರ ಸರ್ಕಾರದ ಮಾರ್ಗಸುಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿ ಉದ್ದೇಶಕ್ಕೆ ರೂ.4000/- ಗಳಿದ್ದು, ಅರ್ಜಿದಾರರು ಕೋರಿರುವ 22 X 8 ಅಡಿಗಳ ಜಾಗವು 176 ಚದರ ಅಡಿಗಳಾಗುತ್ತದೆ. ಇದರಂತೆ 176 X 4000 = 7,04,000/- ರೂಗಳಾಗುತ್ತದೆ. ಸರ್ಕಾರದ ಆದೇಶದ ಮೇರೆಗೆ ಸ್ವತ್ತಿನ ಶೇಕಡ 20%ರಷ್ಟು ಹೆಚ್ಚುವರಿ ಮಾಡಿದಾಗ ಒಟ್ಟಾರೆ ಸ್ವತ್ತಿನ ಮೌಲ್ಯವು ರೂ.8,44,800/- ಗಳಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆಳ ನಅಇ/129/ಟಿಎಂಡಿ/2002, ಬೆಂಗಳೂರು, ದಿ:02-06-2003ರಮಾರ್ಗಸೂಚಿಯಲ್ಲಿ ಪಾಲಿಕೆ ಸ್ವತ್ತುಗಳನ್ನು ಕ್ರಯದ ಆಧಾರದ ಮೇಲೆ ನೀಡಿದಲ್ಲಿ, ಮಾರುಕಟ್ಟೆ ದರ ಹಾಗೂ ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂದು ಇರುತ್ತದೆ.

ಈ ಮೇಲಿನ ಅಂಶಗಳನ್ನು ತಮ್ಮ ಆವಗಾಹನೆಗೆ ತರುತ್ತಾ, ಗುತ್ತಿಗೆ ನೀಡುವ ಸಂಬಂಧಪಟ್ಟ ಪ್ರಕರಣಗಳನ್ನು ಮನ್ಯ ಆಯುಕ್ತರು ಸಂಬಂಧಪಟ್ಟ ಸ್ಥಾಯಿ ಸಮಿತಿಗಳ ಮುಂದಿರಿಸಲು ಸೂಚಿಸಿದ್ದು, ಸರ್ಕಾರಿ ಆದೇಶ ಸಂಖ್ಯೆ: ನಅಇ/222/ಎಂ.ಎನ್.ವೈ/2008, ಬೆಂಗಳೂರು, ದಿ:03-09-2010 ರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಬರುವ ಸಾರ್ವಜನಿಕ ಸರ್ಕಾರಿ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲೀ ಅಥವಾ ಮಾರಾಟ ಮಾಡುವ ಬದಲಾಗಿ ಅವುಗಳನ್ನು ಸೂಕ್ತವಾಗಿ ಅಭಿವೃದ್ಧಿಪಡಿಸುವ ವಿಷಯದಲ್ಲಿ ಸೂಕ್ತ ಸಲಹಾ ಶಿಫಾರಸ್ಸುಗಳನ್ನು ನೀಡಲು ಸಂಬಂಧಪಟ್ಟ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿಯನ್ನು ರಚಿಸಲಾಗಿರುತ್ತದೆ.

ಈ ಮೇಲಿನ ಹಿನ್ನಲೆಯಲ್ಲಿ 22 X 8 ಅಡಿಗಳ ಮಾರ್ಜಿನಲ್ ಜಾಗವನ್ನು ಶ್ರೀ.ಕೆ.ವಿ. ಅಕ್ಷಯ್ ರವರಿಗೆ ಕ್ರಯಕ್ಕೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ 29-11-2010ರ ಟಿಪ್ಪಣಿಯನ್ನು ಮಾರ್ಪಡಿಸಿ ನೊಂದಣಿ ಮಾರ್ಗಸೂಚಿ ಬೆಲೆಗೆ ವಿಲೇ ಮಾಡುವಂತೆ ತೀರ್ಮಾನಿಸಿರುವ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25-01-2011 ರ ನಿರ್ಣಯ.

**ನಿರ್ಣಯ :-** **ಸಂಬಂದಪಟ್ಟ ಅಧಿಕಾರಿಗಳೊಂದಿಗೆ ಸ್ಥಳಪರಿಶೀಲಿಸಲಾಯಿತು, ದಿನಾಂಕ : 29-11-2010ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ನೊಂದಣಿ ಮಾರ್ಗಸೂಚಿ ಬೆಲೆಗೆ ವಿಲೇ ಮಾಡುವಂತೆ ತೀರ್ಮಾನಿಸಿರುವ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25-01-2011 ರ ನಿರ್ಣಯವನ್ನು ಒಪ್ಪಿದೆ.**

## 27]. ವಿಷಯದ ಸಂಖ್ಯೆ :-ತೆಆಸ್ಥಾಸ/264/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಉಆ(ಜಾ)ಟೆಂಡರ್/ಪಿಆರ್/01/09-10, ದಿನಾಂಕ: 15-12-2010 ರಲ್ಲಿ ವಿವರಿಸಿರುವಂತೆ ದಿನಾಂಕ: 03.12.2009ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 30 ಸ್ಥಳಗಳಲ್ಲಿ ಡಿ.ಬಿ.ಓ.ಟಿ ಆಧಾರದ ಮೇಲೆ ಲಿಫ್ಟ್ ಹೊಂದಿರುವ ಪಾದಚಾರಿ ಮೇಲುಸೇತುವೆ ನಿರ್ಮಾಣದ ಕಾಮಗಾರಿಯ ಟೆಂಡರ್ ಪ್ರಕಟಣೆಯನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಕರೆಯಲಾಗಿತ್ತು. ದಿನಾಂಕ: 23.12.2009ರಂದು ಸದರಿ ಟೆಂಡರ್‌ಗೆ ತಿದ್ದುಪಡಿ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ದಿನಾಂಕ:07.01.2010ರಂದು ತಾಂತ್ರಿಕ ಬಿಡ್‌ಗಳನ್ನು ತೆರವುಗೊಳಿಸಲಾಗಿತ್ತು ಹಾಗೂ ದಿನಾಂಕ: 07.10.2010ರಂದು ತಾಂತ್ರಿಕವಾಗಿ ಅರ್ಹರಾಗಿರುವ ಸಂಸ್ಥೆಗಳ ಆರ್ಥಿಕ ಬಿಡ್‌ಗಳನ್ನು ತೆರವುಗೊಳಿಸಿ ಯಶಸ್ವಿ ಬಿಡ್‌ದಾರರನ್ನು ಗುರುತಿಸಲಾಗಿದೆ.

| Sl. No. | Location of Sky walk | License fee quoted Per annum | Name of the Agency |
|---|---|---|---|
| 1 | Infront of Kanteerava Stadium (Siddalingaiah Circle, Cubbon Park) | Rs. 62,76,070/- | M/s. Rajdeep is successful bidder (H1) |
| 2 | Commissionarate Street, Garuda Mall | Rs. 52,83,370/- | M/s. Rajdeep is successful bidder (H1) |
| 3 | Opp. NTI connecting Guttahalli Road & Palace road (on Sankey Road) | Rs. 56,80,450/- | M/s. Rajdeep is successful bidder (H1) |
| 4 | Residency road near Mayo hall | Rs. 16,87,590/- | M/s. Prakash is successful bidder (H1) |

| | | | |
|---|---|---|---|
| 5 | Near Indian Airforce ASC centre, Gangenahalli, Bellary Road | Rs. 23,05,270/- | M/s. Rajdeep is successful bidder (H1) |
| 6 | Mount Carmel College, Palace road | Rs. 5,95,620/- | M/s. Prakash is successful bidder (H1) |
| 7 | Hosur road, Opp. Forum Mall, near Tavarekere main road | Rs. 13,89,780/- | M/s. Prakash is successful bidder (H1) |
| 8 | Near Pallavi theatre, Rajaram mohan roy road | Rs. 8,16,220/- | M/s. Rajdeep is successful bidder (H1) |
| 9 | Race course road near chalukya Hotel | Rs. 18,08,920/- | M/s. Rajdeep is successful bidder (H1) |
| 10 | Palace road near Maharani College | Rs. 9,15,490/- | M/s. Rajdeep is successful bidder (H1) |
| 11 | Near BBMP Office, Byatarayana pura, Bellary Road | Rs. 18,00,777/- | M/s. Vantage is successful bidder (H1) |
| 12 | Near Mallya Hospital | Rs. 16,87,590/- | M/s. Prakash is successful bidder (H1) |
| 13 | Between Ananda rao Circle & Khoday's Circle | Rs. 13,12,570/- | M/s. Rajdeep is successful bidder (H1) |
| | | Rs.315,59,717/- | |

ಸದರಿ ಟೆಂಡರ್‌ಗೆ 16 ಸ್ಥಳಗಳಿಗೆ ಪ್ರತಿಕ್ರಿಯೆ ಬಂದಿರುವುದಿಲ್ಲ. ಹಾಗೂ ಕ್ರಮ ಸಂಖ್ಯೆ: 02 ರಲ್ಲಿರುವ ಗಾಂಧೀ ಬಜಾರ್ ಮುಖ್ಯರಸ್ತೆಯ ಮೇಲುಸೇತುವೆ ಪಾದಚಾರಿ ಮಾರ್ಗದ ಕಾಮಗಾರಿಗೆ ಕಡಿಮೆ ಮೊತ್ತ ಲೈಸನ್ಸ್ ಶುಲ್ಕ ಬಂದಿರುತ್ತದೆ. ದಿನಾಂಕ: 08.01.2010ರಂದು ಮಾನ್ಯ ಆಡಳಿತಗಾರರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ವಿಷಯದ ಸಂಖ್ಯೆ: 533/2009–10 ರ ನಡವಳಿಗಳಲ್ಲಿ 13 ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ಕಾಮಗಾರಿಗಳನ್ನು ಮುಂದಿನ 20 ವರ್ಷಗಳ ಅವಧಿಗೆ ಡಿ.ಬಿ..ಓ.ಟಿ. ಆಧಾರದ ಮೇಲೆ ಜಾಹೀರಾತು ಹಕ್ಕುಗಳ ಎದುರು ವಹಿಸಿಕೊಡಲು ಅನುಮೋದಿಸಿರುತ್ತಾರೆ.

ದಿನಾಂಕ: 16.12.2009ರಂದು ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯವರು ಮೆ॥ ವಿಜಯ ಇನ್ನೋವೇಟಿವ್ ಕಾನ್ಸೆಪ್ಟ್ಸ್ ಸಂಸ್ಥೆಯ ಶ್ರೀ.ಕೆ.ಎಂ.ಗೋಪಿ ರವರು ಸಲ್ಲಿಸಿರುವ ಮನವಿಯಲ್ಲಿ ಮಹಾನಗರ ಪಾಲಿಕೆಯಲ್ಲಿ 100ಕ್ಕಿಂತ ಹೆಚ್ಚು ಲಿಫ್ಟ್ ಸಹಿತ ಪಾದಚಾರಿ ಮೇಲುಸೇತುವೆಗಳನ್ನು ನಿರ್ಮಿಸುವ ಪ್ರಸ್ತಾವನೆ ಬಗ್ಗೆ ಕ್ರಮಕೈಗೊಳ್ಳಲು ಹಾಗೂ ಸರ್ಕಾರಕ್ಕೆ ವರದಿಯನ್ನು ಕೋರಿರುತ್ತಾರೆ.

ಮೆ॥ ವಿಜಯ ಇನ್ನೋವೇಟಿವ್ ಕಾನ್ಸೆಪ್ಟ್ಸ್ ಸಂಸ್ಥೆಯವರು ದಿನಾಂಕ: 17.12.2009ರಂದು ರಿಟ್‌ಫೀಟೀಷನ್ ಸಂಖ್ಯೆ: 38070/2009 ನ್ನು ಹೂಡಿ ದಿನಾಂಕ: 03.12.2009ರಂದು ಪ್ರಕಟಿಸಿರುವ ಟೆಂಡರ್‌ನ್ನು ರದ್ದುಪಡಿಸಲು ಹಾಗೂ ಪಾದಚಾರಿ ಮೇಲುಸೇತುವೆಗಳನ್ನು Swiss challenge mode ಅಡಿಯಲ್ಲಿ ಟೆಂಡರ್ ಪ್ರಕಟಿಸಲು ಕೋರಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 04.01.2010ರಂದು ಆದೇಶವನ್ನು ನೀಡಿ ಟೆಂಡರ್ ಪ್ರಕ್ರಿಯೆಯನ್ನು ನಿಲ್ಲಿಸಲು ಸೂಚಿಸಿರುತ್ತಾರೆ.

ದಿನಾಂಕ:11.01.2010ರಂದು ಈ ಕೆಳಕಂಡ 29 ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆಗಳನ್ನು ನಿರ್ಮಿಸಲು ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ.

| Sl. No. | Name of the locations |
|---|---|
| 1 | Gandhi bazaar Main road |
| 2 | Near Kamakya theatre, Katriguppa ORR |
| 3 | Kuvempu Circle Old Airport road |
| 4 | Marathalli Airport road |
| 5 | Near water tank junction on Airport road |

| | |
|---|---|
| 6 | At Kengeri bus stop Mysore Road |
| 7 | Marath halli village and ORR junction |
| 8 | Near K R puram bus stand |
| 9 | Miller Road near Bhagawan Mahaveer Hospital |
| 10 | Indira Nagar 100 ft Road near New Horizon school |
| 11 | Hennur Main road near st. Charles school |
| 12 | Queens Road near Congress party office |
| 13 | St.German school coles Park |
| 14 | Hosur Main road near Madivala shopping complex |
| 15 | ASC centre at junction of Lower argram road & Victoria road |
| 16 | Infront of satellite bus stand on Mysore road |
| 17 | Little Flower school Hosakerehalli, on ORR road |
| 18 | Near Jayadeva hospital Banneraghatta road |
| 19 | Anil Kumble circle |
| 20 | K H road near Flyover |
| 21 | Infront of Vishweshwaraiah museum Kasturba Road |
| 22 | Near K C General hospital Malleshwaram |
| 23 | Near Manthri Mall, Sampige Road |
| 24 | Mission road near Flyover |
| 25 | Near DIACON Rajaji Nagar |
| 26 | Rajiv Gandhi circle Sheshadripura |
| 27 | Shoppers stop Banneraghtta road |
| 28 | Cubbon park, Kasturba road near near Chinnaswamy stadium( opp. Mahatma Gandhi statue) |
| 29 | Near Vidyavardhka sangha school Rajaji Nagar |

ದಿನಾಂಕ:13.01.2010ರಂದು ಈ ಕೆಳಕಂಡ 12 ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆಗಳನ್ನು ನಿರ್ಮಿಸಲು ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ.

| Sl.No. | Name of the Locations |
|---|---|
| 1. | Christ College |
| 2. | Commercial Street |
| 3. | Devaraj uras Road |
| 4. | Himalaya Theatre |
| 5. | Luskar Road Forum |
| 6. | MS Building |
| 7. | Richmond Road |
| 8. | Shivananda Circle Near Desai Hospital |
| 9. | SMS Railway Junction |

| | |
|---|---|
| 10. | Subramanya Nagar Police Station |
| 11. | webb Junction near MG Road |
| 12. | Rajaram mohan roy road |

ದಿನಾಂಕ:13.01.2010ರಂದು ಸ್ಥಳವನ್ನು ಗುರುತಿಸಿ ಪಾದಚಾರಿ ಮೇಲುಸೇತುವೆಗಳನ್ನು ನಿರ್ಮಿಸಲು ಪ್ರತ್ಯೇಕವಾಗಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ.

ದಿನಾಂಕ: 27.01.2010ರಂದು ರಿಟ್ ಅರ್ಜಿ ಸಂಖ್ಯೆ: 2345/2010ರಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ಒಟ್ಟು 54 ಲಿಫ್ಟ್ ಹೊಂದಿರುವ ಪಾದಚಾರಿ ಮೇಲುಸೇತುವೆ ನಿರ್ಮಾಣ ಕಾಮಗಾರಿಗೆ ತಡೆಯಾಜ್ಞೆಯನ್ನು ನೀಡಿ ಆದೇಶಿಸಿರುತ್ತದೆ.

ಅದರಲ್ಲಿ ದಿನಾಂಕ: 21.10.2010ರಂದು ಮಾನ್ಯ ಉಚ್ಛ ನ್ಯಾಯಾಲಯವು ಈಗಾಗಲೇ ಆರ್ಥಿಕ ಬಿಡ್‌ಗಳನ್ನು ತೆರವುಗೊಳಿಸಿರುವ 13 ಸಂಖ್ಯೆ ಪಾದಚಾರಿ ಮೇಲುಸೇತುವೆಗಳಿಗೆ ತಡೆಯಾಜ್ಞೆ ಹಿಂಪಡೆದಿರುತ್ತದೆ. ಅದರಂತೆ, ದಿನಾಂಕ: 03.12.2010 ರಂದು 13 ಸಂಖ್ಯೆ ಮೇಲುಸೇತುವೆಗಳನ್ನು 20 ವರ್ಷಗಳ ಕಾಲಾವಧಿಗೆ ವಹಿಸಿಕೊಡಲು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಸದರಿ 13 ಸಂಖ್ಯೆ ಪಾದಚಾರಿ ಮೇಲುಸೇತುವೆಗೆ ರೂ. 315,59,717/-ಗಳ ವಾರ್ಷಿಕ ಲೈಸನ್ಸ್ ಶುಲ್ಕ ನಿರೀಕ್ಷಿಸಬಹುದಾಗಿದೆ ಹಾಗೂ ಪೂರ್ಣಗೊಂಡ ನಂತರ ಲಭ್ಯವಾಗುವ ಜಾಹೀರಾತು ವಿಸ್ತೀರ್ಣವನ್ನು ನಿಗದಿಪಡಿಸಿ ಜಾಹೀರಾತು ತೆರಿಗೆ ವಿಧಿಸಲಾಗುವುದು.

ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ತಡೆಯಾಜ್ಞೆ ತೆರವುಗೊಂಡ ನಂತರ 13 ಪಾದಚಾರಿ ಮೇಲುಸೇತುವೆ ಬಿಟ್ಟು ಉಳಿದ 41 ಸ್ಥಳಗಳಲ್ಲಿ ನಿರ್ಮಿಸಲು ಕ್ರಮಕೈಗೊಳ್ಳುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 15-12-2010ರ ಟಿಪ್ಪಣಿಯನ್ನು ಮಾರ್ಪಡಿಸಿ, ಬೆಂಗಳೂರು ಸೌಂದರ್ಯವನ್ನು ಕಾಪಾಡುವ ಮತ್ತು ಸಾರ್ವಜನಿಕರಿಗೆ ಸೌಕರ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ಚರ್ಚಿಸಿ, ಆಯುಕ್ತರ ಟಿಪ್ಪಣಿಯಲ್ಲಿನ ಕ್ರಮ ಸಂಖ್ಯೆ: **5**, 6, 7, 8, 10, ಮತ್ತು 11 ಒಟ್ಟು 6 ಸ್ಥಳಗಳಲ್ಲಿ ಮಾತ್ರ ನಿಯಮಾನುಸಾರ ಪಾದಚಾರಿ ಮೇಲುಸೇತುವೆಗಳನ್ನು 20 ವರ್ಷಗಳ ಕಾಲಾವಧಿಗೆ ಜಾಹೀರಾತು ಹಕ್ಕುಗಳ ಎದುರು ನಿರ್ಮಿಸಲು ಕ್ರಮಕೈಗೊಳ್ಳುವಂತೆ ಹಾಗೂ ಉಳಿಕೆ 7 ಪದಚಾರಿ ಮೇಲು ಸೇತುವೆ ಗಳನ್ನು ಬೆಂಗಳೂರು ಸೌಂದರ್ಯವನ್ನು ಕಾಪಾಡುವ ದೃಷ್ಠಿಯಿಂದ ತಿರಸ್ಕರಿಸಿ ಕರಾರಿನಲ್ಲಿ

ಈ ಕೆಳಕಂಡ ಷರತ್ತುಗಳನ್ನು ಸಹ ಅಳವಡಿಸಿಕೊಳ್ಳುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25-01-2011ರ ನಿರ್ಣಯ.

1) ಮೆಟ್ಟಿಲು ಜೊತೆಗೆ ಲಿಫ್ಟ್ ಅಥವಾ ಎಸ್ಕಲೇಟರ್ ಅಳವಡಿಸುವುದು.
2) ಮೆಟ್ಟಿಲು ಮೇಲೆ ಮೇಲ್ಛಾವಣಿ ಇರಬೇಕು.
3) ಪ್ರತಿ ವರ್ಷ ತಪಾಸಣೆ ಮಾಡಿ ಅದರ ಸ್ಥಿತಿಗತಿಗಳ ಬಗ್ಗೆ ಪಾಲಿಕೆಯ ಪ್ರಧಾನ/ಮುಖ್ಯ ಅಭಿಯಂತರರಿಂದ Stability Certificate ಪಡೆಯತಕ್ಕದ್ದು.
4) ಕರಾರು ಪತ್ರ ಹಾಗೂ ಕಾರ್ಯಾದೇಶ ನೀಡಿದ ದಿನಾಂಕದಿಂದ ಎಲ್ಲಾ ಅನುಮೋದನೆಗಳನ್ನು ಪಡೆದುಕೊಂಡು 120 ದಿನಗಳೊಳಗಾಗಿ (ನಾಲ್ಕು ತಿಂಗಳೊಳಗಾಗಿ) ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ತೆರವುಗೊಳಿಸತಕ್ಕದ್ದು.
5) ಜಾಹೀರಾತು ತೆರಿಗೆ ಹೆಚ್ಚುವರಿಯಾದ ಪಕ್ಷದಲ್ಲಿ ಸದರಿ ಹೆಚ್ಚುವರಿ ತೆರಿಗೆ ಪಾವತಿಸಲು ಸಂಸ್ಥೆಯವರು ಬದ್ಧರಾಗಿರತಕ್ಕದ್ದು.

10 ವರ್ಷಗಳ ನಂತರ ಶೇ.10 ರಷ್ಟು ನೆಲ ಬಾಡಿಗೆಯನ್ನು ಹೆಚ್ಚು ಮಾಡುವ ಷರತ್ತಿಗೆ ಸಂಸ್ಥೆಯವರು ಬದ್ಧರಾಗಿರತಕ್ಕದ್ದು.

**ನಿರ್ಣಯ :- ಸಂಬಂದಪಟ್ಟ ಅಧಿಕಾರಿಗಳೊಂದಿಗೆ ಸ್ಥಳಪರಿಶೀಲಿಸಲಾಯಿತು, ದಿನಾಂಕ : 15-12-2010ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ತೀರ್ಮಾನಿಸಿರುವ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25-01-2011 ರ ನಿರ್ಣಯವನ್ನು ಒಪ್ಪಿದೆ.**

## 28]. ವಿಷಯದ ಸಂಖ್ಯೆ :–ತೆಆಸ್ಥಾಸ/268/2010–11

ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(4)ಪಿಆರ್/112/10–11, ದಿನಾಂಕ:9–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:158 ರಲ್ಲಿನ 50 ಅಡಿ ರಸ್ತೆ, ಗಿರಿನಗರದಲ್ಲಿರುವ ಪಾಲಿಕೆಯ ಸಮುದಾಯ ಭವನದ ಆವರಣದಲ್ಲಿನ ಖಾಲಿಜಾಗದಲ್ಲಿ 10x10 ಅಡಿಗಳ ಜಾಗವನ್ನು ನಂದಿನಿ ಉತ್ಪನ್ನಗಳ ಮಾರಾಟ ಮಳಿಗೆ ಸ್ಥಾಪಿಸಲು ಅನುಮತಿ ನೀಡುವಂತೆ, ಶ್ರೀಮತಿ.ಎಂ.ಪ್ರಮೀಳಾ ರವರು ಕೋರಿರುತ್ತಾರೆ.

ಅರ್ಜಿದಾರರು ಸಂಚಾರಿ ಪೊಲೀಸ್ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದಿದ್ದು, ಪಾಲಿಕೆಯ ಸಮುದಾಯ ಭವನದ ಒಳಗಡೆ 10X10 ಅಡಿಗಳ ಸ್ಥಳವಕಾಶ ಕೋರಿದ್ದು, 5 ವರ್ಷಗಳ ಅವಧಿಗೆ ಸ್ಥಳವನ್ನು ಗುತ್ತಿಗೆ ನೀಡಬಹುದಾಗಿ, ಸ್ಥಾಯಿಸಮಿತಿಗಳ ಮುಂದೆ ಟಿಪ್ಪಣಿ ಮಂಡಿಸಲು ಅಭಿಪ್ರಾಯಿಸಲಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲ–176ರ (6) ಹಾಗೂ (ಬಿ)II ರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ಉದ್ದೇಶಕ್ಕೆ ರೂ.2,100/–ಗಳಿದ್ದು, ಅರ್ಜಿದಾರರುಗಳು ಕೋರಿರುವ 10X10 ಅಡಿಗಳ ಜಾಗವು 100 ಚ.ಅಡಿಗಳಾಗುತ್ತದೆ. ಇದರಂತೆ 100X2100 = 2,10,000/– ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ ರೂ.21,000/– ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ ರೂ.1750/– ಗಳಾಗುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಶ್ರೀಮತಿ ಎಂ.ಪ್ರಮೀಳಾರವರಿಗೆ ಹಾಲಿನ ಉತ್ಪನ್ನ ಮಾರಾಟ ಮಳಿಗೆಗೆ ಮುಂದಿನ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 09–12–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 22–02–2011ರ ನಿರ್ಣಯ.

**ನಿರ್ಣಯ :–** **ಸಂಬಂದಪಟ್ಟ ಅಧಿಕಾರಿಗಳೊಂದಿಗೆ ಸ್ಥಳಪರಿಶೀಲಿಸಲಾಯಿತು, ದಿನಾಂಕ : 09–12–2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 22–02–2011 ರ ನಿರ್ಣಯವನ್ನು ಒಪ್ಪಿದೆ.**

## 29]. ವಿಷಯದ ಸಂಖ್ಯೆ :–ತೆಆಸ್ಥಾಸ/269/2010–11

ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(4)ಪಿಆರ್/87/09–10, ದಿನಾಂಕ:21–12–2010 ರಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜೆ.ಸಿ.ರಸ್ತೆಯಲ್ಲಿರುವ ದೇನಾ ಬ್ಯಾಂಕ್ ಬಳಿ ಇರುವ ಸಮಗ್ರ ಶಿಶು ಅಭಿವೃದ್ಧಿ ಇಲಾಖೆ ಬಳಿ ಜೆರಾಕ್ಸ್ ಅಂಗಡಿ ನಡೆಸಲು ಶ್ರೀಮತಿ ಅನುಪಮ ರವರಿಗೆ 10X10 ಅಡಿಗಳ ಜಾಗವನ್ನು ಮಾಸಿಕ ರೂ.2000/–ಗಳ ಗುತ್ತಿಗೆ ಹಣದ ಆಧಾರದ ಮೇಲೆ ದಿನಾಂಕ: 22–12–2006 ರಿಂದ 21–12–2009 ರವರೆಗೆ 3 ವರ್ಷಗಳಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು ಮುಕ್ತಾಯವಾಗಿರುತ್ತದೆ. ಅರ್ಜಿದಾರರು ಸದರಿ ಜಾಗದ ಗುತ್ತಿಗೆಯ ಅವಧಿಯನ್ನು ಮುಂದಿನ 5 ವರ್ಷಗಳ ಅವಧಿಗೆ ನವೀಕರಿಸಲು ಕೋರಿರುತ್ತಾರೆ.

ಸ್ಥಳ ಪರಿಶೀಲನೆಯಂತೆ, ಅರ್ಜಿದಾರರು ನಡೆಸುತ್ತಿರುವ ಜಾಗವು ಜೆ.ಸಿ.ರಸ್ತೆಯಲ್ಲಿರುವ ದೇನಾ ಬ್ಯಾಂಕ್ ಬಳಿ ಇರುವ ಸಮಗ್ರ ಶಿಶು ಅಭಿವೃದ್ಧಿ ಇಲಾಖೆ ಬಳಿಯಲ್ಲಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗುವುದಿಲ್ಲವಾದ ಕಾರಣ ಹಾಗೂ ಅರ್ಜಿದಾರರು ಅಂಗವಿಕಲರಾಗಿರುವುದರಿಂದ, ಗುತ್ತಿಗೆಯನ್ನು ನಿಯಮಾನುಸಾರ ಮುಂದುವರಿಸಲು ಅಭಿಪ್ರಾಯಿಸಲಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)II ರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು. ಅಂಗವಿಕಲರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿ, ಪಾಲಿಕೆ ಸಭೆಗೆ ಶಿಫಾರಸ್ಸು ಮಾಡುವ ಪ್ರಸ್ತಾವನೆಯನ್ನು ಕಳುಹಿಸುವುದಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ಸರ್ಕಾರದ ಮಾರ್ಗಸೂಚಿಯ ದಿನಾಂಕ:17-4-2007 ರಂತೆ ಚ.ಅ. ಒಂದಕ್ಕೆ ವಾಣಿಜ್ಯಕ್ಕೆ 6440/- ರೂ.ಗಳಾಗಲಿದ್ದು, ಅರ್ಜಿದಾರರಿಗೆ ನೀಡಲು ಉದ್ದೇಶಿಸಿರುವ ಸ್ವತ್ತಿನ ಅಳತೆ 10X10=100X6440 = 6,44,000/- ರೂ.ಗಳಾಗುತ್ತದೆ. ಮಾರುಕಟ್ಟೆ ಬೆಲೆಯ ಕನಿಷ್ಠ ಶೇ.10 ರಂತೆ ಪರಿಗಣಿಸಲಾಗಿ, ವಾರ್ಷಿಕ ಗುತ್ತಿಗೆ 64,400/- ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣವು ರೂ.5370/- ಗಳಾಗುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಶ್ರೀಮತಿ.ಅನುಪಮ ಅಂಗವಿಕಲರು ರವರಿಗೆ ಮುಂದಿನ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 21-12-2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 22-02-2011ರ ನಿರ್ಣಯ.

**ನಿರ್ಣಯ :- ಸಂಬಂದಪಟ್ಟ ಅಧಿಕಾರಿಗಳೊಂದಿಗೆ ಸ್ಥಳಪರಿಶೀಲಿಸಲಾಯಿತು, ದಿ:21-12-2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಅಭಿವೃದ್ದಿ ಸ್ಥಾಯಿ ಸಮಿತಿಯ ದಿನಾಂಕ:22-02-2011 ರ ನಿರ್ಣಯವನ್ನು ಒಪ್ಪಿದೆ.**

## 30]. ವಿಷಯದ ಸಂಖ್ಯೆ :-ತೆಆಸ್ಥಾಸ/293/2010-11

ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(2)/ಪಿ.ಆರ್/324/10-11, ದಿನಾಂಕ:10-03-2011 ರಲ್ಲಿ ವಿವರಿಸಿರುವಂತೆ,ವಾರ್ಡ್ ಸಂಖ್ಯೆ-80 (91) ರಲ್ಲಿ ನಂ.143 ಧರ್ಮರಾಜ ಕೊಯಿಲ್ ಸ್ಟ್ರೀಟ್, ಬೆಂಗಳೂರು ಇಲ್ಲಿ ಏಕಾಂಬರೇಶ್ವರ ಧರ್ಮರಾಜ ದೇವಸ್ಥಾನ ಟ್ರಸ್ಟ್ ರವರಿಗೆ 6550 ಚದರ ಅಡಿಗಳ ಜಾಗವನ್ನು 99 ವರ್ಷಗಳ ಅವಧಿಗೆ 15-10-1976 ರಿಂದ 14-10-2075ರ ವರೆಗೆ ವಾರ್ಷಿಕ 11 ರೂಪಾಯಿಗಳ ಗುತ್ತಿಗೆ ಆಧಾರದ ಮೇಲೆ ಮಂಜೂರಾತಿ ನೀಡಲಾಗಿರುತ್ತದೆ. ಈ ಸಂಸ್ಥೆಯವರು ಸದರಿ ಸ್ವತ್ತನ್ನು ಕಲ್ಯಾಣ ಮಂಟಪ ಉದ್ದೇಶದೊಂದಿಗೆ ನೆಲ ಅಂತಸ್ತಿನಲ್ಲಿ 1800 ಚದರ ಅಡಿಗಳಷ್ಟು ಬಟ್ಟೆ ಅಂಗಡಿಗಳಿಗಾಗಿ ಮತ್ತು 1ನೇ ಅಂತಸ್ತಿನಲ್ಲಿ 2000 ಚದರ ಅಡಿಗಳಷ್ಟು ಕಟ್ಟಡವನ್ನು ಇಂಡಿಯನ್ ಬ್ಯಾಂಕ್‌ಗೆ ಬಾಡಿಗೆಗೆ ನೀಡಿರುವುದು ಸ್ಥಳ ಪರಿಶೀಲನೆಯಿಂದ ತಿಳಿದು ಬಂದಿರುತ್ತದೆ.

ಸಂಸ್ಥೆಯವರು ತಮ್ಮ ಹೇಳಿಕೆಯಲ್ಲಿ ಗುತ್ತಿಗೆ ಪಡೆದ ಉದ್ದೇಶಕ್ಕೆ ಕಲ್ಯಾಣ ಮಂಟಪ ನಿರ್ಮಿಸಲು ಆರ್ಥಿಕವಾಗಿ ಸಾಧ್ಯವಾಗದೇ ಇದ್ದ ಅನಿವಾರ್ಯ ಸನ್ನಿವೇಶದಲ್ಲಿ ಸ್ಥಳೀಯ ಸಮುದಾಯದ ವ್ಯಾಪಾರಸ್ಥರಿಂದ ಮುಂಗಡ ಧನಸಹಾಯವನ್ನು ಪಡೆದು ಈ ಮುಂಗಡ ಹಣವನ್ನು ಅಂಗಡಿಯ ಬಾಡಿಗೆ ರೂಪದಲ್ಲಿ ಭರಿಸುವ ಷರತ್ತಿನ ಮೇಲೆ ಕಟ್ಟಡದ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗಿರುತ್ತದೆ. ಇದರಿಂದ ಬರುವ ಬಾಡಿಗೆಯಿಂದ ದೇವಸ್ಥಾನದ ದಿನನಿತ್ಯ ಹಾಗೂ ಕಾಲಕಾಲಕ್ಕೆ ನಡೆಯುವ ಪರಂಪರಾಗತ ಧಾರ್ಮಿಕ ಚಟುವಟಿಕೆಗಳನ್ನು ನಡೆಸುವುದಲ್ಲದೇ ಸಮುದಾಯದ ಆರ್ಥಿಕವಾಗಿ ಹಿಂದುಳಿದವರ ಮಕ್ಕಳ ಶೈಕ್ಷಣಿಕ ಉದ್ದೇಶಗಳಿಗೆ ಹಾಗೂ ವೈದ್ಯಕೀಯ ಸಹಾಯ, ವಿಧವೆಯರು, ವೃದ್ಧರು ಮತ್ತು ಪ್ರಕೃತಿ ವಿಕೋಪದಿಂದ ಆಗುವ ಅನಾಹುತಗಳಿಗೆ ಸಹಾಯಕ್ಕಾಗಿ ಬಳಸಲಾಗುತ್ತಿದೆ ಎಂದು ತಿಳಿಸಿರುತ್ತಾರೆ. 2008-09ನೇ ಸಾಲಿನಲ್ಲಿ ರೂ.1,52,963/-ಗಳು ಮತ್ತು 2009-10ನೇ ಸಾಲಿನಲ್ಲಿ ರೂ.1,61,011/-ಗಳನ್ನು ಪಾಲಿಕೆಗೆ ಕಂದಾಯ ಇತ್ಯಾದಿ ಸಂದಾಯ ಮಾಡಲಾಗಿರುತ್ತದೆ.

ವಾರ್ಷಿಕವಾಗಿ ಈ ಸಂಸ್ಥೆಗೆ 5.70 ಲಕ್ಷ ಆದಾಯ ಬರುತ್ತಿದ್ದು ನಿರ್ವಹಣೆ ಮತ್ತು ಇತರೆ ಖರ್ಚು ಜಾತ 2.90 ಲಕ್ಷ ರೂಗಳನ್ನು ಸಮುದಾಯದ ರಚನಾತ್ಮಕ ಕಾರ್ಯಗಳಿಗೆ ಬಳಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಾರ್ಷಿಕ ಗುತ್ತಿಗೆ ಮೊತ್ತ 11.00/-ರೂಪಾಯಿಗೆ ಬದಲಾಗಿ 30 ಸಾವಿರ ರೂಪಾಯಿಗಳನ್ನಾಗಿ ತಿದ್ದುಪಡಿಗೆ ಮಂಜೂರಾತಿ ನೀಡಬೇಕೆಂದು ಕೋರಿರುತ್ತಾರೆ. ಸ್ಥಳೀಯ ನಗರ ಸಭಾ ಸದಸ್ಯರು ದಿನಾಂಕ:22-02-2011ರಂದು ನೀಡಿರುವ ಪತ್ರದಲ್ಲಿ ಸಂಸ್ಥೆಯು ಆದಾಯ ಹಾಗೂ ಸಮುದಾಯದ ರಚನಾತ್ಮಕ ಕಾರ್ಯಗಳನ್ನು ನಿರ್ವಹಿಸಲು ವಾಣಿಜ್ಯ ಉದ್ದೇಶಗಳಿಗೆ ಬಳಸಿಕೊಂಡಿರುವ ಕಾರ್ಯವನ್ನು ಸಕ್ರಮಗೊಳಿಸಿ ಅವರ ಪ್ರಸ್ತಾವನೆಗೆ ಮಂಜೂರಾತಿ ನೀಡಿ ಗುತ್ತಿಗೆ ಮೊತ್ತವನ್ನು ಪರಿಷ್ಕರಿಸಲು ಕೋರಿರುತ್ತಾರೆ. ಸ್ಥಳೀಯ ಅಧಿಕಾರಿಗಳು ಸಹಾ ಈ ಪ್ರಸ್ತಾವನೆಗೆ ಅಗತ್ಯ ಆದೇಶ ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ವಾಣಿಜ್ಯ ಉದ್ದೇಶಕ್ಕೆ ಬಳಸಲಾಗಿರುವ ಪ್ರದೇಶ 3800 ಚದರ ಅಡಿಗಳಿಗೆ ಪರಿಷ್ಕೃತ ದರ ವಿಧಿಸುವುದು ಅವಶ್ಯಕವಾಗಿರುತ್ತದೆ. ಪಾಲಿಕೆಯ ಸುತ್ತೋಲೆ 01-03-2002ರ ಅನುಸಾರ ಮಾರುಕಟ್ಟೆ ಬೆಲೆಯ 10% ರಷ್ಟು ಗುತ್ತಿಗೆ ಬೆಲೆಯನ್ನು

ನಿಗಧಿಪಡಿಸಲು ಅವಕಾಶವಿದ್ದು, ಶೇ 100% ರಷ್ಟು ಸಮಾಜ ಸೇವೆಯಲ್ಲಿರುವ ಸಂಸ್ಥೆಗಳಿಗೆ ರಿಯಾಯಿತಿ ನೀಡುವ ಅವಕಾಶವಿರುತ್ತದೆ.

ಈ ದೇವಸ್ಥಾನದ ಕಲ್ಯಾಣ ಮಂಟಪ ಕಟ್ಟಡವು ಶಿವಾಜಿನಗರದ ಧರ್ಮರಾಜ್ ಕೊಯಿಲ್ ರಸ್ತೆಯಲ್ಲಿ ಇದ್ದು 2007ನೇ ಸಾಲಿನ ಸರ್ಕಾರಿ ಆದೇಶದಂತೆ ಪ್ರತಿ ಚದರ ಅಡಿಗೆ ರೂ. 2000/–ಗಳ ಮಾರುಕಟ್ಟೆ ಬೆಲೆ ಇದ್ದು, ವಾಣಿಜ್ಯ ಉದ್ದೇಶ ಮತ್ತು ಮೂಲೆ ನಿವೇಶನ ಇರುವುದರಿಂದ ಶೇ 40+10 ಹೆಚ್ಚಿಸುವ ಅವಕಾಶವಿದ್ದು, ಇದರಂತೆ 3800 ಚದರ ಅಡಿಗೆ ಪ್ರದೇಶಕ್ಕೆ ವಾರ್ಷಿಕ ಬಾಡಿಗೆ ರೂಪಾಯಿ 1,14,00000 ಹಾಗೂ ಮಾಹೆಯಾನ ರೂ.95000 ಆಗುವುದು.

ಸಂಸ್ಥೆಯು ಸಮುದಾಯದ ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬಗಳಿಗೆ ನೆರವಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸ್ಥಳೀಯ ಪಾಲಿಕೆ ಸದಸ್ಯರು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಮೂಲ ಗುತ್ತಿಗೆ ಜಾಗಕ್ಕೆ ಇರುವ ದರದೊಂದಿಗೆ ವಾಣಿಜ್ಯ ಉದ್ದೇಶಕ್ಕೆ ಬಳಸಲಾಗಿರುವ 3800 ಚದರ ಅಡಿ ಜಾಗಕ್ಕೆ ಸೂಕ್ತ ದರ ಪರಿಷ್ಕರಣೆ ಮಾಡಿ ಸಕ್ರಮಗೊಳಿಸಲು ಈ ಕೆಳಕಂಡ ಷರತ್ತು ವಿಧಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಬಿಬಿಎಂಪಿ ಸಭೆಯ ನಿರ್ಣಯದೊಂದಿಗೆ ಸರ್ಕಾರದ ಅನುಮೋದನೆ ಪಡೆಯಬೇಕಾಗುತ್ತದೆ.

"ಗುತ್ತಿಗೆ ಸಂಸ್ಥೆಯ ಆಡಳಿತ ಮಂಡಳಿಯ ಸಭೆಗಳಲ್ಲಿ ಸ್ಥಳೀಯ ಪಾಲಿಕೆಯ ಸದಸ್ಯರು ಮತ್ತು ಸಹ ಕಂದಾಯ ಅಧಿಕಾರಿ ರವರನ್ನು ವಿಶೇಷ ಆಹ್ವಾನಿತರನ್ನಾಗಿ ಕರೆಯತಕ್ಕದು, ಯಾವುದೇ ಕಾರಣಕ್ಕೂ ಗುತ್ತಿಗೆ ನೀಡಲಾಗಿರುವ ಉದ್ದೇಶ ಹಾಗೂ ಅನುಮತಿಸಲಾಗಿರುವ ವಾಣಿಜ್ಯ ಉದ್ದೇಶಗಳಿಗೆ ಮಾರ್ಪಾಡಿಸಬಾರದು ಹಾಗೂ ಸಂಸ್ಥೆಗೆ ಬರುವ ಆದಾಯವನ್ನು ಸಂಪೂರ್ಣವಾಗಿ ದೇವಸ್ಥಾನ ಮತ್ತು ಕಲ್ಯಾಣ ಮಂಟಪದ ನಿರ್ವಹಣೆ, ಅಭಿವೃದ್ಧಿ ಹಾಗೂ ಧಾರ್ಮಿಕ ಚಟುವಟಿಕೆಗಳು ಮತ್ತು ಅರ್ಹ ಸಮುದಾಯದ ಶೈಕ್ಷಣಿಕ, ಸಾಮಾಜಿಕ ಚಟುವಟಿಕೆಗಳಿಗೆ ಮಾತ್ರ ಬಳಸತಕ್ಕದು". ಎಲ್ಲಾ ನಿಬಂಧನೆಗಳನ್ನು ವಿಧಿಸಬಹುದಾಗಿದೆ. ಆದ್ದರಿಂದ, ಪರಿಷ್ಕೃತ ದರ ನಿಗಧಿಪಡಿಸಿ ಸಕ್ರಮಗೊಳಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆ ಮುಂದೆ ಟಿಪ್ಪಣಿ ಮಂಡಿಸಿದೆ.

**ನಿರ್ಣಯ :– ಸಂಬಂದಪಟ್ಟ ಅಧಿಕಾರಿಗಳೊಂದಿಗೆ ಸ್ಥಳಪರಿಶೀಲಿಸಲಾಯಿತು, ದಿನಾಂಕ : 10–03–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

**(ಪಿ.ಎನ್.ಸದಾಶಿವ)**
ಅಧ್ಯಕ್ಷರು
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ